ಶ್ರೀ ಶೃಂಗೇರೀಸ್ವಾಮಿಗಳವರು ವಿಷ್ಣುದೀಕ್ಷಾಬದ್ಧರಲ್ಲವಾಗಿ, ವಿಷ್ಣುದೀಕ್ಷಾಬದ್ಧರಾದ ವೈಷ್ಣವರಿಗೂ ಪ್ರವೇಶಿಸುವದಕ್ಕೆ ಶಾಸ್ತ್ರಮಾರ್ಗದಿಂದ ಶಕ್ತಿಇಲ್ಲವಾದ ಗರ್ಭಗೃಹಕ್ಕೆ ಪದ್ಧತಿಗೆ ವಿರೋಧವಾಗಿ ಪ್ರವೇಶಿಸಿದ್ದು ಮುಂದೆ ಉದಹರಿಸಿರುವ ಅನೇಕಶಾಸ್ತ್ರಗಳಿಂದ ಬಾಧಕಗಳೆಂದು ಕಂಡುಬರುವದ್ದರಿಂದ ಅವೈಷ್ಣವರು ಪ್ರವೇಶಿಸುವದಕ್ಕೆ ಸಾಧ

ಕಗಳಾದ ವಚನಗಳೇನಾದರೂ ಇದ್ದಲ್ಲಿ ಅವುಗಳನ್ನು ಪ್ರಾರ್ಥಿಸಬೇಕೆಂದು ಮ॥ರಾ॥ಕೆ. ಗರುಡಾಚಾರ್ಯರು ಶ್ರೀಮ ಕೃಷ್ಣಮಾಚಾರ್ಯರು ಮ ॥ ರಾ ॥ ಕನ್ನಡಸೂಲ್ ಹೆಡ್ ಗೋವಿಂದರಾಯರು ಸೂಚಿಸಿದ್ದನ್ನು ಸಕಲರೂ ಅನುಮೋದಿಸಿದರು.

ಇದಕ್ಕೆ ವಿರೋಧಾಭಿಪ್ರಾಯಪಡತಕ್ಕವರು ಯಾರೂ ಇಲ್ಲ.

ಶಾಸ್ತ್ರವನ್ನನುಸರಿಸಿ ದೇವರಿಗೂ ದೇವಸ್ಥಾನಕ್ಕೂ ಅಶುಚಿ ಯುಂಟಾಗಿರುವದ್ದರಿಂದ ದೇವಸ್ಥಾನಕ್ಕೆ ಸಂಪ್ರೋಕ್ಷಣೆ ಆಗಬೇಕೆಂದು ವೇ॥ಶ್ರೀನಿವಾಸಮೂರ್ತ್ಯಾಚಾರ್ಯರು ಸೂಚಿಸಿದರು. ಇದನ್ನು ಉಡ ನರಹರಿಯಾಚಾರ್ಯರು ಅನುಮೋದಿಸಿದರು. ಸಕಲರೂ ಒಪ್ಪಿದರು.

ಇದಕ್ಕೆ ಭಿನ್ನಾಭಿಪ್ರಾಯಪಡತಕ್ಕವರು ಯಾರೂ ಇಲ್ಲ.

ಈ ರೀತ್ಯಾ ಸಂಪ್ರೋಕ್ಷಣೆ ಆಗುವವರಿಗೂ ದೇವ ಹೋಗಿ ವೈಷ್ಣವಮತಪ್ರವರ್ತಕರಾದ ಶ್ರೀವೈಷ್ಣವರೂ ಮ ಧ್ವರೂ ತೀರ್ಥಪ್ರಸಾದವಂ ಸ್ವೀಕರಿಸಕೂಡದೆಂದು ಶ್ರೀಮಾ ವಿಂದಸ್ವಾಮ್ಯಯ್ಯಂಗಾರ್ಯರು ಸೂಚಿಸಿದರು. ಇದನ್ನು ಶ್ರೀ ವ್ಯಾಸ ಮಠದ ಪುಟ್ಟಾಚಾರ್ಯರೂ ಶ್ರೀನಿವಾಸಮೂರ್ತ್ಯಾಚಾರ್ಯರು ಅನು ಮೋದಿಸಿದರು. ಸಕಲರೂ ಒಪ್ಪಿದರು.

ಇದಕ್ಕೆ ವಿರೋಧಾಭಿಪ್ರಾಯಪಡತಕ್ಕವರುಂಟೇ ? ಎಂದು ಕೇಳಿ ದಾಗ ವಚನವನ್ನು ಕೊಟ್ಟರೆ ಕಟ್ಟಕಟ್ಟಿಗೆ ನಾವು ಬದ್ಧರಾಗಬಹುದೆಂದು ಮ॥ರಾ॥ಪ್ಲೀಡರ್ ನಾರಸಿಂಹಯ್ಯಂಗಾರ್ಯರು ವಿರೋಧಾಭಿಪ್ರಾಯವನ್ನು ಹೇಳಿದ್ದಕ್ಕೆ ಯಾರೂ ಅನುಮೋದಿಸಲಿಲ್ಲ.

ಈ ಪ್ರೊಸೀಡಿಂಗ್ಸಿನ ನಕಲನ್ನು ಪ್ರಿಂಟುಮಾಡಿಸಿ ಎಲ್ಲಾ ವರ್ತಮಾನ ಪತ್ರಿಕೆ ಗಳಿಗೂ ಮೈಸೂರ್ ಗವರ್ನ್ಮೆಂಟ್ ಮುಖೇನ ರೆಸಿಡೆಂಟರವರಿಗೂ

ಕ್ರವೆಂಬ ಕೌನ್ಸಲರಯವರಿಗೂ ಶ್ರೀಮಾನ್ ಮಹಾರಾಣಿ ಸನ್ನಿಧಾನದವರೀಜಂಟರವರಿಗೂ, ಶ್ರೀಪರಕಾಲಸ್ವಾಮಿಗಳ ಶ್ರೀಶೃಂಗೇರೀಸ್ವಾಮಿಗಳವರಿಗೂ, ಶ್ರೀಉತ್ತರಾಜಿ ಶ್ರೀವ್ಯಾಸರಾಯಶ್ರೀರಾಘವೇಂದ್ರಸ್ವಾಮಿಗಳಮಠಗಳೇಆದಿಯಾಗಿ ಎಲ್ಲಾ ಮಠಗಳಿಗೂ ಎಲ್ಲಾ ದಿವ್ಯದೇಶಗಳಿಗೂ ಕಳುಹಿಸಿಕೊಡಬೇಕೆಂದು ಶ್ರೀಮಾನ್ ಗೋವಿಂದಸ್ವಾಮಿಗಳವರು ಮತ್ತು ಮ || ರಾ || ಪ್ಲೀಡರ್ ನಾರಣೈಯ್ಯಂಗಾರ್ಯರು ಪ್ರಪೋಜ್ ಮಾಡಿದ್ದನ್ನು ಸಕಲರೂ ಅನುಮೋದಿಸಿದರು.

ಮ||ರಾ|| ಧರ್ಮದರ್ಶಿ ಶಿಂಗ್ರಾಚಾರ್ಯರು ಸಭೆಗೆ ದಯಮಾಡಿಸಿ ಒಬ್ಬ ರ್ಶಿಗಳು ಬರೆದಿರುವ ರಿಪ್ರೋರ್ಟಿಗೆ ತಮ್ಮ ಸಮ್ಮತಿಯನ್ನಾಗಲಿ ಅಸ ಟನ್ನಾಗಲಿ ತಿಳಿಸಬೇಕೆಂದು ಪ್ರಾರ್ಥಿಸಿದ್ದಕ್ಕೆ ಯಾವದಕ್ಕೂ ಒಪ್ಪ ರ್ವ ವಿಷಯವಲ್ಲಿ ಅನುಮೋದಿಸಿ ಏನೋವಂದು ಕಲಹವನ್ನು ಯಾ ಸಭಿಕರೊಡನೆ ಎತ್ತಿ ಸಭೆಯನ್ನುಲ್ಲಂಘಿಸಿ ದಯಮಾಡಿಸಿದರು. ದ ಸಭಿಕರು ಪ್ರಸಿಡೆಂಟರ ಆಜ್ಞಾನುಸಾರವಾಗಿ ಮೂರುಸಾರಿ ನ ಸ್ಯ ಬರುವದಿಲ್ಲವೆಂದು ಹೇಳಿದ ಅಂಶ ಬಹು ವಿಷಾದಕರವಾಗಿದೆ || ರಾ || ಪ್ಲೀಡರ್ ನಾರಣೈಯ್ಯಂಗಾರ್ಯರು ಸೂಚಿಸಿದ್ದನ್ನು ೂ ಅನುಮೋದಿಸಿದರು.

ಇಂಥವರು ಧರ್ಮದರ್ಶಿಗಳಾಗಿರುವದು ಸರಿಯೂಗಿಲ್ಲವೆಂದು ಅದಕ್ಕಾಗಿ ಸರ್ಕಾರದವರು ಪರ್ಯಾಲೋಚಿಸಿ ಇವರನ್ನು ಧರ್ಮದರ್ಶಿ ಪದವಿಯಿಂದ ನಿವೃತ್ತಿಮಾಡಬೇಕೆಂದು ಮ || ರಾ || ಕೆ. ಗರುಡಾಚಾರ್ಯರು ಸೂಚಿಸಿದ್ದನ್ನು ಮ||ರಾ||ಮಾಪ್ರಸ್ ಎಸ್. ಎ. ಶಿಂಗ್ರಾಚಾರ್ಯರು ಅನುಮೋದಿಸಿದರು. ಸಕಲರೂ ಒಪ್ಪಿದರು.

ಇದಕ್ಕೆ ವಿರೋಧಾಭಿಪ್ರಾಯಪಡತಕ್ಕವರುಯಾರೂಇಲ್ಲ.

ಈನಮ್ಮ ಸಭೆಯು ಮೈಸೂರ್ ಅಖಿಲಮಹಾಜನಸಭೆಗೆ ಉಪಶಾಖೆಯೂಗಿರುವದು ಸರಿಯಾಗಿದೆಎಂದು ಶ್ರೀಮಾನ್ ಗೋವಿಂದಸ್ವಾಮ್ಯಯ್ಯಂಗಾರ್ಯರು ಸೂಚಿಸಿದರು. ಇದನ್ನು ಸಕಲರೂ ಅನುಮೋದಿಸಿದರು.

ಶ್ರೀಪರಕಾಲಮಠದ ಗುಮಾಸ್ತರು ಶ್ರೀಪರ್ಹ
ಹಾಚಾರ್ಯರು ಮೊದಲು ಮಾಡಿದ ಅಖಿಲಮಹಾಜನಸಭೆಗೆ ದ...
ಅವರ ಏರ್ಪಾಡುಗಳಿಗೆಲ್ಲಾ ಬದ್ಧರಾಗಿ ನಡೆಯುವದಾಗಿ ವಾಗ್ದಾನ ಮಾ
ಅಂಥಾ ಸಭೆಯ ಆಜ್ಞೋಲ್ಲಂಘನೆಯಂಮಾಡಿ ತೀರ್ಥಪ್ರಸಾದವಂಸ್ವೀಕ
ರಿಸಿ ಎಲ್ಲಾ ವೈಷ್ಣವರಿಗೂ ಶ್ರೀಪರಕಾಲಮಠಕ್ಕೂ ಅಪಮಾನ ಮಾಡಿ
ದ್ದರಿಂದಲೂ ಈದಿವಸದಸಭೆಗೆ ಪ್ರಾರ್ಥಿಸಿದಾಗ್ಯೂ ಬರುವದಿಲ್ಲವೆಂದು
ಧಿಕ್ಕಾರಮಾಡಿದ್ದರಿಂದಲೂ ಅವರವಿಷಯವಾಗಿ ಶ್ರೀಪರಕಾಲಸ್ವಾಮಿಗ
ಳವರಿಗೆ ಅಲಾಹಿದಾ ಬರೆಯತಕ್ಕದ್ದು ಸಾಧುವೆಂದು ಮ|| ರಾ|| ಪ್ಲೀಡ
ನಾರಣಸ್ವಾಮ್ಯಯ್ಯಂಗಾರ್ಯರು ಸೂಚಿಸಿದ್ದನ್ನು ಸಕಲರೂ ಅನುಮೋ
ಸಿದರು.

ಈ ಸಭೆಗೆ ಕಾರ್ಯದರ್ಶಿಗಳು ಬೇಕಾಗಿರುವದ್ದರಿಂದ
ಕೆ. ಗರುಡಾಚಾರ್ಯರು ಮ||ರಾ||ಜಿ. ನರಸಿಂಹ್ಯಯ್ಯಂಗಾರ್ಯರ
ರ್ಶಿಗಳಾಗಿ ಗೊತ್ತುಮಾಡಬೇಕೆಂದು ಮ||ರಾ|| ಪ್ಲೀಡರ್ ನಾರ...
ಯ್ಯಂಗಾರ್ಯರು ಸೂಚಿಸಿದ್ದನ್ನು ಮ||ರಾ||ಪ್ಲೀಡರ್ ನರಸಿಂಹ್ಯ
ರ್ಯರು ಅನುಮೋದಿಸಿದರು.

ಈಸಭೆಗೆ ದಯಮಾಡಿಸಿ ಸಭಾನಾಯಕ ಪದವಿಮನ್ನಲಂಕ
ಕಾರ್ಯನಿರ್ವಾಹಮಂಮಾಡಿದ್ದಕ್ಕಾಗಿ ಸಭಾನಾಯಕರಿಗೂ ಸಾವಧಾನಚಿತ್ತ
ದಿಂ ಕಾರ್ಯಗೌರವಗಳಂಬಿಟ್ಟು ರಾತ್ರಿ ೧೦ ಘಂಟೆವರಿಗೂ ಇದ್ದ ಸಕಲ
ಸಭಿಕರಿಗೂ ಅಭಿವಂದಿಸಬೇಕೆಂದು ಮ|| ರಾ || ನಾರಣ್ಯಯ್ಯಂಗಾರ್ಯರು
ಸೂಚಿಸಿದ್ದನ್ನು ಸಕಲರೂ ಅನುಮೋದಿಸಿದರು.

ಸಭೆಯು ಕೋಲಾಹಲಧ್ವನಿಯೊಡನೆ ಬರಖಾಸ್ತಾಯಿತು.

ಬಿ. ಸಿ. ಶ್ರೀನಿವಾಸ್ಯಯ್ಯಂಗಾರ್

ಪ್ರೆಸಿಡೆಂಟ್.

ದಸ್ತಾ.ನಂ. ೧

ಅಖಿಲವೈಷ್ಣವಮಹಾಜನಸಭಾ ಮೈಸೂರ್.

೧೯೦೯ನೇ ಇಸವಿ ಜುಲೈತಾರೀಖು ೩೦ನೇಭಾನುವಾರ ಸಾಯಂಕಾಲ ೭ ಘಂಟೆಗೆ ಸುಬ್ರಾಯನಕೆರೆ ಬಳಿ ಕಾಲೇಜ್‌ರಸ್ತೆಯಲ್ಲಿಇರುವ ಶ್ರೀಮಾನ್ ಪುಸ್ತಕಂ ತಿರುಮಲಾಚಾರ್ಯರ ಗೃಹವಾದ ಕಮಲಾವಿಲಾಸ ಭವನದಲ್ಲಿ ಸಭೆಸೇರಿನಡೆಸಿದ ಪ್ರೊಸೀಡಿಂಗ್ಸ್ ಯಾನೆ ಸಮಾಖ್ಯೆ.

ಈಮಹಾಸಭೆಗೆ ದಯಮಾಡಿಸಿದ್ದ ಮೆಂಬರುಗಳಸಂಖ್ಯೆ ೬೩೪

ಈಸಭೆಗೆ ವೈದಿಕಶಿರೋಮಣಿಗಳಾದ ವೇದಾಂತವಿದ್ಯಾವಿಶಾರದರೆಂಬ ಬಿರುದಾಂಕಿತರಾದ ಶ್ರೀ॥ಉ॥ಆಸ್ಥಾನಪಂಡಿತರು ವೆಂಕಟಕೃಷ್ಣಮಾ ಸ್ವಾಮಿಗಳವರು ಅಗ್ರಾಸನವನ್ನಲಂಕರಿಸಬೇಕೆಂದು ಶ್ರೀಮಾನ್ ರಂ ಕೃಷ್ಣಮಾಚಾರ್ಯರು ಶ್ರೀಮಾನ್ ಅಬ್ಬಾಗಲ್ ಜೋಡೀ ಶ್ರೀರಂಗಾಚಾರ್ಯರು ಸೂಚಿಸಿದರು. ಇದನ್ನು ಸಭಿಕರೆಲ್ಲರೂ ಏಕಧ್ವನಿಯಿಂದ ಕೋಲಾಹಲಧ್ವನಿಯೊಡನೆ ಅನುಮೋದಿಸಿದರು.

ಸ

ಅಧ್ಯಕ್ಷರು ಅಗ್ರಾಸನವನ್ನಲಂಕರಿಸಿ ಸಭೆ ಸೇರಿಸತಕ್ಕಬಗ್ಗೆ ಬಂದ್ದ ನೋಟೀಸನ್ನು ಸಭಿಕರೆಲ್ಲಾ ತಿಳಿಯುವಂತೆ ಓದುವದಾಗಿ ಕಾರ್ಯದರ್ಶಿಗಳಿಗೆ ಅಪ್ಪಣೆಕೊಡಿಸಿದಮೇರಿಗೆ ಅವರು ಓದಿದರು.

ಶ್ರೀಮಾನ್ ವಿದ್ವಾನ್ ನವೀನಂ ರಾಮಾನುಜಾಚಾರ್ಯರು ಹಿಂದಿನ ಪ್ರೊಸಿಂಡಿಂಗ್ಸ್‌ಗಳೇನಾದರೂಇದ್ದರೆ ಅವುಗಳನ್ನು ಓದಬೇಕೆಂದು ಸೂಚಿಸಿದರು. ಅದನ್ನು ಶ್ರೀ॥ಉ॥ಶ್ರೀರಂಗರಾಜಪುರದ ವಿದ್ವಾನ್ ರಂಗಸ್ವಾಮಿಗಳು, ಶ್ರೀ॥ಉ॥ ವಿದ್ವಾನ್ ಸುಂದರಾಚಾರ್ಯರು ಅನುಮೋದಿಸಿದರು. ಸಕಲರೂ ಒಪ್ಪಿದರು.

ಪ್ರೆಸಿಡೆಂಟರ ಆಜ್ಞಾನುಸಾರ ಮೊಹಿಮಜಕೂರ್ ೧೩ನೇ ತಾರೀಖಿನಲ್ಲಿ ನಡೆಸಿದ ಪ್ರೊಸೀಡಿಂಗ್ಸ್ ಶ್ರೀರಂಗಪಟ್ಟಣದ ಮಹಾಜನಗಳ ವಿಜ್ಞಾಪನೆ, ಶ್ರೀರಂಗಪಟ್ಟಣದ ಅಖಿಲವೈಷ್ಣವಮಹಾಜನಗಳು ಸೇರಿ

ಮಾಹೆ ಮಜಕೂರ್ ೧೮-೨೪-೨೫ನೇ ತಾರೀಖಿನಲ್ಲಿ ನಡೆಸಿದ ಪ್ರೊಸೀಡಿಂಗ್ಸ್ ಯಾನೆ ಸಮಾಪ್ತಿಗಳೂ ಅಲ್ಲಿನ ಅರ್ಚಕರ ವಾಙ್ಮೂಲವೂ ಧರ್ಮದರ್ಶಿಗಳ ಲೇಖನವೂ ಓದಲಾಯಿತು.

ಪ್ರೆಸಿಡೆಂಟರ ಆಜ್ಞೆಯಂತೆ ಈ ಮಠದ ಕಾರ್ಯದರ್ಶಿಗಳಾದ ಬಿ. ಸಿ. ಶ್ರೀನಿವಾಸೈಯ್ಯಂಗಾರ್ಯರು ವಿಜ್ಞಾಪಿಸಿಕೊಂಡದ್ದೇನಂದರೆ.— ಈ ದಿವಸ ನೇರಿರುವ ಸಭೆಯು ಬಹುದೊಡ್ಡದು. ತರ್ಕ, ವೇದಾಂತ, ಮೀಮಾಂಸಾ ಶಾಸ್ತ್ರಗಳಲ್ಲಿ ತಿಳಿದ ಪಂಡಿತರೂ ಕೂಡ ದಯಮಾಡಿಸಿದ್ದಾರೆ. ಈ ಸಭಿಕರು ಮಾಡುವ ತೀರ್ಮಾನವು ಆಕ್ಷೇಪಣೀಯಾಂಶವಾಗಿರ ಕೂಡದು. ಯಾತಕ್ಕಂದರೆ:—ಶ್ರೀಶೃಂಗೇರೀ ಸ್ವಾಮಿಗಳು ಉದ್ದಾಮ ಪಂಡಿತರೆಂಬುದ ನಾವುಗಳೆಲ್ಲರೂ ಅಂಗೀಕರಿಸುತ್ತೇವೆ. ಅಂಥವರು ಶಾಸ್ತ್ರಕ್ಕೂ, ಆಗಮಕ್ಕೂ, ಮತಪದ್ಧತಿಗೂ ವಿರೋಧವಾಗಿ ದೇವಸ್ಥಾನಕ್ಕೆ ದಯಮಾಡಿಸಿದರು ಎಂಬ ಅಂಶವ ಚರ್ಚಿಸಿ ನಿರ್ಣಯಿಸುವದಕ್ಕಾಗಿ ಇಲ್ಲಿ ನೇರಿರುವ ತಮ್ಮಲ್ಲಿ ಬಹುಮಂದಿಗಳಿಗೆ ಶ್ರೀಸ್ವಾಮಿಗಳವರು ದೇವರನ್ನು ಆಲಿಂಗಿಸುವರೆಂತಲೂ, ಸ್ಪರ್ಶಿಸುವರೆಂತಲೂ ಅಭಿಪ್ರಾಯಹುಟ್ಟಿರಬಹುದು. ನಾ ವಿಚಾರಿಸಿ ತಿಳಿದಿರುವಮಟ್ಟಿಗೂ ನಿಜಸ್ಥಿತಿಯಂ ನುಡಿಯುವೆನು: ಇದರಿಂದ ನಾನು ಸ್ವಾಮಿಗಳ ಕಡೆಯವನೆಂತಲೂ, ಸ್ಮಾರ್ತಪಕ್ಷದವನೆಂತಲೂ ಭಾವಿಸಕೆಲಸವಿಲ್ಲ. ಶ್ರೀಸ್ವಾಮಿಗಳ ಮೇಲೆ ನಾವು ಒಂದು ದೋಷವಂ ಆರೋಪಿಸುವಾಗ ಆಕ್ಷೇಪಣೆಗೆ ಸಮಾಧಾನ ಹೇಳುವದಕ್ಕೆ ಅವರೇ ಆಗಲಿ ಅವರ ಕಡೆಯವರಾಗಲಿ ಇರಬೇಕು. ನಮ್ಮಲ್ಲಿ ನೆರೆದಿರುವವರೆಲ್ಲಾ ಶುದ್ಧ ವೈಷ್ಣವರೇ ಆಗಿರುವದ್ದರಿಂದ ನಾನು ಸ್ವಾಮಿಗಳ ಪಕ್ಷವಾಗಿ ಮಾತನಾಡಲಪೇಕ್ಷಿಸುತ್ತೇನೆ. ಅನುಜ್ಞೆಯಾಗಬೇಕು. ಶ್ರೀಸ್ವಾಮಿಗಳು ತೆರೆ ಹಾಕಿಕೊಂಡು ದೇವರನ್ನು ಎಂದಿಗೂ ಮುಟ್ಟುವದಿಲ್ಲ. ಪ್ರಣಾಮ ಮಾಡುತ್ತಾರೆ. ಅವರು ಗರುಡವಂದನೆ ಮಾಡುವದರಿಂದಲೂ, ಚತುರ್ವಿಂಶತಿವಂದನೆ ಮಾಡುವದರಿಂದಲೂ, ಕಿರೀಟವಿಹೀನರಾಗಿ ಉತ್ತರೀಯವಂ ನಡುವಿಗೆ ಕಟ್ಟಿಕೊಂಡು ಷೋಡಶಪ್ರಣಾಮ ಮಾಡುವದರಿಂದಲೂ ಅವುಗಳೆಲ್ಲಾ ಇತರರಿಗೆ ಗೊತ್ತಾಗಬಾರದೆಂದು ತೆರೆಹಾಕಿಸಿಕೊಂಡು ಪ್ರಣಾಮ ಮಾಡುತ್ತಾರೆ. ಅಲ್ಲದೆ ದೇವರನ್ನು ಮುಟ್ಟುವದಕ್ಕೆ ಅಲ್ಲವೆಂದು ನಾನು ಸಪ್ರಮಾಣ

ಕೇಳುತ್ತೇನೆ. ಹಾಗೆ ಅವರು ಮುಟ್ಟದರೆ ಅವರಿಗೆ ಪ್ರಾಯಶ್ಚಿತ್ತ
ಧಿ ಇರುವದಾಗಿಯೂ ಕೇಳದೇನೆ. ಶಿವಾಲಯಗಳಲ್ಲಿ ಹೋದರೆ ಅವ
ರಿಗೆ ತಡೆಯಿಲ್ಲವಷ್ಟೆ. ಅಂಥಾಸ್ಥಳದಲ್ಲಿಯೇ ಆಗಮೋಕ್ತವಾಗಿ ಪ್ರತಿ
ಷ್ಠಿತವಾಗಿರುವ ಶಿವಲಿಂಗವಂ ಸ್ಪೃಶಿಸುವನಿಲ್ಲ. ನಮ್ಮಲ್ಲಿಯೂ ಅರ್ಚ
ನೆಮಾಡಿ ಪ್ರಸಾದವಂ ಎತ್ತಿಕೊಡೆಂದು ಅರ್ಚಕರನ್ನು ಕೇಳದ್ದು ಅವರ
ವಾಙ್ಮೂಲದಿಂದಲೇ ವ್ಯಕ್ತವಾತ್ತೆಯಾಗಿ ಶ್ರೀಸ್ವಾಮಿಗಳು ದೇವರನ್ನು
ಮುಟ್ಟದರು ಎಂಬ ತಮ್ಮ ಸಂಶಯಗಳಂಬಿಟ್ಟು ಶ್ರೀಸ್ವಾಮಿಗಳು ಗರ್ಭ
ಗುಡಿಯೊಳಕ್ಕೆ ಪ್ರವೇಶಮಾಡಿ ಆರ್ತಿ ಅರ್ಚನೆ ವಂದನೆಗಳಂ ಮಾಡಿದ್ದು
ಶಾಸ್ತ್ರಬಾಧಕವೆಂಬುವ ಅಂಶವೇನಾದರು ಇದ್ದರೆ ವಚನಗಳ ಸಮೇತ
ಅದಂ ನಿರ್ಧರಿಸುವದಂ ಯತ್ನಿಸಬೇಕು. ಈಕೆಲಸವಂ ಮಾಡುವ್ವದಕ್ಕೆ ಮುಂ
ನ್ಡೆ ಇಲ್ಲಿ ನೆರೆದಿರುವ ವೈಷ್ಣವಮಂಡಲಿಯಲ್ಲಿ ನಾಲ್ವರು ಶ್ರೀಸ್ವಾಮಿಗಳ
ಪಕ್ಷವಾಗಿಯೂ ನಾಲ್ವರು ಪ್ರತಿಪಕ್ಷವಾಗಿಯೂ ನಿಂತು ಚರ್ಚಿಸಿ ಸಿದ್ಧಾಂ
ತಮಾಡಬೇಕೆಂಬುವದೇ ನನ್ನ ಮುಖ್ಯ ಪ್ರಾರ್ಥನೆಯಾಗಿದೆ ಅಂದರು. ಅದಕ್ಕೆ
ಸಕಲರೂ ಅನುಮೋದಿಸಿದರು.

ಶ್ರೀ॥ಉ॥ವಿದ್ವಾನ್ ರಂಗಸ್ವಾಮಿಗಳವರು, ಶ್ರೀ॥ ಉ ॥ ವಿದ್ವಾನ್
ನವೀನಂ ರಾಮಾನುಜಾಚಾರ್, ಶ್ರೀ॥ಉ॥ವಿದ್ವಾನ್ ಕಾನಕಾನಹಳ್ಳಿ ಶ್ರೀ
ನಿವಾಸಾಚಾರ್ಯರು, ಶ್ರೀ॥ಉ॥ ವಿದ್ವಾನ್ ಕಚ್ಛಭಜಂ ಶ್ರೀನಿವಾಸಾಚಾ
ರ್ಯರು, ಶ್ರೀ॥ಉ॥ ವಿದ್ವಾನ್ ಸೋಸಲೆಗುರುಗಳು ಶ್ರೀನಿವಾಸ ಚಕ್ರವ
ರ್ತ್ಯಾಚಾರ್ಯರು, ಶ್ರೀ॥ಉ॥ ವಿದ್ವಾನ್ ಸುಂದರಾಚಾರ್ಯರು ಮೊದಲಾದ
೧೦ ಮಂದಿ ಪಂಡಿತರು ಸಂಸ್ಕೃತಭಾಷೆಯಲ್ಲಿ ಸುಮಾರು ಅರ್ಧ ಘಂಟೆ
ಯವರಿಗೂ ವಿವಾದಮಾಡಿದರು.

ಶ್ರೀ॥ಉ॥ ವಿದ್ವಾನ್ ಶರ್ಕೆನರಸಿಂಹಾಚಾರ್ಯರು ಎದ್ದು ಸಂಸ್ಕೃತ
ದಲ್ಲಿ ವಾದಮಾಡಿ ಅದರಿಂದ ಹೊಂದುವ ತಿಳುವಳಿಕೆಯಫಲವನ್ನು ತಾವುಗ
ಳೇ ಅನುಭವಿಸುವದಕ್ಕಿಂತಲೂ ಸಭಿಕರಲ್ಲಿ ಬಹುಮಂದಿಗಳು ಅಪೇಕ್ಷಿ
ಸುವವರಿಗೆ ಕನ್ನಡಭಾಷೆಯಲ್ಲಿಯೂಕೂಡ ಪೂರ್ವಪಕ್ಷಸಮಾಧಾನವೂ
ಆಗಬೇಕೆಂದು ಪ್ರಾರ್ಥಿಸುತ್ತೇನೆ ಅಂದರು. ಇದಕ್ಕೆ ಸಕಲರೂ ಒಪ್ಪಿದರು.

ಶ್ರೀ॥ಉ॥ವಿದ್ವಾನ್ ಶ್ರೀರಂಗರಾಜಪುರದ ರಂಗಸ್ವಾಮಿಗಳು ಘಂಟೆಯವರಿಗೂ ಪೂರ್ವಪಕ್ಷಗಳಿಗೆಲ್ಲಾ ಸಮಾಧಾನಹೇಳಿ ಪ್ರಸಿಷೆಂ ಅಕ್ಷೇಪಣೆಗಳಿಗೆಲ್ಲಾ ಸಮಾಧಾನ ಕೊಟ್ಟು ಕೊನೆಗೆ ವಿಷ್ಣುಲಾಂಛನವಂ ಧರಿಸಿ ವೈಷ್ಣವದೀಕ್ಷೆಯಂಕೈಗೊಂಡು ಇದ್ದರೂ ವೈಖಾನಸಾಗಮದಿಂ ಪೂಜೆ ಮಾಡತಕ್ಕ ಅರ್ಚಕರು ಪಾಂಚರಾತ್ರಾಗಮಕ್ರಮದಿಂ ಪೂಜೆ ನಡೆಯುವ ದೇವಸ್ಥಾನಕ್ಕೆ ಬಂದು ಗರ್ಭಗೃಹ ಪ್ರವೇಶಮಾಡಿದರೂ, ಆರ್ತಿ ಅರ್ಚನೆಗಳಂಮಾಡಿದರೂ, ದೇವರಿಗೆ ಸಂಪ್ರೋಕ್ಷಣೆ ಆಗಬೇಕಾಗಿರುವದು. ಹೀಗಿರುವಾಗ ತಂತ್ರಾಂತರದಿಂ ಪೂಜೆ ಮಾಡತಕ್ಕ ಮತಾಂತರಸ್ಥರ ಪ್ರವೇಶವೇ ಶಾಸ್ತ್ರನಿಷಿದ್ಧವು. ಶ್ರೀಶೃಂಗೇರಿಸ್ವಾಮಿಗಳು ಪಾಂಚರಾತ್ರಾಗಮಕ್ರಮವನ್ನನುಸರಿಸಿ ಪೂಜೆಮಾಡತಕ್ಕವರಲ್ಲ. ವಿಷ್ಣುದೀಕ್ಷೆಯಂ ಕೈಗೊಂಡವರಲ್ಲ. ಮತ್ತು ವಿಷ್ಣುಲಾಂಛನವಂಧರಿಸಿರತಕ್ಕವರಲ್ಲ. ವಿಶಿಷ್ಟಾದ್ವೈತಮತಕ್ಕೆ ವಿರುದ್ಧವಾದಸಿದ್ಧಾಂತವಂ ಅನುಷ್ಠಿಸತಕ್ಕವರಾಗಿದ್ಧಾರೆ. ತಂತ್ರಾಂತರದಿಂ ಪಂಚಾಯತನಾರಾಧನಕ್ರಮವಂ ವೈಕಾರಾಧನಕ್ರಮವಂ ಅನುಷ್ಠಿಸತಕ್ಕವರು. ಇವರು ಶೈವಾಗಮಾನುವರ್ತಿಗಳು. ವೈಖಾನಸಾಗಮವಂ ಅನುಷ್ಠಿಸುತಲಿದ್ದರೂ ನಮಗೆ ಬಾಧಕ.

ತ್ರಿಭಿರ್ವಾದುಪನೀತೈರ್ವಾ ತಥಾ ವೈಖಾನಸೈರ್ದ್ವಿಜೈಃ ।
ಅವೈಷ್ಣವೈರ್ವಾಸಂಸ್ಪೃಷ್ಟೇಬಿಂಬೇತ್ವಧಮಮಧ್ಯಮಮ್ ॥
ಸ್ನಪನಂವಿಧಿವತ್ಕೃತ್ವಾ ಶಾಂತಹೋಮಾದಿಕಂಚರೇತ್ ॥

ಇತ್ಯಾದಿವಚನಗಳಿಂದಲೂ:—

ನೈವಾಧಿಕಾರಿಸನ್ಯಾಸೀ ಬ್ರಾಹ್ಮಣೋಪ್ಯುಕ್ತಲಕ್ಷಣಃ ॥
ಇತರೇಪಿತ್ರಯೋವರ್ಣಾಃ ಯಜನೇನಾಧಿಕಾರಿಣಃ॥

ಇತ್ಯಾದ್ಯನೇಕವಚನಗಳಿಂದ ಶ್ರೀಸ್ವಾಮಿಗಳು ಬಿಂಬವಂ ಸ್ಪರ್ಶಿಸುವದಿಲ್ಲವೆಂಬದಾಗಿ ನಮ್ಮ ಕಾರ್ಯದರ್ಶಿಗಳು ಹೇಳುವಮಾತನ್ನು ನಂಬಿದಾಗ್ಯೂ ಅವರು ಗರ್ಭಗೃಹ ಪ್ರವೇಶ ಮಾಡಿದ್ದೂ, ಆರ್ತಿ ಅರ್ಚನೆಮಾಡಿದ್ದೂ, ಅಲ್ಲಿಯೇಪ್ರಣಾಮವಂಮಾಡಿದ್ದೂ, ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿದೆ ಎಂಬುವದಕ್ಕೆ ಯಾವಸಂದೇಹವೂಇಲ್ಲವಾಗಿ ದೇವರಿಗೆ ಸಂಪ್ರೋಕ್ಷಣೆ

...ಾವದ್ದು ಅವಶ್ಯಕವೆಂದು ನಾನು ಅಭಿಪ್ರಾಯಪಡುತ್ತೇನೆಂದರು ...ಕ್ಕೆ ಶ್ರೀ || ಉ || ವಿದ್ವಾನ್ ನವೀನಂ ರಾಮಾನುಜಾಚಾರ್ಯರು ಅನುಮೋದಿಸಿದರು. ಸಕಲ ಪಂಡಿತರೂ ಒಪ್ಪಿದರು.

ವಿರೋಧಾಭಿಪ್ರಾಯಪಡತಕ್ಕವರುಂಟೇ ಎಂದು ಪ್ರಶ್ನೆ ಮಾಡಲಾಗಿ ಯಾರೂ ವಿರೋಧಾಭಿಪ್ರಾಯಪಡಲಿಲ್ಲ.

ಶಾಸ್ತ್ರಬಾಧಕವಾದ...
...ಟರು ಅಪ್ಪಣೆ ಕೊಡಿಸಿ ಶ್ರೀ...
ಅದರಮೇಲೆ ಶ್ರೀಶ್ರೀ ಪರಕಾ...
...ೀಮುಖವನ್ನು ಓದುವಂತೆ
...ಮುಖವು ಓದಲಾಯಿತು.

...ಾಡತಕ್ಕದ್ದೇನು? ಎಂದು ಪ್ರಸಿದ್ಧಂ...
...ಪಟ್ಟಣದಲ್ಲಿ ನಡೆಸಿದ ಸಮಾಖ್ಯೆಯನ್ನು
...ಸ್ವಾಮಿಗಳವರು ಅಪ್ಪಣೆ ಕೊಡಿಸಿರುವ
...ಪ್ಪಣೆ ಕೊಡಿಸಿದರು. ಸಮಾಖ್ಯೆಯು ಶ್ರೀ

ಶ್ರೀರಂಗಪಟ್ಟಣದ ಮಹಾಜನಗಳು ಸೇರಿ ನಡೆಸಿರುವ ಸಮಾಖ್ಯೆ ಶ್ರೀಶ್ರೀ ಪರಕಾಲಸ್ವಾಮಿಗಳು ಕೊಡಿಸಿರುವ ಶ್ರೀಮುಖದತೀರ್ಮಾನವು ಸಾಧುವಾಗಿರುವದ್ದರಿಂದ ಅವುಗಳಂತೆಯೇ ನಾವು ತೀರ್ಮಾನಿಸುವದು ಸಾಧುವಾಗಿದೆಯೆಂದು ಶ್ರೀಮಾನ್ ಶ್ರೀರಂಗರಾಜಪುರದ ರಂಗಸ್ವಾಮಿಗಳು ಸೂಚಿಸಿದ್ದನ್ನು ಶ್ರೀಮಾನ್ ನವೀನಂ ರಾಮಾನುಜಾಚಾರ್ಯರು ಅನುಮೋದಿಸಿದರು. ಇದನ್ನು ಸಕಲಪಂಡಿತರೂ ಒಪ್ಪಿದರು.

ಇದಕ್ಕೆ ವಿರೋಧಾಭಿಪ್ರಾಯಪಡತಕ್ಕವರುಂಟೆ ಎಂದು ಪ್ರಶ್ನೆ ಮಾಡಿದಾಗ ವೇ || ಜಯಾಚಾರ್ಯರು ವಿರೋಧಾಭಿಪ್ರಾಯವುಳ್ಳವರುಯಾರೂ ಇಲ್ಲವೆಂದೂ ಅಪ್ಪಣೆಕೊಡಿಸಿದ್ದನ್ನು ಸಕಲರೂ ಅನುಮೋದಿಸಿದರು.

ದೇವಸ್ಥಾನಕ್ಕೆ ಸಂಪ್ರೋಕ್ಷಣೆಯಾಗಬೇಕು. ಅಲ್ಲಿಯುವರಿಗೂ ಅಖಿಲ ವೈಷ್ಣವರು ತೀರ್ಥಪ್ರಸಾದವಂ ಸ್ವೀಕರಿಸಕೂಡದೆಂದು ಸಭಿಕರು ತೀರ್ಮಾನಿಸಿದ್ದು ಸರಿಯೇ. ಶ್ರೀ ಶೃಂಗೇರಿಸ್ವಾಮಿಗಳವರು ವಾಹನಾರೂಢರಾಗಿ ವಾದ್ಯಘೋಷಸಮೇತ ಪ್ರಾಕಾರಪ್ರದಕ್ಷಿಣೆಮಾಡಿದ ಅಂಶವೂ

ಪಾದುಕಾ ಸಮೇತರಾಗಿ ಆಳ್ವಾರಾಚಾರ್ಯರುಗಳು ದಯಮಾಡಿಸಿ
ಯನ್ನು ಪ್ರವೇಶಿಸಿ ಧ್ವಜಸ್ತಂಭದಬಳಿ ಬಿಟ್ಟದ್ದು ಆಚಾರಕ್ಕೂ
ಪದ್ಧತಿಗೂ ವಿರೋಧವಾಗಿರುವದ್ದರಿಂದ ಶ್ರೀಸ್ವಾಮಿಗಳು ಮನಃಪೂರ್ವಕ
ವಾಗಿ ದಯಮಾಡಿಸಿದರೋ? ಅಧಿಕಾರಿಗಳ ಬಲವಂತದಿಂದ ದಯಮಾಡಿ
ಸಿದರೋ? ಆ ಅಂಶವನ್ನು ಶ್ರೀಮಠದಲ್ಲಿ ಈ ವಿಷಯವಾಗಿ ಬರೆದಿರುವ ಗ್ರಹ
ಅವುಲಿನ ನಕಲಿನೊಡನೆ ಅಪ್ಪಣೆ ಕೊಡಿಸುವಂತೆ ಶ್ರೀಸ್ವಾಮಿಗಳನ್ನು
ಪ್ರಾರ್ಥಿಸುವದು ಸಾಧುವೆಂದು ಪಂಡಿತ ಅನಂತಕೃಷ್ಣಮಾಚಾರ್ಯರು
ಸೂಚಿಸಿದ್ದನ್ನು ಸಕಲರೂ ಅನುಮೋದಿಸಿದರು.

ಶ್ರೀಸ್ವಾಮಿಗಳವರು ಮಂಡ್ಯದಿಂದ ಪಶ್ಚಿಮವಾಹಿನಿ ಮಾರ್ಗವಾಗಿ
ಶ್ರೀರಂಗಪಟ್ಟಣಪ್ರವೇಶವಿಲ್ಲದೆ ಮೈಸೂರಿಗೆ ದಯಮಾಡಿಸುವದಾಗಿ ರ
ದಾರಿಯಾಗಿದ್ದಂತೆ ತಿಳಿಯಲಾಗುತ್ತಿದೆ. ಡಿಪ್ಟಿ ಕಮಿಷನರವರು ಶ್ರೀಸ್ವಾ
ಮಿಗಳನ್ನು ತಾವೇ ಬಲವಂತನಡಿಸಿ ಪಟ್ಟಣಪ್ರವೇಶವಂಮಾಡಿಸಿ ದೇ
ಸ್ಥಾನಕ್ಕೆ ಕರೆದುಕೊಂಡುಹೋದರೋ? ಪೋಲೀಸ್ನವರ ಅರ್ಡರಿಂದಲೇ
ಕಾರ್ಯವಂ ನಡೆಸಿದರೋ? ಅದಂ ಅವರಿಗೆ ಬರೆದು ತಿಳಿಯಬೇಕಾಗಿರುವ;
ಮತವಿರೋಧವಾಗಿ ದೇವಾಲಯ ಪ್ರವೇಶವಂ ಮಾಡುವ ಸ್ವಾಮಿ?
ಪ್ರಾರ್ಥನಾಪುರಸ್ಸರ ನಿರ್ಬಂಧಿಸುವದಕ್ಕೆ ಉದ್ಯೋಗಿಸಿದ ಭಕ್ತಾದಿಗಳ
ವಿಚಾರವಿಲ್ಲದೆ ದಂಡಿಸುವಂತೆ ಪೋಲೀಸ್ ಕುಮುಕುಗಳನ್ನಿಟ್ಟುಕೊಂಡು
ಚದರಿಸಿದ್ದು ಸಾಧುವೇ? ಎಂಬ ಅಂಶವಂ ಅವರಿಗೆ ಬರೆದುತಿಳಿಯುವದು ಸಾ
ಧುವೆಂದು ಶ್ರೀಮಾನ್ ಸುಬ್ಬಗಿರಿ ಶ್ರೀನಿವಾಸರಾಘವಾಚಾರ್ಯರು ಸೂಚಿ
ಸಿದ್ದನ್ನು ಸಕಲರೂ ಅನುಮೋದಿಸಿದರು

ಕಾರ್ಯದರ್ಶಿಗಳು ಈ ನಮ್ಮ ಸಮೂಖ್ಯೆಯನಕಲನ್ನು ಶ್ರೀಮನ್
ಮಹಾರಾಜ ಮಹಾಮಾತೃಶ್ರೀ ವಾಣೀವಿಲಾಸ ರೀಜೆಂಟ್ ಮಹಾಸನ್ನಿಧಾ
ನಕ್ಕೂ ಎಲ್ಲಾ ಕೌನ್ಸಲರ್‌ಗಳ ಇತ್ಯರ್ಥಕ್ಕೂ ಮೈಸೂರ್ ಗವರ್ನ್ಮೆಂಟ್
ಮುಖೇನ ರೆಸಿಡೆಂಟರವರಿಗೂ, ದಿವಾನರವರಿಗೂ, ಶ್ರೀ ಪರಕಾಲಸ್ವಾಮಿ
ಗಳಮಠಕ್ಕೂ, ಶ್ರೀಶೃಂಗೇರಿಮಠಕ್ಕೂ, ಶ್ರೀವ್ಯಾಸರಾಯ ಶ್ರೀಉತ್ತ

[illegible]

ರಾಘವೇಂದ್ರಸ್ವಾಮಿಗಳ ಮಠಗಳೇ ಅದಿಯಾಗಿ ದೇಶಾಂತರದ ವೆಲ್ಲಾ ಶ್ರೀಮಠಗಳಿಗೂ ರವಾನಿಸಿಕೊಡಬೇಕೆಂದು ವೇ॥ ಜಯಯಾಚಾರ್ಯರು ಸೂಚಿಸಿದ್ದನ್ನು ಸಕಲರೂ ಅನುಮೋದಿಸಿದರು.

ಶ್ರೀಮಾನ್ ವೆಂಕಟಕೃಷ್ಣಮಾಚಾರ್ಯರು ಸಭಾನಾಯಕಪದವಿಯನ್ನಲಂಕರಿಸಿ ಕೆಲಸ ನಿರ್ವಹಿಸಿದ್ದಕ್ಕಾಗಿ ಸಕಲರೂ ಅವರಂ ಅಭಿವಂದಿಸುವದಲ್ಲದೆ ಸ್ಥಳವಂ ಕೊಟ್ಟಿದ್ದಕ್ಕಾಗಿ ಶ್ರೀಮಾನ್ ಪುಸ್ತಕಂ ತಿರುಮಲಾಚಾರ್ಯರಿಗೂ ಸಾವಧಾನಚಿತ್ತದಿಂದ ಕಾರ್ಯಗೌರವಗಳಂ ಬಿಟ್ಟು ರಾತ್ರಿ ೧೦ ಘಂಟೆವರಿಗೂ ಸಭೆಯನ್ನಲಂಕರಿಸಲು ದಯಮಾಡಿಸಿದ ಸಭಾಸದರಿಗೂ ಅಭಿವಂದಿಸುವಂತೆ ಕಾರ್ಯದರ್ಶಿಗಳು ಸೂಚಿಸಿದ್ದನ್ನು ಸಕಲರೂ ಅನುಮೋದಿಸಿದರು. ಅತ್ಯಂತ ಕೋಲಾಹಲಧ್ವನಿಯೊಡನೆ ಸಭೆಯು ಬರಖಾಸ್ತಾಯಿತು.

ವೇದಾಂತವಿಶಾರದವೆಂಕಟಕೃಷ್ಣಮಾಚಾರ್
ಪ್ರೆಸಿಡೆಂಟ್.

ಶ್ರೀವೈಷ್ಣವ ಮತ್ತು ವೈಷ್ಣವಮಹಾಜನಗಳಸಭೆಯ.

ಶ್ರೀರಂಗಪಟ್ಟಣದಲ್ಲಿರುವ ಧರ್ಮದರ್ಶಿಗಳಾದ ಶ್ರೀಮದಿತ್ಯಾದಿ ಉ॥ ಕರೀಘಟ್ಟದ ವೆಂಕಟಾಚಾರ್ಯರು ಶ್ರೀ॥ ಉ॥ ಶಿಂಗ್ರಾಚಾರ್ಯರು ಇವರ ಪರಾಂಬರಿಕೆಬಗ್ಗೆ.

೧ ಶ್ರೀಶೃಂಗೇರೀಸ್ವಾಮಿಗಳು ದಯಮಾಡಿಸಿದರೆ (ರಂಗನಾಥಸ್ವಾಮಿದೇವಸ್ಥಾನದಲೆಕ್ಕಗಳಮೇರೆ) ಪೂರ್ವದಲ್ಲಿದ್ದ ಮರ್ಯಾದೆವಿನು?

೨ ಸನ್ನಿಧಾನಕ್ಕೆ ದಯಮಾಡಿಸಿದರೆ ಯಾವರೀತಿ ಮರ್ಯಾದೆ? ಸ ಧಿಗೆ ದಯಮಾಡಿಸದೆಇದ್ದರೆ ಯಾವರೀತಿಮರ್ಯಾದೆ?

೩ ಈ ೧೪ನೇ ಜೂನ್ ೧೦ನೇ ತಾರೀಖಿನಲ್ಲಿ ದಯಮಾಡಿಸಿದ್ದರಷ್ಟೆ. ಈ ವಿಷಯವಾಗಿ ಸರ್ಕಾರದ ಅಧಿಕಾರಿಗಳು ಸ್ವಾಮಿಗಳು ದಯಮಾಡಿಸುವ ಸಂಗತಿಯನ್ನು ಯಾವಾಗ ನಿಮಗೆ ತಿಳಿಸಿದರು. ಮರ್ಯಾದೆವಿಷಯವೇನಾದರು ಕೇಳಿದರೆ? ತಾವುಗಳು; ಸ್ವಾಮಿಗಳು ದರ್ಶನಕ್ಕೆ ದಯಮಾಡಿಸಿದ್ದಾಗ್ಯೆ ಸನ್ನಿಧಿಗೆ ಹೋಗಿದ್ದಿರೆ? ಮುಖ್ಯ ಅಧಿಕಾರಿಗಳಾಗಿ ಹೋಗದೆಇದ್ದರೆ ಯಾತಕ್ಕೆ ಹೋಗಲಿಲ್ಲ?

ಈ ಮೇಲ್ಕಂಡ ವಿಷಯಗಳಿಗೆ ತಾವು ಸಮತ್ತರವನ್ನು ಬೆಳಸಬೇಕಾಗಿ ಕೋಡಲ್ಪಟ್ಟಿರುತ್ತೆ.

ಈ ಬಳಿಬಾಳಬಂದಿನಲ್ಲಿ
ಉಡುಪಿ ನರಹರಿಯಾಚಾರ್ಯರರುಜು
ಪ್ರೆಸಿಡೆಂಟ್ ಎಂದಿವೆ.

[illegible]ಧ್ವ ಮತ್ತು ವೈಷ್ಣವಮಹಾಜನಗಳ ಸನ್ನಿಧಾನಂಗಳಿಗೆ.

ವಿಜ್ಞಾಪನೆ.

೧ನೇ ಕಲಂಗೆ. ಶ್ರೀ ಶೃಂಗೇರೀಸ್ವಾಮಿಗಳವರು ದೇವಸ್ಥಾನಕ್ಕೆ ದಯಮಾಡಿಸಿದಂತೆ ಯಾವ ಹುಕುಮೂ ಬಂದು ಇಲ್ಲ. ಆದ್ದರಿಂದ ದೇವಸ್ಥಾನದಲ್ಲಿನ ಹಿಂದಿನ ಲೆಕ್ಕದಾಖಲೆಗಳನ್ನು ನೋಡಲಿಲ್ಲ.

೨ನೇ ಕಲಂಗೆ. ಶ್ರೀಸ್ವಾಮಿಗಳವರು ಶ್ರೀದೇವಸ್ಥಾನಗಳಿಗೆ ದಯಮಾಡಿಸುವಸಂದರ್ಭಕ್ಕೆ ತಾಲ್ಲೋಕಿನಿಂದ ಯಾವ ಹುಕುಂ ದೇವಸ್ಥಾನಗಳಿಗೆ ಕೊಡಲಿಲ್ಲ.

ಈಗ್ಗೆ ಸುಮಾರು ೩೮ ವರ್ಷಗಳ ಕೆಳಗೆ ಸ್ವಾಮಿಗಳು ದಯಮಾಡಿಸಿದ್ದಾಗ್ಯೆ ಆಗ ನಡೆದ ಪೂರ್ಣಕುಂಭ ಮರ್ಯಾದೆಮಾತ್ರ ಈಗಲೂ ನಡೆಯಿತು. ಆದರೆ ಮಾಲೆ, ಪೂರ್ಣಕುಂಭದಮೇಲಿಇದ್ದ ಎರಡು ತೆಂಗಿನಕಾಯಿಗಳುಸಹ ಸ್ವಾಮಿಗಳು ತೆಗದುಕೊಂಡು ಮಿಕ್ಕದ್ದನ್ನೆಲ್ಲಾ ಸ್ವೀಕರಿಸಲಿಲ್ಲ. ಈಮರ್ಯಾದೆ ಕಬ್ಬಿನಮೊರೆಬಳಿ ನಡದ್ದು ನಾವು ನೋಡಿದೇವೆ.

೩ನೇ ಕಲಂಗೆ. ಈ ಮಾಹೆ ೭-೮ನೇ ತಾರೀಖಿನಲ್ಲಿ ನಮ್ಮಗಳನ್ನೆಲ್ಲಾ ತಾಲ್ಲೋಕಿನವರು ಕರೆಸಿ ಶೃಂಗೇರೀ ಸ್ವಾಮಿಗಳು ಮಂಡ್ಯದಿಂದ ಪಶ್ಚಿಮವಾಹಿನಿಗೆ ಈ ಮಾಹೆ ತಾ|| ೧೦ ರಲ್ಲು ದಯಮಾಡಿಸುತ್ತಾರೆ. ದೇವಸ್ಥಾನಗಳಿಂದ ಆಗತಕ್ಕ ಮರ್ಯಾದೆಗಳು ಯಾವಯಾವದು ಎಂದು ಅಪ್ಪಣೆಕೊಡಿಸಿದರು. ಅದಕ್ಕೆ ನಾವು ಹಾಮೂಲಿನಮೇರೆ ಮರ್ಯಾದೆಗಳು ನಡೆಯುವದರಲ್ಲಿ ಯಾವಸಂದೇಹವೂಇಲ್ಲವೆಂದು ತಿಳಿಸಿದೆವು. ಅದೇ ರೀತಿ ತಾ||೧೦ರಲ್ಲಿ ತಾಲ್ಲೋಕಿನವರ ಅಪ್ಪಣೆಪ್ರ

ಕಾರ ಮೇಲ್ಕಂಡಂತೆ ಪೂರ್ಣಕುಂಭ
ಕಬ್ಬಿನಜೋಲೆಯಲ್ಲಿ ನಡೆಯಿತು. ನಂತರ ಸ್ವಾಮಿ
ಗಳವರು ಊರೊಳಕ್ಕೆ ದಯಮಾಡಿಸಿದರು. ದೊಡ್ಡ
ಗರಡಿಬಳಿ ಸುಬೇದಾರರವರು ನಮ್ಮ ಪೈಕಿ ವೆಂಕಟಾ
ರ್ಯರನ್ನು ಕರೆದು ಶ್ರೀ ರಂಗನಾಥಸ್ವಾಮಿಯವರ
ದೇವಸ್ಥಾನಕ್ಕೂ ದಯಮಾಡಿಸುತ್ತಾರೆಂದು ಹೇಳಿ
ದ್ದಕ್ಕೆ ನಾವು ನಮ್ಮ ದೇವಸ್ಥಾನಕ್ಕೆ ಬರುವವಿಷ
ಯದಲ್ಲಿ ಮತ ಸಂಬಂಧವಾದ ಕೆಲವು ಅನಾನುಕೂಲ
ಗಳನ್ನು ತಿಳಿಸಿದೆನು. ಅದನ್ನು ಡಿಪ್ಟೀಕಮೀಷನರ
ವರಲ್ಲಿ ತಿಳಿಸಿ ಎಂದು ಅವರು ಅಪ್ಪಣೆಕೊಡಿಸಿದ
ಅದೇರೀತಿ ಡಿಪ್ಟೀಕಮೀಷನರವರಲ್ಲಿ ತಿಳಿಸಿದ
ಸ್ಥಳಾಧಿಕಾರಿಗಳಲ್ಲಿ ತಿಳಿಸಿಕೊಳ್ಳಬೇಕೆಯೆಂದು
ಹೇಳಿ ಮುಖವನ್ನು ತಿರಿಗಿಸಿಕೊಂಡರು. ಆದ್ದ
ನಾವುಗಳು ದೇವಸ್ಥಾನಕ್ಕೆ ಹೋಗಲಿಲ್ಲ.

೨೪-೬-೯೩ ಈಬಳಿ ಕೆ. ವೆಂಕಟಾಚಾ
ಧರ್ಮದರ್ಶಿ ಯೆಂದಿದೆ

ಸೆ॥ ೧೮೯೩ನೇ ಇಸವಿ ಜೂನ್ ತಾರೀಖು ೧೮ರಲ್ಲು
ಸನ್ನಿಧಿಅರ್ಚಕರು ಬೇಲೂರು ಕೇಶವಭಟ್ಟರ ವಾಜ್ಮೂಲ

ನಾನು ಶ್ರೀಶೃಂಗೇರೀಸ್ವಾಮಿಗಳವರಿಗೆ ಇಸ್ತಿಕಬಾಲ್‌ಮರ್ಯಾದೆಯನ್ನು ಒಪ್ಪಿಸಿ ನಂತರ ಸ್ನಾನಕ್ಕೆ ಹೊಳೆಗೆ ಹೋದೆನು. ಅಲ್ಲಿಗೆ ದೇವಸ್ಥಾನದ ಮುಜಗಾರ್ ನರಸಿಂಹಾಚಾರ್ಯರು ಶ್ರೀಸ್ವಾಮಿಗಳವರು ದೇವಸ್ಥಾನಕ್ಕೆ ದರ್ಶನಾರ್ಥವಾಗಿ ದಯಮಾಡಿಸುತ್ತಾರೆ. ಜಾಗ್ರತೆಯಾಗಿ ಬನ್ನಿ ಎಂಬದಾಗಿ ಹೇಳಿದರು. ನಾನು ದೇವಸ್ಥಾನಕ್ಕೆ ಜಾಗ್ರತಯಾಗಿ ಬಂದೆ. ಅಷ್ಟರೊಳಗೆ ಡಿಪ್ಟೀಕಮೀಷನರವರ ಅಪ್ಪಣೆಆಗುತ್ತೆ ಜಾಗ್ರತೆಯಾಗಿ ಬನ್ನಿ ಎಂದು ಪಾ॥ ರಂಗಾಚಾರ್ಯರು ಕೂಗಿಕೊಂಡರು. ಶ್ರೀಸ್ವಾಮಿಗಳವರಿಗೆ

ಸ್ಥಾ. ನಡೆಸಬೇಕು ಪದಾರ್ಥಗಳನ್ನು ಸಿದ್ಧಪಡಿಸಿಕೊಳ್ಳಿರಿ ಎಂ
ಗ್ಸ ರವರು ಹೇಳಿದರು. ಅಗ್ರೋದಕವು ಬಂದು ಸುಪ್ರಭಾತವಾವಲ್ಲ
ಸನ್ನಿಧಿಬಾಗಿಲು ತೆಗೆಯುವದು ಶಾಸ್ತ್ರ ವಿರೋಧವಾದ್ದರಿಂದ ನಾನು ತೆ
ಯುವದಿಲ್ಲವೆಂದು ಪಾ || ರಂಗಾಚಾರ್ಯರಿಗೆ ಹೇಳಿದೆ. ಡೆಪ್ಯುಟೀಕಮಿಷನ
ವರ ಆರ್ಡರಾಗಿದೆ ತೆಗೆಯುತ್ತೀಯಾ ಇಲ್ಲವೆ ಎಂದು ಕೇಳಿದರು.
ನಾನು ಡೆಪ್ಯುಟೀಕಮಿಷನರವರು ಖುದ್ದು ಆರ್ಡರ್‌ಮಾಡಿದರೆ ಅದಕ್ಕೆ
ದಾಗಿ ಹೇಳಿದನಂತರ ಅಮಲ್ದಾರರು ದಯಮಾಡಿಸಿ ಡೆಪ್ಯುಟೀಕಮಿಷನರ ತೆಗೆಯುವ
ವರ ಆರ್ಡರಾಗಿದೆ. ಬಾಗಿಲನ್ನು ತೆಗೆದು ಸುಪ್ರಭಾತವಾಗಲಿಯೆಂದು ಅಪ್ಪ
ಣೆಕೊಡಿಸಿದರು. ಅವರ ಆರ್ಡರ್‌ಪ್ರಕಾರ ಬಾಗಿಲನ್ನು ತೆಗದೆ. ನಂತರ
ಅರ್ಚ್ಯಾದಿಸಾಮಗ್ರಿಗಳನ್ನೆಲ್ಲಾ ಸಿದ್ಧಪಡಿಸಿಕೊಂಡು ಅಧ್ಯಾಪಕ ವೇದ
ಪಾರಾಯಣ ಮುಂತಾದ ಗೋಷ್ಠಿ ಮುಂತಾದವರೊಡನೆ ಶಠಾರಿಯನ್ನು
ಮಾಡಿಸಿಕೊಂಡು ಗೋಪುರದಬಾಗಿಲಬಳಿಗೆ ಬಂದೆ. ಶ್ರೀಸ್ವಾಮಿಗಳ
ಮೇನಾದಲ್ಲಿ ಕೂತಿದ್ದರು. ದೇವರು ದಯಮಾಡಿಸಿದ್ದಾರೆ ಕೆಳಗೆ
ಗ ಮರ್ಯಾದಿಮಾಡಿಸಿಕೊಳ್ಳಬೇಕೆಂದು ನಾನು ಹೇಳಿದೆ. ಕೆಳಗಿಳಿಯದೆ
ಲ್ಲದೆ ಸಂತು ಎಂಬದಾಗಿ ಅಪ್ಪಣೆ ಕೊಡಿಸಲು ನಾನು ದೇವಸ್ಥಾನ
ಳಕ್ಕೆ ಹೊರಟುಹೋದೆ. ನಂತರ ಅಧ್ಯಾಪಕ ವೇದಪಾರಾಯಣದವರು
ಮುಂತಾದವರು ಸೇವಿಸುತ್ತಾಯಿದ್ದರು. ಸ್ವಾಮಿಗಳವರು ದರ್ಶನಾರ್ಥ
ವಾಗಿ ಗರ್ಭಗೃಹದ ಒಳಭಾಗದಲ್ಲಿರತಕ್ಕ ಉರಟು ಕಲ್ಲುಕಂಭದ ಬಳಿ
ನಿಂತರು. ಕರ್ಪೂರಮಂಗಳಾರತಿಯಂ ಮಾಡಿದೆ. ಸ್ವಾಮಿಗಳಗೆ ಒಪ್ಪಿಸಿದೆ
ಆರತಿತಟ್ಟೆಯನ್ನು ಕೊಡು ಎಂಬದಾಗಿ ಕೇಳಿದರು. ನಾನು ಕೊಡಲಿಲ್ಲ
ನನ್ನ ಕೈಯನ್ನು ಹಿಡಿದುಕೊಂಡು ತಟ್ಟೆಯನ್ನು ದೇವರಕಡೆಗೆ ತೋರಿಸಿ
ದರು. ತೀರ್ಥವನ್ನು ಕೇಳಿದರು. ತೀರ್ಥವನ್ನು ಕೊಟ್ಟೆ. ಅವರಲ್ಲಿ ಕೈ
ಯನ್ನು ತೊಳಕೊಂಡರು. ನಂತರ ತುಳಸೀಯನ್ನು ಕೊಡೆಂದು ಕೇಳಿ
ದರು. ಇನ್ನು ಬರಲಿಲ್ಲವೆಂದು ಹೇಳಿದೆ, ಆವರಣನೂ ಹೆಚ್ ಪಾ || ರವರು
ಕೊಡುಯೆಂಬದಾಗಿ ಗದರಿಸಿದರು. ದೇವಸ್ಥಾನಕ್ಕೆ ತೊಳಸಿ ಬರಲಿಲ್ಲ.
ಏನುಮಾಡಲಿ ಎಂದು ಹೇಳಿದನಂತರ ಡೆಪ್ಯುಟೀಕಮಿಷನರವರು ಕೊಡು
ತ್ತೀಯಾ ಕೈಗೆ ಹಾತ್ತಬೇಡಿಯನ್ನು ಹಾಕಿಸಬೇಕೋ ಅಂದರು. ತುಳ
ಸೀದಳವನ್ನು ಹಳೇಮಾಲೆಯಿಂದ ತೆಗದುಕೊಟ್ಟೆ. ಕೆಳಗಿಂದಳಿದ

೫-೬ ರೂಪಾಯಿಗಳನ್ನೂ ಉತ್ಸವದೇವರಪಾದದಮೇಲೆಹಾಕಿ ಸಿಂಹಾಸನದಮೇಲೆ ಬಿಟ್ಟು. ನಂತರ ಪಾದದಲ್ಲಿದ್ದ ಎರಡು ತುಳಸಿ ವನ್ನು ಕೇಳಿದರು. ತಂದುಕೊಟ್ಟೆ. ಗೃಹಸ್ಥರು ಒಬ್ಬರೂ ಇರಕೂಡದು ಹೊರಗೆ ಇರಬೇಕೆಂದು ಸ್ವಾಮಿಗಳವರು ಅಪ್ಪಣೆಕೊಡಿಸಿದರು. ಡೆಪ್ಯುಟೀ ಕಮೀಷನರವರು ಎಲ್ಲರೂ ಹೊರಗೆ ಬರಬೇಕೆಂದು ಅಪ್ಪಣೆಕೊಡಿಸಿದರು. ಆಕಾಲದಲ್ಲಿ ನಾನು ಪರಿಚಾರಕ ಚೊಕ್ಕಣ್ಣಯ್ಯ ಸ್ಥಾನೀಕ ಜನಗಳು ಅಧ್ಯಾಪಕನರಸೀಪುರದ ಶ್ರೀನಿವಾಸಯ್ಯಂಗಾರ್ ಲಕ್ಷ್ಮೀನರಸಿಂಹಾಚಾರ್ ಅಣ್ಣಾಸ್ವಾಮಿನರಸಿಂಹಾಚಾರ್ ಇಷ್ಟು ಜನರು ಇದ್ದೆವು. ನಾನು ನರಸೀಪುರದ ಶ್ರೀನಿವಾಸಯ್ಯಂಗಾರ್ ಹೊರತು ಬಾಕಿಯವರು ಹೊರಕ್ಕೆಬಂದರು. ಶ್ರೀನಿವಾಸಯ್ಯಂಗಾರ್ಯರನ್ನು ಡೆಪ್ಯುಟೀಕಮೀಷನರವರು ಆಚೆಕ್ಕೆ ಬರಬೇಕೆಂದು ಹೇಳಿದಮೇಲೆ ಅವರು ನೀವು ಬೇಕಾದ್ದು ಮಾಡಿಕೊ ಎಂದು ಹೊರಕ್ಕೆ ಬಂದರು. ನನ್ನನ್ನು ಕೂಗಿದರು. ಸನ್ನಿಧಿಯನ್ನು ಬಿಟ್ಟು ಬರುವದಿಲ್ಲವೆಂದು ಹೇಳಿದೆ. ೨-೩ ದಫಾ ಹೇಳಿದರು. ನಾನು ಬರಲಿಲ್ಲ. ನನ್ನ ಕೈಯನ್ನು ಎಳೆದು ಡೆಪ್ಯುಟೀಕಮೀಷನರವರು ಹೊರಗೆ ಬಿಟ್ಟು ತೆರೆಯನ್ನು ಅವರೇ ಹಾಕಿ ಸ್ವಾಮಿಗಳನ್ನು ಒಳಗೆ ಬಿಟ್ಟರು. ಸ್ವಾಮಿಗಳವರು ಒಬ್ಬರೇ ಸುಮಾರು ೧೦-೧೨ ನಿಮಿಷದವರಿಗೂ ತೆರೆಯೊಳಗಿದ್ದರು. ತೆರೆಯೊಳಗೆ ನಡೆದ ಅಂಶ ನನಗೆ ತಿಳಿಯದು. ನಂತರ ತೆರೆ ತೆಗೆದುಕೊಂಡು ಹೊರಗೆ ಬಂದರು ಅಮ್ಮನವರ ಗುಡಿಗೆ ಹೋಗುವದಕ್ಕಾಗಿ ಹೊರಟಾಗ ನಾನು ಬಳಿಕ ಸ್ವಾ॥ ರವರನ್ನು ಸಂಪ್ರೋಕ್ಷಣೆ ಏನಾದರೂ ಆಗಬೇಕೆ ಹ್ಯಾಗೆ? ಎಂದು ಕೇಳಿದ್ದಕ್ಕೆ ಶ್ರೀಮನ್ ಮಹಾರಾಣಿಯವರು ಮುಂತಾದವರು ದಯಮಾಡಿಸಿದರೆ ಸಂಪ್ರೋಕ್ಷಣೆಮಾಡುತ್ತಾರೆಯೇ ಈ ಮಾತನ್ನು ತಿರಿಗಿ ನೀನುಹೇಳಿದರೆ ನಿನಗೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಿಸ್ತಾರು ಸುಮ್ಮನಿರು ಎಂದರು. ಆದ್ದರಿಂದ ಈಗ ಸೂಕ್ಷ್ಮವಾಗಿ ಆರಾಧನೆ ನಡಿಯುತ್ತಾ ಇದೆ.

ಓದಿನೋಡಿಕೊಂಡೆ ಸರಿಯಾಗಿದೆ.

ಈಬಳಿಬೇಲೂರ್ ಕೇಶವಭಟ್ಟರು ಎಂದಿದೆ.

ಈ ಪಾಟ್ನಾಲ ಮಹಾಜನಗಳಮುಂದೆ ಪ್ರಸಿಡೆಂಟರ ರೂಬ ರೂಬು ತೆಗೆಯಲಾಗಿದೆ.

[illegible]

ಮ್ಮನವರ ಸನ್ನಿಧಿ ಅರ್ಚಕ ಶೇಷಭಟ್ಟರ ವಾಜ್ಮೂಲ.

ಮ್ಮನವರ ಸನ್ನಿಧಿಗೆ ಶ್ರೀಶೃಂಗೇರೀಸ್ವಾಮಿಗಳವರು ಬಂದರು ರಪತ್ತೆಗಾರ್ ಕರ್ಪೂರವನ್ನು ತೆಗೆದುಕೊ ಅಂದರು. ಕರ್ಪೂರವನ್ನು ಗೆದುಕೊಳ್ಳುವದಕ್ಕೆ ನಾನು ಹೋಗುತ್ತಲು ಶ್ರೀಯವರು ಗರ್ಭಗೃಹದ ಒಳಕ್ಕೆ ಬಂದರು. ಆಕಾಲದಲ್ಲಿ ತೀರ್ಥವನ್ನು ಕೊಡುಅಂದರು. ಕೊಟ್ಟೆ ಕೈತೊಳದುಕೊಂಡರು. ಕುಂಕುಮವನ್ನು ಕೊಡುಎಂದು ಹೆ||ಪಾರಪತ್ತೆಗಾರು ಮತ್ತು ಡೆಪ್ಟೀಕಮೀಷನರವರು ಹೇಳಿದರು. ಸ್ವಲ್ಪಕುಂಕುಮವನ್ನು ಕೊಟ್ಟೆ. ಉತ್ಸವದೇವರಿಗೆ ಅರ್ಚನೆಮಾಡಿದರು.ನಂತರ ಕರ್ಪೂರವನ್ನು ಹತ್ತಿಸಿಕೊಡುಎಂದು ಹೆ||ಪಾರಪತ್ತೆಗಾರು ಡೆಪ್ಟೀಕಮೀಷನರವರು ಹೇಳಿದರು. ಅವರ ಆರ್ಡರ್ ಮೀರಲರಿಯದೆ ಹತ್ತಿಸಿ ಶ್ರೀಯವರ ಕೈಯಲ್ಲಿ ಕೊಟ್ಟೆ ಅವರು ಆರ್ತಿಮಾಡಿ ತಟ್ಟೆಯನ್ನು ನನ್ನ ಕೈಯಲ್ಲಿ ಟ್ಟದ್ದನ್ನು ನಾನು ಪರಿಚಾರಕನಕೈಯಲ್ಲಿ ಕೊಟ್ಟ ನಂತರ ರೂಪಾಯಿ ನ್ನು ದೊಡ್ಡ ಅಮ್ಮನವರ ಪಾದವಮೇಲೆ ಸಮರ್ಪಿಸಿದರು. ಆಮೇಲೆ ಟೀಕಮೀಷನರವರು ಸ್ವಲ್ಪ ಅಲ್ಲಿಬಾ. ಒಂದು ಮಾತು ಹೇಳುತ್ತೇನೆ ರು.ನಾನು ಒಂದುಕ್ಷಣದವರಿಗೂ ಹೊರಕ್ಕೆಬರಲಿಲ್ಲ. ಹೆ||ಪಾರಪತ್ತೆ ರು ನಿನಗೆ ಡೆಪ್ಟೀಕಮೀಷನರವರು ಒಂದು ಮಾತು ಹೇಳುತ್ತಾರೆ ಯೆಂದು ಕರೆದರು. ಈಚೆಗೆ ಬಂದೆ. ಸ್ವಾಮಿಗಳವರು ಒಳಗಿರುವಾಗಲೇ ಯನ್ನು ಹಾಕಿದರು. ಸ್ವಾಮಿಗಳವರು ಒಳಗೆ ಏನು ಮಾಡಿದರೋ ನಾನು ಕಾಣೆ. ಸುಮಾರು ೧೦ ನಿಮಿಷದವರಿವಿಗೂ ತೆರೆಯೊಳಗೆ ಇದ್ದರು ನಂತರ ತೆರೆ ತೆಗೆದು ಡೆಪ್ಟೀಕಮೀಷನರವರು ನನ್ನನ್ನು ಒಳಕ್ಕೆಹೋಗು ಅಂದರು. ಹೋದೆ. ಕುಂಕುಮವನ್ನು ಕೊಡು ಎಂದು ಶ್ರೀಸ್ವಾಮಿಗಳವರು ಕೇಳಿದರು. ತೆಗೆದುಕೊಟ್ಟೆ. ಆ ಕುಂಕುಮವನ್ನು ಸ್ವಾಮಿಗಳವರೇ ಅಲ್ಲಿದ್ದ ದೊಡ್ಡಮನುಷ್ಯರಿಗೆಲ್ಲಾ ಕೊಟ್ಟರು. ನಂತರ ನನಿಗೆ ದಕ್ಷಿಣೆ ಕೊಟ್ಟು ಶ್ರೀಯವರು ಹೊರಟುಹೋದರು. ಬಳಿಕ ಪಾರಪತ್ತೆಗಾರು ರಂಗಾಚಾರ್ಯರನ್ನು ದೇವರ ಆರಾಧನೆ ನಡೆಯಬಹುದೆ? ಸಂಪ್ರೋಕ್ಷಣೆ ಏನಾದರು ಆಗಬೇಕೇ? ಅಂದದ್ದಕ್ಕೆ ಒಳ ಗುಡಿಯಲ್ಲಿ ಆರಾಧನೆ ಆಗುತ್ತೆ ಇಲ್ಲಿಯೂ ಮಾಡು ಎಂದು ಹೇಳಿದರು, ಅಪ್ಪಣೆಪ್ರಕಾರ ಮಾಡಿದೆ.

ಓದಿಹೇಳಿದ್ದನ್ನು ಕೇಳಿದೆ ಸರಿಯಾಗಿದೆ

೧೮-೬-೫೪ ಶೇಷಭಟ್ಟ ರುಜು ಎಂದಿದೆ

ಶ್ರೀಪರಕಾಲಮಠದ ವಿದ್ವಾಂಸರಿಂದ ಬಂದದ್ದು

ಶ್ರೀಮತೇರಾಮಾನುಜಾಯನಮಃ

ಭಗವಚ್ಛಾಸ್ತ್ರೀಯಪ್ರಾಯಶ್ಚಿತ್ತಸಂಗ್ರಹೇ ನಾರದೀಯಸಂಹಿತಾ—

ಪ್ರತಿಲೋಮೈಸ್ತುಸಂಸ್ಪೃಷ್ಟೇ ಬಿಂಬೇ ವೈಖಾನಸೇತರೈಃ । ಅಥಮಸ್ನಪನಂಕುರ್ಯಾದ್ಧೋಮದಾನಸಮನ್ವಿತಮ್ ॥ ವೈಖಾನಸೈಸ್ತುಸಂಸ್ಪೃಷ್ಟೇ ಪಯಸ್ಸ್ನಾನೇನಶುಧ್ಯತಿ । ಪ್ರಭಾಪೀಠಾಸ್ತ್ರಗೇಹಾಂತುಸಮವೇತಚ್ಚತುಷ್ಟಯಮಿತಿ ಯದ್ಬಿಂಬಂಯೇನತಂತ್ರೇಣಸಮಾರಬ್ಧಂಪುರಾದಿತಃ । ಪ್ರಾಸಾದಂವಾತತಸ್ತೇನ ತಂತ್ರೇಣೈವತದರ್ಚಯೇತ್ ॥ ಯೋಽಪಿ ಜೇದನ್ಯಮಾರ್ಗೇಣ ಸನಾಶಂಕರ್ತುಮಿಚ್ಛತಿ । ರಾಜ್ಞೋರಾಷ್ಟ್ರಸ್ಯಸರ್ವಸ್ಯ ನಾಶಂಕರ್ತಾತ್ರನಾರಪಿ ॥ ಕುಲಕ್ಷಯಾಂಚವ್ಯಾಧಿಂಚವಿಪ್ಲವಂದುಃಖಮಂಜಸಾ । ತಂತ್ರಸಂಕರದೋಷಸ್ತು ವಿಶೇಷಾದ್ರಾಜರಾಷ್ಟ್ರಯೋಃ ॥ ದೋಷಾಯೈವಭವೇದ್ವಿಪ್ರಸರ್ವದಾಕುತ್ರಚಿತ್ಕ ತಃ । ತಸ್ಮಾನ್ನಸಂಕರಃಕಾರ್ಯಃ ತಂತ್ರಾಣಾಂಹಿತಮಿಚ್ಛತಾ ॥ ಗೌತಮ ತಂತ್ರಾಣಿಕಾನಿದೇವರ್ಷೇತಾನ್ಯಾಚಕ್ಷ್ವಾದ್ಯಪೃಚ್ಛತಃ । ತಂತ್ರಾಂತ ದೇವತೇ ಪ್ರಾಯಶ್ಚಿತ್ತಂಚಪೂಜಿತೇ ॥ ನಾರದಃ —॥ ವೈಖಾನಸಂ ಪಂಚ ತಂತ್ರಂಪಾಶುಪತಂತಥಾ । ಪಂಚರಾತ್ರಂಮಹಾತಂತ್ರಂ ತ ನ್ಯೇತಾನಿಸುವ್ರತ ॥ ಪೂಜಾಯಾಂವರ್ತಮಾನಾಯಾಂ ಪಂಚರಾತ್ರಾಧ್ವನಾ । ವೈಖಾನಸಾಧ್ವನಾಪಶ್ಚಾತ್ಪೂಜಿತೇಸ್ಥಿತೇಪ್ಯಮಾಪತಃ । ಪ್ರತಿಷ್ಠೋಕ್ತೇನವಿಧಿನಾ ಸಂಸ್ಥಾಪ್ಯಮುನಿಪುಂಗವ । ಅಧಿವಾಸ್ಯಯಥಾನ್ಯಾಯಂ ತಸ್ಮಾದ್ದೋಷಾತ್ಪ್ರಮುಚ್ಯತೇ । ಶೈವೇನಪೂಜಿತೇಪಶ್ಚಾತ್ತಥಾಪಾಶುಪತೇನವಾ । ವಿಧ್ಯಂತರೇಣವಾವಿಪ್ರ ಪಂಚರಾತ್ರೇತರೇಣವಾ ॥ ಪುನಃಪ್ರತಿಷ್ಠಾಂಕೃತ್ವಾತು ಕುರ್ಯಾತ್ಸ್ನಪನಮುತ್ತಮಮ್ । ಏವಂಕೃತೇತುಶಾಂತಿಸ್ಸ್ಯಾದನ್ಯಥಾದೋಷಭಾಗ್ಭವೇತ್ ॥ ಯತ್ಪಂಚರಾತ್ರವಿಧಿನಾ ಸ್ಥಾಪ್ಯಸಂಪೂಜಿತಂಪುರಾ । ತೇನೈವ ಪೂಜನೀಯಂತಚ್ಛಶ್ವತ್ಪಶ್ಚಾದ್ಧಿತಾರ್ಥಿಭಿಃ ॥ ಪೂಜ್ಯೋಭಾಗವತೈರೇವಪ್ರಾಸಾದೇಸ್ಥಾಪಿತೋಹರಿಃ । ಪಂಚರಾತ್ರೋಕ್ತಮಾರ್ಗೇಣ ರಾಜರಾಷ್ಟ್ರವಿವೃದ್ಧಯೇ ಇತಿ ॥—

త్రిస్థితైస్త్వైతైః ప్రాసాదే చ వప్రపూజితే । భక్తైర్భాగవతైర్దేవప్రియచ్ఛతి ॥ రాజ్ఞో రాష్ట్రస్య సర్వేషాం పూజకానాం భృశః । అవైష్ణవైః పూజితో దేవో న ప్రసీదతి కస్యచిత్ ॥ ప్రాయశ్చిత్తే శుభం శశ్వద్విశేషాన్నృపరాష్ట్రయోః ॥ తద్దోషశాంతయే విష్ణోః కార్యం స్నపనముత్తమమ్ ॥ ఇతి ॥—

పరమపురుషసంహితాయామ్.

స్పృష్టే త్వశాస్త్రసంసిద్ధైర్దీక్షితైస్తద్విధానతః । అదీక్షితైర్వా విద్వద్భిర్మూలబింబాదికే తథా । గర్భగేహే ప్రవిష్టే వా పరచక్రాద్యుపద్రవమ్ ॥ పుణ్యాహం వాచయిత్వాంతే శాంతిహోమం తు కారయేత్ ॥ పంచశుద్ధిం క్రమాత్కృత్వా బలిమంత్రేణ సేచయేత్ । స్నపనం కారయేదంతే పూజయేద్విధిపూర్వకమ్ ॥ అసైవ్యస్తంత్రైర్ద్విజశ్రేంనైమిత్తికం తు వా । అర్చనం ధనలోభాద్వా మోహాద్వా న తు సంత్ । యది కుర్యాత్ప్రమాదేన నిష్కృతిం శృణు సువ్రత । సంక్షాలబింబాదీన్ పంచగవ్యేన వారిణా । గోమయేన సమాలిప్య రాలయానపి । పుణ్యాహం వాచయిత్వాథ ప్రోక్షయేత్తు సమం । బేరాణాం స్నపనం కుర్యాన్మధ్యమోత్తమమార్గతః । శాంతిహోమం తతః కృత్వా సమిదాజ్యచరూన్క్రమాత్ । ప్రత్యేకం తు సహస్రం వా జుహుయాన్మూలవిద్యయా । బ్రాహ్మణాన్భోజయేత్పశ్చాత్తేన శాంతిర్భవిష్యతి ॥—

పరమపురుషసంహితాయామ్.

దీక్షాహీనైస్తథా శూద్రైః ప్రతిమాస్పర్శనే సతి । తైరేవ యాగశాలాయాం విప్రైరన్యైస్తు వా తథా । తద్గ్రామవాసినాం న్యూనాం స్థానభ్రంశో భవిష్యతి । పంచగవ్యేన సంప్రోక్ష్య పుణ్యాహం వాచయేత్తతః । స్నపనం కారయేద్బింబే శాంతిహోమం చ కారయేత్ ॥ ఇతి

పారమేశ్వరే—

ప్రతిమాచైవతత్పీఠం ప్రాసాదోగర్భమందిరం । విగ్రహోదేవదేవస్య (సమమేతచ్చతుష్టయమ్)। చతుష్టయమిదంసమమ్ ॥సమాధిశ్చతథాశాంతిః కార్యాతత్రసదాసమా ॥ ఇతి ॥

పాద్మే—ప్రభాపీఠాస్త్రసంస్పర్శాబింబస్పర్శవదిష్యతే ॥ ఇతి ॥

పాద్మే—దీక్షితైరన్యశాస్త్రేషు స్పర్శనస్నపనమాచరేత్ । దీక్షితైరితరైర్వాపి శూద్రైస్తద్వత్సమాచరేత్ ॥ ఇతి ॥

అదీక్షితైర్నరైరేవం స్పృశ్యతేయదిదేవరాట్ । సరాష్ట్రంగ్రామేత్పూర్వం తద్గ్రామంచతథైవచ ॥ తద్గ్రామంచతథైవోక్తం క్షేత్రారంతథైవచ । తన్మండలాధిపోరాజా వాహనానితథైవచ । క్షుతావర్ధతేరాష్ట్రేధనధాన్యగవాంతథా । సచోరైర్దుశ్చరైరేషర్వంచాపహృతంభవేత్ ॥ ఇత్యుపక్రమ్య - ప్రోక్షణంతత్రకర్తు జలవాసపురస్సరం । సద్యోవాసకలంకుర్యా న్నిశివాదివసేపివా. తిథిర్నచనక్షత్రం కాలవేళానవిద్యతే ॥ సద్యఏవతు కర్తవ్యమితిశాస్త్రస్య నిశ్చయః । ఏవంయఃకురుతేభక్త్యాప్రాయశ్చిత్తం సుదుష్కరం । గ్రామవృద్ధికరంపుణ్యం రాజరాష్ట్రవివర్ధనమ్ ॥ దుర్భిక్షభయనాశస్స్యాత్సదాసన్నిధిరేవచ । తస్మాత్సర్వప్రయత్నేన క్షిప్రం శాన్తింసమాచరేత్ । లోభాద్వాయదివామోహాదన్యథేద్యదిదేశికః । తత్పూజానిష్ఫలంయాతి తద్రాష్ట్రంచవినశ్యతి ॥ తస్మాత్సర్వప్రయత్నేన సద్యస్సంప్రోక్షణంచరేత్ ॥ ఇతి ॥

ఈశ్వరసంహితాయాంప్రాయశ్చిత్తాధ్యాయే

తతస్తుభిఃబస్యాస్స ప్రశ్నస్సర్వాదౌమునిపుంగవాః । ప్రాయశ్చిత్తంప్రవక్ష్యామి శృణుధ్వమవధానతః । అస్నాతోదేశికశ్చైవం చండాలాద్యుపఘాతతః । కేశాస్థ్యాద్యశుచిస్పృష్టః స్త్రియఃగత్వాప్య

స్పృశేచ్చేద్భగవద్బింబం స్నాపయేన్నవభిర్ఘటైః । ఆచ్ఛాంతిహోమంచ శతవారంజపేన్మనుమ్ । ఏతేషాంగర్భగేహాంతః ప్రవేశశ్చేత్తదావిధిమ్ । సంస్నాప్యపంచభిర్గవ్యైశ్శాంతిహోమాదికంచరేత్ । అదీక్షితైరన్యతంత్రదీక్షితైరర్చకేతరైః । స్పృష్టేబింబేతథాపుర్యాత్స్నపనంత్వధమాధమమ్ ॥ శాంతిహోమంజపంచాపి తద్దోషస్యప్రశాంతయే । ఏతేషాంగర్భగేహాంతః ప్రవేశేనవభిర్ఘటైః । సంస్నాప్యదేవదేవేశం శాంతిహోమాదికంచరేత్ స్త్రీభిర్వానుపనీతైర్వాతథావైఘానసైర్ద్విజైః । అవైష్ణవైర్వాసంస్పృష్టే బింబేత్వధమమధ్యమం । స్నపనంవిధివత్కృత్వాశాంతిహోమకంచరేత్ ॥ ఏతైః ప్రవిష్టే గేహాంతరధమాధమమార్గతః । సంప్యవిధివద్దేవం శాంతిహోమంసమాచరేత్ ॥ ఇతి ॥

పారమేశ్వరక్రియాకాండే—

షైరుపహతంజ్ఞాత్వా ప్రాసాదప్రతిమాదికమ్ । అసంప్రోక్షణంకుర్వన్రాజానంరాష్ట్రమంజసా । దేవతాయతనంగ్రామం నాశయేన్నాత్రసంశయః ॥ తస్మాత్సంప్రోక్షణంకార్యం ప్రాసాదప్రతిమాదిషు ॥ ఇతి ॥

వామనసంహితాయామ్—భగవాన్

ఆదౌమయాభగవతాశాస్త్రమేతదుదీరితమ్ । తస్మాద్భాగవతం శాస్త్రమితిలోకేమహీయతే ॥ దీక్షితైస్సాత్వతైరేవ భగవద్వంశజైస్తథా । జ్ఞానయోగాదినిష్ఠైశ్చ వేదవిద్భిర్ద్విజోత్తమైః । శుద్ధంభాగవతంశాస్త్రమనుష్ఠేయంమదాజ్ఞయా । అర్చనంభగవద్వంశ్యైః కార్యంనాన్యైర్నసంశయః । అన్యథాచేన్మహాదోషారౌరవస్యైవకారణం । ఇత్యుక్త్వాఋషిభిస్సార్ధం తూష్ణీమాస్తేజగత్పతిః ॥ ఋషయః । దేవదేవదయాసింధో సర్వజ్ఞజగతాంనిధే । భగవద్వంశజాతా

నా ముత్పత్తిః కీదృశీ మతా । నానుష్ఠేయమిదం శాస్త్రమన్యై
మాత్కథమ్ । దీక్షితాః కేన వా జాతాః కథయస్వ మహామతే॥ శ్రీ
వానువాచ ॥—॥ మన్ముఖేద్బ్రాహ్మణాస్సర్వే సృష్టావాదౌ చ జజ్ఞిరే
వివిధైశ్చరణైర్యుక్తా గోత్రైశ్చ వివిధైర్యుతాః । తేషాం మధ్యే పంచ
గోత్రాః పంచరాత్రాధికారిణః ॥ ఇత్యుపక్రమ్య ॥ చక్రాబ్జమండ
లే శుద్ధే సర్వాభీష్టప్రదే శుభే । యస్మాద్భగవతా సాక్షాత్త్వయా దీక్షావి
ధిః కృతః ॥ నామతో దీక్షితాస్తస్మాద్భగవద్వంశజాస్స్మృతాః ॥ —
ఔపగాయనశాండిల్యభరద్వాజాశ్చ కౌశికః । మౌంజాయనస్తు పంచైతే
భగవద్వంశజాస్స్మృతాః । భగవద్వంశజైరేవ పంచరాత్రపరా
యణైః । యా పూజా క్రియతే మహ్యం సర్వకామఫలప్రదా । దీక్షితై
గుణాఢ్యైర్వాపి భగవద్వంశజైః కృతమ్ । నిత్యోత్సవాదికం కర్మభు
క్తిప్రదం భవేత్ । అన్యైః కృతా తు యా పూజా దీక్షాసంస్కార
లైః । పరార్థే నిష్ఫలా జ్ఞేయా సర్వదోషయుతా భవేత్ ॥ ఇతి ॥

ఏవమాదీని పరశ్శతాని ప్రమాణాని శ్రీభగవచ్ఛాస్త్రసంహితా
సుదృశ్యంతే—

శ్రీపాంచరాత్రరక్షాయామ్.

శ్రీవారాహపురాణే—ధరణీవరాహ సంవాదే ॥

తైలేనాభ్యక్తసర్వాంగ ఉపానద్గూఢపాదకః । యో నరః ప్రవిశే
ద్గేహం మమ భూతధరే శుభే । స యాతి గృహపాలానాం యోనౌ జన్మ
త్రయం శుభే ॥ ఇతి ॥

తత్రైవాన్యత్ర భగవదపచారపరిగణనే ॥

యానైర్వా పాదుకాభిర్వా గమనం భగవద్గృహే । ఇత్యుపక్రమ్య
ఉపచారశతేనాపి న క్షమామి వసుంధరే ॥ ఇత్యంతం ద్రష్టవ్యమ్,/

ವೇದಮಾರ್ಗೇತ್ಯಾದಿಗಳಾದಂಥಾ ಶ್ರೀನಿವಾಸ್ಯೆಯ್ಯಂಗಾರ್ಯರವರಿಗೇ
ರಾಗೆ ಒಪ್ಪಿಸತಕ್ಕ ಬಗ್ಗೆ ಮೇಲುಕೋಟೆ ಅರ್ಚಕರು ಕೇಶವಭಟ್ಟರು
ಬರೆದುಕೊಟ್ಟ ಶಾಸ್ತ್ರವಚನಗಳು.

ఉత్సవం వాసుదేవస్య దీక్షాసంస్కారవర్జితః । యః కుర్యాత్తు
ప్రమాదేన రాజరాష్ట్రభయం భవేత్ ॥ అసంగీకృత్య వైదీక్షా మం
చార్యాచ్ఛాస్త్రనోదితః । యః పూజయతి దేవేశం తదా రాష్ట్రక్షయో
భవేత్ ॥ వైఖానససహితాథర్వణయ భృగుణా తంత్రమీరితం । వైఖానసా
ద్యం యత్తత్రం తదా బ్రాహ్మణసేవితం ॥ యామళం కోట్టవీతంత్రమ
ఫలామ్యైరనుష్ఠితం । అన్యోన్యస్యం తంత్రసాంకర్యం న కుర్యాత్తు కథంచన
తత్సర్వప్రయత్నేన సాంకర్యం వర్జయేత్ సుధీః ॥ యది చేత్ స్నప
న కుర్యాదుత్తమోత్తమమార్గతః । పుణ్యాహం కారయేత్ పూర్వం
శాంతిహోమం తు కారయేత్ ॥ జలసంప్రోక్షణం కృత్వా వాస్తుహోమం
కారయేత్ । బ్రాహ్మణాన్ భోజయేత్ పశ్చాత్ ప్రదద్యాత్ దశధే
ం । ఆలయే పంచరాత్రేణ స్థాపితం పూజితం పురా ॥ అన్యమార్గే
వైవత్సా అపి వా పూజయేత్ । పూజయేద్యది దేవేశం తంత్రభేదేన
వా హరిం । తద్రాష్ట్రం నాశయత్యాశు స పాపీ కిల్బిషీ భవేత్ ॥ ఉక్తం
భగవతా పూర్వం పంచరాత్రం విశేషతః । ఉత్కృష్టే సాత్వతే తంత్రే పూ
జా శాస్త్రోక్తమార్గతః । పంచరాత్రం తథా శైవం వైఖానసమితి త్రి
ధా । తత్తచ్ఛాస్త్రోక్తమార్గేణ వాస్తుసంగ్రహణాదయః । తథా తత్రై
వ కర్తవ్యాః ప్రాసాదప్రతిమాదయః । శేషాం వాస్త్వాదిసాంకర్యాత్
రాష్ట్రనాశో ధనక్షయః ।

శ్రీభిర్వా దుపనీలైర్వా తథా వైఖానసైర్ద్విజైః
అవైష్ణవైర్వా సంస్ప్రష్టే బింబే చేత్ తథమమధ్యమం
స్నపనం విధివత్ కృత్వా శాంతిహోమాదికం చరేత్

ಏತೈಃಪ್ರವಿಷ್ಟೆಗೆಹಾಂತರಧಮಾಧಮ ಮಾರ್ಗತಃ
ಸಂಸ್ನಾಪ್ಯವಿಧಿವದ್ದೇವಂಶಾಂತಿಹೋಮಂಸಮಾಚರೇತ್

ಇತ್ಯಾದಿ ವಚನಗಳಿಂದ ಶ್ರೀಪಾಂಚರಾತ್ರರೀತ್ಯಾ ಪೂಜಾದಿಗಳು ನಡೆಯುವ ದೇವಾಲಯಗಳಲ್ಲಿ ಶೈವ ವೈಖಾನಸ ತಂತ್ರದಿಂದಲೂ ಪಂಚರಾತ್ರಶಾಸ್ತ್ರರೀತ್ಯಾ ದೀಕ್ಷೆಯಿಲ್ಲದೆಯಿರುವವರಿಂದಲೂ ಪೂಜೆ ನಡಿಸಕೂಡದೆಂದೂನೂ ಬಿಂಬಸ್ಪರ್ಶಾದಿಗಳು ಮಾಡಕೂಡದೆಂದೂನೂ ಹಾಗೆ ಬಲಾತ್ಕರಿಸಿ ಮಾಡಿದಲ್ಲಿ ಮಹಾರಾಜರಿಗೂ ಪ್ರಜೆಗಳಿಗೂ ಕೇವಲ ಅಶ್ರೇಯಸ್ಸುಂಟಾಗುತ್ತೆಂದು ಹೇಳಿರುತ್ತೆ. ಅದರ ಶಾಂತಿವಿಷಯದಲ್ಲಿ ಅಲ್ಲಿ ಯಾವವಿಧವಾಗೂ ಎಷ್ಟುಮಟ್ಟಿಗೆ ಸಾಂಕರ್ಯಉಂಟಾಗಿದೆಯೋ ಅದು ನಾನು ತಿಳಿದಹೊರ್ತು ಪ್ರಾಯಶ್ಚಿತ್ತ ಹೇಳುವದಕ್ಕೆ ಆಗುವದಿಲ್ಲವಾ ಶ್ರುತಪಡಿಶಿಇದೇನೆ. ಯತಿ ಪೂಜೆ ಮಾಡತಕ್ಕದ್ದೆ ಆಗಲಿ ಬಿಂಬ ಸ್ಪ ಮಾಡುವದಕ್ಕೆ ಆಗಲಿ ಯಾವ ಮತಸ್ಥರಾದಾಗ್ಯೂ ಮಾಡಕೂಡದೆಂ ಹೇಳುವವಚನವು ಸಹ ಉದಹರಿಸುತ್ತೇನೆ.

ನೈವಾಧಿಕಾರಿಸನ್ಯಾಸೀ ಬ್ರಾಹ್ಮಣೋಪ್ಯುಕ್ತಲಕ್ಷಣಃ ॥
ಇತರೇಪಿತ್ರಯೋವರ್ಣಾಃ ಯಜನೇನಾಧಿಕಾರಿಣಃ॥

ಇನ್ನೂ ಅನೇಕವಚನಗಳು ಇರುತ್ತೆಯಾಗಿ ಪ್ರಕೃತದಲ್ಲಿ ಸಭೆಗೆ ಒಪ್ಪಿಸತಕ್ಕಬಗ್ಯೆ ನಾನು ಬರಲು ಅವಕಾಶವಿಲ್ಲದೆಇರುವದ್ದರಿಂದ ತಮಗೆ ಬರೆದು ಕಳುಹಿಸಿರುತ್ತೇನೆ.

ಕೇಶವಭಟ್ಟ ನರುಜು ಎಂದುಇದೆ

...ದ್ವೇದಮಾರ್ಗೇತ್ಯಾದಿಗಳಾದಂಥಾ ಶ್ರೀರಂಗಪಟ್ಟಣದ
ವೈಷ್ಣವಮಹಾಜನಸಭಾಪ್ರಸಿಡೆಂಟರಾದ
ಸಿ. ಶ್ರೀನಿವಾಸೈಯ್ಯಂಗಾರ್ಯರವರ ಸಮುಕ್ಷಮಕ್ಕೆ.

ಶ್ರೀಬ್ರಹ್ಮತಂತ್ರಪರಕಾಲಸ್ವಾಮಿಗಳವರ ಶ್ರೀಮಠದ ಶ್ರೀಕಾರ್ಯಕರ್ತರು ಮಾಡುವ ವಿಜ್ಞಾಪನೆ. ಉಭಯಕುಶಲೋಪರಿ. ಸಾಂಪ್ರತ.

ನೀವು ಶ್ರೀರಂಗಪಟ್ಟಣದ ವೈಷ್ಣವ ಮಹಾಜನಗಳ ಪ್ರಸಿಡೆಂಟ್ಸರಾಗಿ ಶ್ರೀಮಠಕ್ಕೆ ಬರೆಸಿ ಕಳುಹಿಸಿದ ೧೯೫೯ನೇ ಇಸವಿ ಜೂನ್ ೨೬ ನೇ ತಾರೀಖಿನ ವಿಜ್ಞಾಪನ ಪತ್ರಿಕೆಯು ಅದರ ಮುಲಪ್ರತಿಗಳು ಸಹ ಬಂದು ತಲಪಿ ಅವುಗಳನ್ನು ಶ್ರೀಗಳವರು ಪರಾಂಬರಿಸಿದರು.

ಶ್ರೀಶೃಂಗೇರಿಸ್ವಾಮಿಗಳವರು ಶ್ರೀರಂಗನಾಥಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿದ್ದ ಕಾಲದಲ್ಲಿ ಅವರು ಶಾಸ್ತ್ರಕ್ಕೂ ಪದ್ಧತಿಗೂ ವಿರೋಧವಾದ ನಡವಳಿಕೆಗಳನ್ನು ನಡೆಸಿ ಇರುತ್ತಾರೆಂದು ಅಲ್ಲಿನ ಮಹಾಜನಗಳು ತೀರ್ಮಾನಿಸಿರುವದು ಸರಿಯಾಗಿರುತ್ತೆಂದು ಶ್ರೀಗಳವರು ಅಭಿಪ್ರಾಯಪಡುತ್ತಾರೆ.

ಈವಿಷಯ ವ್ಯವಸ್ಥೆಯಿಂದ ದೇವರಿಗೆ ಸಂಪ್ರೋಕ್ಷಣೆಆದಹೊರತು ವೈಷ್ಣವಸಿದ್ಧಾಂತಕ್ಕೆ ಸಂಬಂಧಪಟ್ಟ ಜನಗಳು ಯಾರೂನೂ ದೇವಸ್ಥಾನದಲ್ಲಿ ತೀರ್ಥಪ್ರಸಾದವನ್ನು ಅಂಗೀಕರಿಸತಕ್ಕದ್ದು ಉಚಿತವಲ್ಲವೆಂದು ಶ್ರೀಯವರೂ ಸಹ ಅಭಿಪ್ರಾಯಪಟ್ಟು ಅದೇಮೇರೆ ಶ್ರೀಮಠದ ಗುಮಾಸ್ತರಿಗೂ ಸಹ ಪ್ರತ್ಯೇಕ ಅಪ್ಪಣೆ ಕೊಡಿಸಿಯಿರುತ್ತಾರೆ. ಈ ಮೇರೆ ನಿಮಗೆ ತಿಳಿಸುವಂತೆ ಶ್ರೀಗಳವರು ಅಪ್ಪಣೆಕೊಡಿಸಿರುವ ಅಂತ ಸೂಚಿಸಿರುತ್ತೇನೆ.

ಈ ತಾರೀಖು ೨೯ನೇ ಜೂನ್
ಸನ್ ೧೯೫೯ನೇ ಇಸವಿ

ರಂಗಾಚಾರ್
ಶಿರಸ್ತೇದಾರ್

H.H. [illegible]

To

Colonel J. [illegible] Pilbeck

Private Secretary

to Her Highness the Maharani

Regent

Mysore

3044
15.12.95

M. Secy
15.12.95

Sir,

I am directed by the Akhila-vaishnava Mahajana Sabha to forward herewith the printed proceedings of the said Sabha held on the 10th and 12th November 1895.

The proceedings go to show a brief outline of the circumstances which attended the Sringeri Swamy's visit to Sriranga Swamy's temple Seringapatam and the events that necessitate the Samprokshana ceremony. I beg you will kindly place this before Her Highness the Maharani Regent for favourable consideration.

I beg to remain Sir
Your most obedient Servant
[illegible]

14th Decr 1895

Honorary Secretary
Akhila vaishnava mahajana Sabha Mysore

೧೮೯೫ ನೇ ಇಸವಿ ನವಂಬರ್ ತಾರೀಖು ೧೦ ರಲ್ಲು ಮೈಸೂರು ಚಾಮರಾಜಪೇಟೆಯಲ್ಲಿರುವ ಶ್ರೀಮಾನ್ ಪುಸ್ತಕಂ ತಿರುಮಲಾಚಾರ್ಯರ ಕಮಲಾನಿಲಾಸಭವನದಲ್ಲಿ ಅಖಿಲವೈಷ್ಣವ ಮಹಾಜನಸಭಾಮೆಂಬರುಗಳು ನಡೆಸಿದಪ್ರೊಸೀಡಿಂಗ್ಸ್.

ಹಾಜರಿದ್ದಮೆಂಬರುಗಳಸಂಖ್ಯೆ ೨೦೧

ಶ್ರೀ॥ ಉ॥ ವೇದಾಂತಪ್ರವರ್ತಕರಾದ ವೇದಾಂತವಿದ್ಯಾವಿಶಾರದರಾದ ವೆಂಕಟಕೃಷ್ಣಮಾಚಾರ್ಯರವರು ಅಗ್ರಾಸನವನ್ನು ವಹಿಸಬೇಕೆಂದು ಎಗ್ಜಿಕ್ಯುಟೀವ್ಇಂಜನೀಯರ್ ಮ॥ ರಾ॥ ಗೋವಿಂದಾಚಾರ್ಯರು ಪ್ರೊಪೋಸ್ ಅಸಿಸ್ಟೆಂಟ್ ಮ॥ ಬ್ರ॥ ಕೃಷ್ಣಯ್ಯಂಗಾರ್ಯರು ಪ್ರಪೋಜ್‌ಮಾಡಿದ್ದನ್ನು ಶ್ರೀ॥ ಉ ॥ ಅರಮನೆ ಧರ್ಮಾಧಿಕಾರಿ ಚಕ್ರವರ್ತ್ಯಯ್ಯಂಗಾರ್ರು ಅನುಮೋದಿಸಿದರು. ಸರ್ವರೂ ಒಪ್ಪಿದರು.

ಶ್ರೀ॥ಉ॥ ವೆಂಕಟಕೃಷ್ಣಮಾಚಾರ್ಯರು ಅಗ್ರಾಸನವನ್ನು ವಹಿಸಿದರು. ಈಸಭೆಯನ್ನು ಶ್ರೀ॥ ಉ ॥ ಧರ್ಮಾಧಿಕಾರಿಚಕ್ರವರ್ತ್ಯಯ್ಯಂಗಾರ್ರು ಶ್ರೀ॥ಉ॥ ಪಂಡಿತರತ್ನಂತರ್ಕತೀರ್ಥ ಕಸ್ತೂರಿ ರಂಗಾಚಾರ್ಯರವರು, ಶ್ರೀ।ವೇ॥ ವೈಯ್ಯಾಕರಣಿ ಪುಟ್ಟಕೂಸಾಚಾರ್ರು ಆಸ್ಥಾನಪಂಡಿತಶ್ರೀ।ವೇ॥ನಾಮಗಿರುಂಡ್ಲು ಶಾಮಾಚಾರ್ರು, ಶ್ರೀ॥ವೇ॥ ವಿದ್ವಾನ್ ಜಯರಾಯಾಚಾರ್ಯರು. ಶ್ರೀ॥ಉ॥ ಪೆರೀಸ್ವಾಮಿ ತಿರುಮಲಾಚಾರ್ಯರವರು ಶ್ರೀ॥ಉ॥ ಕೇಶವಭಟ್ಟರು. ಶ್ರೀ॥ಉ॥ ನವೀನಂರಾಮಾನುಜಾಚಾರ್ಯರವರು, ಶ್ರೀ॥ಉ॥ ಘನಪಾಟಿ ಕೋಂಬೂರುಕೃಷ್ಣಮಾಚಾರ್ರು, ಶ್ರೀ॥ಉ॥ ಸುದರ್ಶನಾಚಾರ್ಯರು, ಶ್ರೀ॥ಉ॥ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ರು, ಶ್ರೀ॥ಉ॥ ಅಹೋಬಲಮಠಂ ಶಾಮಯ್ಯಂಗಾರ್ರು, ಶ್ರೀ।ಉ॥ಶರಕೆನರಸಿಂಹಾಚಾರ್ರು ಶ್ರೀ॥ಉ॥ಪುತ್ತೂರುಶ್ರೀನಿವಾಸರಾಘವಾಚಾರ್ರು ಶ್ರೀ।ಉ॥ಪುರಾಣಂ ಶೇಷಾಚಾರ್ಯರು; ಶ್ರೀ॥ವೇ॥ವೈಯ್ಯಾಕರಣಶಾಮಾಚಾರ್ರು ಶ್ರೀ॥ ವೇ॥ ವೈಯ್ಯಾಕರಣಭೀಮಾಚಾರ್ರು ಶ್ರೀ॥ಉ॥ನರಸಿಂಹರಂಗಾಚಾರ್ಯರು ಶ್ರೀ॥ ಉ ॥ ಸಜ್ಜಯಂ ತಿರುಮಲ ತಾತಾಚಾರ್ಯರು, ಶ್ರೀ॥ಉ॥ಪೆನಗೊಂಡೆ ಶೇಷಾಚಾರ್ಯರು, ಶ್ರೀ॥ಉ॥ಆಂಡಾಪುರಂಕೃಷ್ಣಮಾಚಾರ್ಯರು, ಶ್ರೀ॥ವೇ॥ಪುರಾಣಂಶ್ರೀನಿವಾಸಾಚಾರ್ಯರು ಮ॥ರಾ॥ ಎಗ್ಜಿಕ್ಯುಟೀವ್ಇಂಜನೀಯರ್‌ಗೋವಿಂದಾಚಾರ್ಯರು ಶ್ರೀ॥ಉ॥ ಮಾದಂಪ

ನಿವಾಸಾಚಾರ್ಯರು, ಪಿಂಛನ್ ಅಮಲ್‌ದಾರ್ ಶ್ರೀ॥ ಉ ॥ ಅಣ್ಣಾಜ ಯ್ಯಂಗಾರ್ಯರು, ಅಡ್ವಕೇಟ್ ಶ್ರೀ॥ಉ॥ ಕೃಷ್ಣಯ್ಯಂಗಾರ್ಯರು ಬಿ.ಯೆ. ಮ॥ರಾ॥ಅಡ್ವಕೇಟ್ ಕೃಷ್ಣರಾಯರು- ಮ॥ ರಾ ॥ ಅಡ್ವಕೇಟ್ ಯಂ, ಸಿ, ರಂಗೈಯ್ಯಂಗಾರು ಬಿ ಯೆ. ಅಡ್ವೊಕೇಟ್ ಶ್ರೀ ॥ಉ॥ಲಕ್ಷ್ಮೀನರಸಿಂಹಾ ಚಾರ್ ಬಿ.ಯೆ. ಮ॥ರಾ॥ಅಡ್ವಕೇಟ್ ಆಂಡಾಪುರಂ ನರಸಿಂಹಯ್ಯಂಗಾರು ಬಿ,ಯೆ.ಬಿಯಲ್,ಮ॥ ರಾ॥ಅಡ್ವಕೇಟ್ ಟಿ,ಕಂಠೀರವಾಚಾರು ಬೆಂಗಳೂರು ಅಡ್ವಕೇಟ್ ಬಿ,ಶ್ರೀನಿವಾಸೈಯ್ಯಂಗಾರು ಸಂಸ್ಕೃತವಿದ್ಯಾಶಾಲಾಉಪಾಧ್ಯಾಯ ಸೋ।ಶ್ರೀ॥ವೇ॥ಶ್ರೀನಿವಾಸಾಚಾರು ಶ್ರೀ। ವೇ॥ಖಡಾಕೃಷ್ಣಾಚಾರು ಶ್ರೀ॥ಉ॥ಪುಸ್ತಕಂ ತಿರುಮಲಾಚಾರು, ಮೇಲುಕೋಟೆ ದೇವಸ್ಥಾನದ ಅರ್ಚಕ ಶ್ರೀ॥ಉ॥ ಕೇಶವಭಟ್ಟರು ಅಡ್ವಕೇಟ್ ಶ್ರೀ॥ಉ॥ ವರದರಾಜೈ ಯ್ಯಂಗಾರು ಬಿ,ಯೆ.ಬಿಯಲ್ ಸೋ,ಅಡ್ವಕೇಟ್ ಶ್ರೀ।ಉ॥ರಂಗಸ್ವಾಮೈ ಯ್ಯಂಗಾರು ಬಿ.ಯೆ ಬಿಯಲ್ ಅರಮನೆಪರ್ಷನಲ್ ಮ್ಯಾನೇಜರ್ ಶ್ರೀ॥ವೇ॥ ನಾರಣಸ್ವಾಮಿರಾಯರವರು ಶ್ರೀ । ಉ ॥ ವ್ಯಾಕರಣಂ ತಾತಾಚಾರು ಶ್ರೀ॥ಉ॥ಸೊ. ಕುಪ್ಪನೈಯ್ಯಂಗಾರು ಎಂ. ಡಿ. ಶಿಂಗಳಾಚಾರ್ಯರು ಬಿ. ಎ.ಬಿ.ಎಲ್. ಇವರೇಮೊದಲಾದ ಅನೇಕಜನದೊಡ್ಡಪಂಡಿತರು ಮತ್ತು ಇ ತರಮಹಾಜನಗಳು ಈಸಭೆಯನ್ನು ಅಲಂಕರಿಸಿದ್ದರು. ಈಸಭೆಯ ಕಾರ್ಯದ ರ್ಶಿಗಳಾದ ಶ್ರೀ॥ಉ॥ ಅನಂತಕೃಷ್ಣಮಾಚಾರ್ಯರು ದೇವರಸ್ತುತಿ ರೂ ಪವಾದ ಒಂದು ಶ್ಲೋಕವನ್ನು ಹೇಳಿ ಸಭೆಯನ್ನು ಸೇರಿಸುವದಕ್ಕೆ ಕಳು ಹಿಸಲ್ಪಟ್ಟ ವಿಜ್ಞಾಪನಾಪತ್ರಿಕೆಯನ್ನು ಓದಿದರು. ತರುವಾಯ ಶ್ರೀ ॥ಉ॥ ಕಚ್ಚಿಭುಜಂ ಶ್ರೀನಿವಾಸಾಚಾರ್ಯರು ಹೇಳಿದ್ದೇನಂದರೆ.—

“ ಮಹನೀಯರೆ ! ಅಖಂಡಾದ್ವೈತಸಭೆಯವರು ಮೀಟಿಂಗ್ ಮಾ ಡಿ ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿಯವರ ಸಂಪ್ರೋಕ್ಷಣೇವಿ ಷಯವಲ್ಲಿಬರಮಾಡಿರತಕ್ಕ ಪ್ರಸೀಡಿಂಗ್ಸನ್ನು ಅನೇಕ ವಿದ್ವಾಂಸರು ಓದಿಅ ವುಗಳಅರ್ಥವನ್ನು ತಿಳಿದುಕೊಂಡು ಇರಬಹುದು. ಅದಕ್ಕೆ ಸಮಾಧಾ ನರೂಪವಾಗಿಕೆಲವು ಅಂಶಗಳನ್ನು ಶ್ರೀ॥ಉ॥ ಸಭಾಕಾರ್ಯದರ್ಶಿಗಳು ಒ ದಗಿಸಿಕೊಟ್ಟು ಇದ್ದಾರೆ. ಅಪ್ಪಣೆಆದರೆ ಅವುಗಳನ್ನು ಓದುತ್ತೇನೆ. ಇ ಲ್ಲಿ ಯಿರತಕ್ಕ ಮಹಾಜನಗಳು ಅವುಗಳ ಗುಣದೋಷಗಳನ್ನು ಚರ್ಚಿ ಸಿ ತಿದ್ದುಪಾಟುಮಾಡಿ ಇನ್ನು ಸೇರಿಸತಕ್ಕದ್ದು ಯಾವದಾದರು ಯಿದ್ದರೆಅ ವನ್ನು ಸೇರಿಸಿ ಪ್ರಚುರ ಮಾಡುವದಕ್ಕೆ ಅನುಜ್ಞೆ ಆಗಬೇಕೆಂದು ಹೇಳಿ ದರು.ಅದಕ್ಕೆ ಸರ್ವರೂ ಒಪ್ಪಿದರು.

ಸಭಾಸೆಕ್ರಟೇರಿ ಶ್ರೀ॥ ಉ॥ ಪುಟ್ಟಪರ್ತಿಶೇಷಾಚಾರ್ಯರು ಒ
ದಗಿಸಿಕೊಟ್ಟಿರತಕ್ಕ ಶಾಸ್ತ್ರಾರ್ಥವನ್ನು ಓದುವದಕ್ಕೆ ಮುಂಚೆ ಶ್ರೀ॥ಉ॥
ಬಿ।ಸಿ॥ ಶ್ರೀನಿವಾಸೈಯ್ಯಂಗಾರು ಅಖಂಡಾದ್ವೈತ ಸಭಾಪ್ರಸೀಡಿಂಗ್ಸ
ನ್ನು ಓದಬೇಕೆಂದು ಹೇಳಿದರು. ಅದಕ್ಕೆ ಶ್ರೀ॥ಉ ॥ ಈಸಭಾಕಾರ್ಯದ
ರ್ಶಿಗಳಾದ ಪುಟ್ಟಪರ್ತಿ ಶೇಷಾಚಾರ್ಯರು ಸದರೀಪ್ರಸೀಡಿಂಗ್ಸಿನಲ್ಲಿಕಂಡ
ಶಾಸ್ತ್ರಾರ್ಥಗಳೆಲ್ಲಾ ಅನುವಾದ ಮಾಡಿ ಸಮಾಧಾನ ಬರದುಯಿದೆ. ಆ
ದ್ದರಿಂದಅದನ್ನು ಓದತಕ್ಕದ್ದು ಕಾಲವಿಳಂಬಕ್ಕೆಹೇತುವಾಗುತ್ತದೆ ಎಂದು
ಹೇಳಿದರು.ಶ್ರೀ॥ಉ॥ಶ್ರೀನಿವಾಸೈಯ್ಯಂಗಾರು ಮತ್ತುಸಭೆಯವರುಸಹ
ಅಖಂಡಾದ್ವೈತ ಸಭಾಪ್ರಸೀಡಿಂಗ್ಸನ್ನು ಪ್ರತ್ಯೇಕವಾಗಿ ಓದತಕ್ಕದ್ದು
ಅವಶ್ಯಕವಿಲ್ಲವೆಂದು ತೀರ್ಮಾನಮಾಡಿದರು. ತರುವಾಯಈ ಸಭೆಯಲ್ಲಿ ನ
ಡೆಯತಕ್ಕ ವಿದ್ಯಮಾನಗಳೆಲ್ಲಾ ಬರದುಕೊಳ್ಳುವದಕ್ಕೆ ಒಬ್ಬರು ಲೇಖಕರ
ನ್ನು ನೇಮಕ ಮಾಡಬೇಕೆಂದುಶ್ರೀ॥ಉ॥ಪುಟ್ಟಪರ್ತಿಶೇಷಾಚಾರ್ಯರುಹೇ
ಳಿದ್ದಕ್ಕೆಶ್ರೀ॥ಉ।ಜವಳಿಕೃಷ್ಣಯ್ಯಂಗಾರು ಶ್ರೀ॥ಉ॥ನವೀನಂರಾಮಾ
ನುಜಾಚಾರ್ಯರು ಶ್ರೀ॥ ವೇ॥ ಜಯರಾಯಾಚಾರ್ಯರು ಶ್ರೀ। ವೇ॥ ಭೀ
ಮಾಚಾರ್ಯರುಅನುಮೋದಿಸಿದರು. ಅದಕ್ಕೆ ಸರ್ವರೂಒಪ್ಪಿದರು.

ಈಸಭೆಯಲ್ಲಿದ್ದ ಮ ॥ ವೆಂಕಣ್ಣಯ್ಯನವರುಈ ಸಭೆಯಲ್ಲಿನಡೆಯತಕ್ಕ
ವಿದ್ಯಮಾನಗಳನ್ನು ಬರೆದುಕೊಳ್ಳಬೇಕೆಂದು ವಿಧಾಯಕವಾಯಿತು. ಆಮೇ
ಲೆ ಸಭಾಕಾರ್ಯದರ್ಶಿಗಳಾದ ಶ್ರೀ॥ಉ॥ ಪುಟ್ಟಪರ್ತಿಶೇಷಾಚಾರ್ಯರುಒ
ದಗಿಸಿಕೊಟ್ಟಿದ್ದ ಶಾಸ್ತ್ರಾರ್ಥಸಮಾಧಾನಗಳನ್ನು ಮೊದಲು ಶ್ರೀ॥ಉ।
ಕಚ್ಛಭುಜಂಶ್ರೀನಿವಾಸಾಚಾರ್ಯರು ಮಧ್ಯಾಹ್ನ ೪ಘಂಟೆಯಿಂದ ರಾತ್ರಿ೭
ಘಂಟೆವರಿವಿಗೂ ಓದಿದರು. ಅನಂತರ ಅವರಿಗೆ ಆಯಾಸವಾದ್ದರಿಂದಶ್ರೀ॥
ಉ॥ಆನಂದಾಳ್ವಾರವರು ರಾತ್ರಿ೯॥ ಘಂಟೆವರಿವಿಗೂ ಓದಿದರು. ಅನೇಕ
ವಿಷಯಗಳಲ್ಲಿ ಪಂಡಿತರುಗಳು ಚರ್ಚೆಮಾಡಿ ಅಲ್ಲಲ್ಲಿಯೇತಿದ್ದುಪಾಟುಗಳ
ನ್ನು ಮಾಡಿದರು. ಓದತಕ್ಕವರು ಸರ್ವಸಮ್ಮತವಾಗಿ ಮಾಡಲ್ಪಟ್ಟ ತಿ
ದ್ದುಪಾಟಗಳನ್ನು ಅಲ್ಲಲ್ಲಿಯೇ ಬರದುಕೊಂಡರು. ಈಶಾಸ್ತ್ರಾರ್ಥಗಳ
ನ್ನು ಓದಿ ಪೂರೈಸಿದಕೂಡ್ಲೇ ಇದನ್ನು ಮುದ್ರಿಸಿ ನಮ್ಮ ಮಹಾಮಾತೃ
ಶ್ರೀಯುವರಾದ ರೀಜಂಟ್ ಮಹಾರಾಣೀ ವಾಣೀವಿಲಾಸದ ಮಹಾಸನ್ನಿಧಾ
ನಕ್ಕೂ ಸರಕಾರಕ್ಕೂ ರೆಸಿಡೆಂಟರವರಿಗೂ ಒಂದೊಂದು ಪುಸ್ತಕವನ್ನು
ಕಳುಹಿಸಿ ಬಾಕಿ ಪುಸ್ತಕಗಳನ್ನು ಪ್ರಚಾರಾರ್ಥವಾಗಿ ವಿನಿಯೋಗಿಸಬ
ಹುದೆಂದು ತೀರ್ಮಾನವಾಯಿತು.

ಚವಾಸರ ಶ್ರೀ॥ ಉ॥ ಜವಳಿಕೃಷ್ಣಯ್ಯಂಗಾರ್ರು ಅಯ್ಯೋ! ಮಹಾನುಭಾವರೇ ನಮ್ಮ ಪೂರ್ವಾಚಾರ್ಯರು ಬಹಳಕಷ್ಟಪಟ್ಟು ನಮ್ಮಮತವನ್ನು ಕಾಪಾಡಿಕೊಂಡುಬಂದರು. ಈವಾಗ ಏನೋ ಒಂದು ಕಾಲವಿಶೇಷದಿಂದ ದೈನ್ಯದೆಶೆಬಂದಹಾಗೆಯಿದೆ. ಸದ್ಯಕ್ಕೆ ಶ್ರೀರಂಗನಾಥದೇವರಿಗೆಸಂಪ್ರೋಕ್ಷಣೆ ಆಗುವದಕ್ಕೆ ತಕ್ಕಸನ್ನಾಹಗಳು ಜಾಗ್ರತೆಯಾಗಿ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಮತವಿಷಯವಾದ್ದರಿಂದ ಉದಾಸೀನಮಾಡುವದು ಸರಿಯಲ್ಲವೆಂದು ಹೇಳಿದ್ದಕ್ಕೆ ಮ॥ ಎಗ್ಸಿಕ್ಯುಟೀವ್ ಇಂಜನೀಯರ್ ಗೋವಿಂದಾಚಾರ್ಯರೂ ಮ॥ ಅಸಿಸ್ಟೆಂಟ್ ಪೀಚ್ಚರ್ ಕೃಷ್ಣಯ್ಯಂಗಾರ್ರು ಸಹನಾವು, ಅಷ್ಟು ಆತುರ ಪಡತಕ್ಕ ಕೆಲಸವಲ್ಲ. ಇದು ದೊಡ್ಡವಿಚಾರವಾದ್ದರಿಂದ ಜಾಗ್ರತೆಯಾಗಿ ಆಗಬೇಕೆಂದರೆ ಹ್ಯಾಗೆತಾನೇ ಆಗುವದು, ನಮ್ಮ ಮಹಾಮಾತೃಶ್ರೀ 'ರೀಜಂಟ್ ಮಹಾರಾಣಿಯವರ ಸನ್ನಿಧಾನಕ್ಕೆ ವಿಜ್ಞಾಪನೆಬರೆದುಕೊಂಡುಇದ್ದೇವೆ. ಸನ್ನಿಧಾನದಿಂದ ನ್ಯಾಯವಾದ ತೀರ್ಮಾನವು ಆಗಲೇ ಆಗುವದು. ಸ್ವಲ್ಪಕಾಲ ನಿರೀಕ್ಷಣೆಮಾಡಬೇಕು ಎಂದುಹೇಳಿದರು. ಆಮೇಲೆ ಸಭಾಕಾರ್ಯದರ್ಶಿಗಳಾದ ಶ್ರೀ॥ ಉ। ವಿದ್ವಾನ್ ಪಟ್ಟಪತಿಕೇಶವಾಚಾರ್ಯರು ಹೇಳಿದ್ದೇನೆಂದರೆ — ನಿಖಿಲಜಗದಂತರ್ಯಾಮಿಯಾಗಿಯೂ, ಜಗತ್ಕಾರಣನಾಗಿಯೂ ಇರುವ ಸಾಕ್ಷಾನ್ನಾರಾಯಣನಿಂದ ಪ್ರೋಕ್ತವಾದ ಶ್ರೀಪಂಚರಾತ್ರಶಾಸ್ತ್ರವು ಶ್ರುತಿಸಮಾನವಾದದ್ದಂತಲೂ ವೈದಿಕೋತ್ತಮರಿಗೆ ಪರಿಗ್ರಾಹ್ಯವೆಂತಲೂ ಸ್ಮೃತೀತಿಹಾಸಪುರಾಣಾದಿಗಳಲ್ಲಿ ಪ್ರಸಿದ್ಧನಾಗಿರುವದು. ಇಂಥಾಪಂಚರಾತ್ರಶಾಸ್ತ್ರಮಾರ್ಗವು ಬಾದರಾಯಣಾದಿಮಹರ್ಷಿಗಳೇಮೊದಲಾದವರಿಂದ ಪ್ರಕಾಶಿಸಲ್ಪಟ್ಟು ಸಕಲವೈಷ್ಣವರಲ್ಲಿಯೂ ನೆಲೆಗೊಂಡಿರುವದಲ್ಲದೆ ದ್ವೈತವಿಶಿಷ್ಟಾದ್ವೈತಭಾಷ್ಯಕಾರರುಗಳಿಂದವಿಶೇಷವಾಗಿ ಅದರ ತತ್ತ್ವವು ಪ್ರಕಾಶಪಡಿಸಿ ಸ್ಥಾಪಿಸಲ್ಪಟ್ಟಿರುತ್ತೆ. ಅದ್ವೈತಭಾಷ್ಯಕಾರರಿಂದಲೂ ಅನುಮೋದಿಸಲ್ಪಟ್ಟಿರುತ್ತೆ. ಅಂಥಾ ಪ್ರಸಿದ್ಧವಾದ ಪಂಚರಾತ್ರಶಾಸ್ತ್ರವನ್ನು ಗೌತಮಮಹರ್ಷಿಗಳು ನಾರದಮಹರ್ಷಿಗಳ ಉಪದೇಶದಿಂದ ಪಡೆದು ಬಹುಕಾಲಕ್ಕೆಮುಂಚೆ ಈ ಶ್ರೀರಂಗಪಟ್ಟಣದಲ್ಲಿ ಶ್ರೀರಂಗನಾಥದೇವರನ್ನು ಪಂಚರಾತ್ರಾಗಮರೀತ್ಯಾ ಪ್ರತಿಷ್ಠೆಮಾಡಿ ಆರಾಧಿಸುತ್ತಾ ಇದ್ದರು. ತದಾದಿಯಾಗಿ ಅಲ್ಲಿ ಆ ಆಚರಣೆಯು ನೆಲೆಗೊಂಡುಬರುತಿತ್ತು. ಅನಂತರ ಅವತರಿಸಿ ವಿಶಿಷ್ಟಾದ್ವೈತ ಸಿದ್ಧಾಂತವನ್ನುದ್ಧರಿಸಿ ಬ್ರಹ್ಮಸೂತ್ರಭಾಷ್ಯವನ್ನು ಮಾಡಿ ಲೋಕಕ್ಕೆಲ್ಲಾ ಮಹೋಪಕಾರಮಾಡಿದ

ಶ್ರೀರಾಮಾನುಜಾಚಾರ್ಯರಿಂದ ಜೀರ್ಣೋದ್ಧಾರವಾಗಿ ಅವರನಂತರ ವೈಷ್ಣವಧರ್ಮವನ್ನೇ ಮೇಲಕ್ಕೆ ಎತ್ತಿ ದ್ವೈತಸಿದ್ಧಾಂತಭಾಷ್ಯವನ್ನು ಮಾಡಿ ಮಹೋಪಕಾರವನ್ನು ಮಾಡಿದ ಶ್ರೀಮನ್ ಮಧ್ವಾಚಾರ್ಯರಿಂದ ಪರಿಪೋಷಿತವಾಗಿ ಇದುವರೆ ಯಾವ ಈತಿಬಾಧೆಗಳೂ ಬಾರದಂತೆ ನಮ್ಮ ಯದುಕುಲಪಯಃಪಾರಾವಾರ ಮಹಾರತ್ನಂಗಳೆಂದೆನಿಸಿದ ಮಹಾ ವೈಷ್ಣವಾಗ್ರೇಸರರಾಗಿಯೂ ಧಾರ್ಮಿಕರಾಗಿಯೂ ಇರುವ ಶ್ರೀಮನ್ಮೈಸೂರ್ ಮಹಾರಾಜರವರ ವಂಶಪರಂಪರೆಯಿಂದ ಸುರಕ್ಷಿತವಾಗಿ ನಡೆಯುತ್ತಾ ಬರುತ್ತಿದ್ದ ಪಂಚರಾತ್ರಾಗಮದ ಆಚರಣೆಯುಳ್ಳ ರಂಗನಾಥದೇವಸ್ಥಾನದಲ್ಲಿ ರಂಗನಾಥದೇವರಿಗೆ ಪಂಚರಾತ್ರಕ್ಕೆ ವಿರುದ್ಧವಾಗಿ ಶ್ರೀಶೃಂಗೇರೀಸ್ವಾಮಿಗಳವರು ಅರ್ಚನಾದಿಗಳನ್ನು ಮಾಡಿದ್ದಕ್ಕಾಗಿ ಬಹಳ ಸಂತಾಪಪಟ್ಟು ಅಖಿಲವೈಷ್ಣವಸಭೆಯವರು ದೇವರಿಗೆ ಸಂಪ್ರೋಕ್ಷಣೆಯಾಗಬೇಕೆಂದು ನಮ್ಮ ಮಹಾಮಾತೃ ಶ್ರೀರೀಜೆಂಟ್ ಮಹಾರಾಣಿಯವರ ಸನ್ನಿಧಾನದಲ್ಲಿ ವಿಜ್ಞಾಪನೆ ಮಾಡಿಕೊಂಡಿದ್ದದ್ದು ಸರಿಯಷ್ಟೆ. ಮತ್ತು ಇದೇ ಮೇರೆ ರೆಸಿಡೆಂಟ್‌ರವರಿಗೂ ಅರಿಕೆ ಮಾಡಿದೆ. ಇದುವರಿಗೂ ಮಹಾಸನ್ನಿಧಾನದಿಂದ ಯಾವ ಅಪ್ಪಣೆಯೂ ಆಗಲಿಲ್ಲ. ಆದರೆ ಪ್ರಜಾಕ್ಷೇಮೈಕಚಿಂತಕರಾಗಿಯೂ ಧರ್ಮೈಕಮತಾವಲಂಬಿಗಳಾಗಿಯೂ ನ್ಯಾಯೈಕಪಕ್ಷಪಾತಿಗಳಾಗಿಯೂ ಇರುವ ನಮ್ಮ ಮಹಾಮಾತೃ ಶ್ರೀಮಹಾರಾಣಿಯವರ ಸನ್ನಿಧಾನದಿಂದ ಸಂಪ್ರೋಕ್ಷಣೆ ಆಗಬಹುದೆಂದು ನ್ಯಾಯವಾದ ತೀರ್ಮಾನವು ಆಗುವದರಲ್ಲಿ ಯಾವ ಸಂದೇಹವೂ ಇರಲಾರದು. ಮಹಾಸನ್ನಿಧಾನಕ್ಕೆ ಸೇರಿದ ಪ್ರಜೆಗಳಾದ ನಮ್ಮಗಳ ದುಃಖಗಳನ್ನು ಪರಿಹರಿಸಿ ಕ್ಷೇಮಚಿಂತನೆಯನ್ನು ಮಾಡುವ ಬಾಧ್ಯತೆಯು ಮಹಾಸನ್ನಿಧಾನಕ್ಕೆ ಸೇರಿರುತ್ತದೆ. ಆದರೆ ಈ ಕರ್ಣಾಟಸಾಮ್ರಾಜ್ಯಮಹಾಲಕ್ಷ್ಮೀಜೀವರತ್ನವೆಂದೆನಿಸಿದ ದಿವ್ಯರತ್ನಸಿಂಹಾಸನದೊಳ್ ಸಮಾರೂಢರಾಗಿರುವ ಶ್ರೀಮತ್ಕೃಷ್ಣರಾಜೇಂದ್ರಮಹಾಪ್ರಭುಗಳು ಆಚಂದ್ರಾರ್ಕಸ್ಥಾಯಿಯಾಗಿ ಸರ್ವಸಾಮ್ರಾಜ್ಯದೊಡನೆ ದೀರ್ಘಾಯುಷ್ಮಂತರಾಗಿ ಇರಲೆಂದು ಯಾವಾಗಲೂ ಭಗವಂತನನ್ನು ಪ್ರಾರ್ಥನೆ ಮಾಡುತ್ತಿರುವದೊಂದೇ ಮುಖ್ಯೋದ್ದೇಶ್ಯವುಳ್ಳ ನಮಗೆ ಆಕಸ್ಮಿಕವಾಗಿ ಈ ಮತವಿಷಯಕವಾಗಿಯೂ ದೇವರವಿಷಯವಾಗಿಯೂ ಅಂತಸ್ಸಂತಾಪವು ಪ್ರಾಪ್ತವಾಗಿರುವದರಿಂದ ಯತ್ನವಿಲ್ಲದೆ ಈ ವಿಚಾರದಲ್ಲಿ ಪ್ರಾರಂಭಿಸಬೇಕಾಯಿತು. ಹೀಗೆ ಸಂಪ್ರೋಕ್ಷಣೆಯಾಗದೆ ಸಾವಕಾಶವಾದರೆ ಚಿರಕಾಲದಿಂದ ಪಾಂಚರಾತ್ರರೀತ್ಯಾ ನಡೆಯುತ್ತಿದ್ದ ಪೂಜಾದಿಗಳಿಗೆ ವೈಗುಣ್ಯಬರುವದಲ್ಲದೆ ಭಕ್ತಾದಿಗಳಿಗೆ ಮನಸ್ಸಂಕಟಗ

...ಹಚ್ಚಾಗುತ್ತವೆ. ಆದಕಾರಣ ಜಾಗ್ರತೆಯಾಗಿಯೇ ಮುಂದೆ ಯಾವ ಕೆಲಸವು ಯಾವರೀತಿಯಾಗಿ ನಡೆಯಬೇಕೋ ಅದಕ್ಕೆ ಅಪ್ಪಣೆಯಾಗಬೇಕೆಂದು ಪ್ರಾರ್ಥಿಸುತ್ತೇನೆಯೆಂದು ಹೇಳಿದರು. ಅದಕ್ಕೆ ಮ॥ ಗೋವಿಂದಾಚಾರ್ಯರು, ಮ। ರಾ॥ ಪೆನ್ಷನ್ ಅ. ಕೃಷ್ಣಯ್ಯಂಗಾರ್ಯರೇ ಮೊದಲಾದವರು ಈದಿನ ಹೊತ್ತು ಬಹಳವಾಯಿತು. ಇದನ್ನು ಇನ್ನೊಂದುದಿನ ಸೇರಿ ಯೋಚಿಸೋಣವೆಂದು ಅಪ್ಪಣೆಕೊಟ್ಟರು. ಅದಕ್ಕೆ ಎಲ್ಲರೂ ಒಪ್ಪಿದರು. ಅನಂತರ ಎಲ್ಲರೂ ಸಂತೋಷದಿಂದ ಪದೇಪದೇ ಸಭೆ ಸೇರುವದಕ್ಕೆ ಸ್ಥಳವನ್ನು ಸಹಾಯಮಾಡಿದ ಶ್ರೀ. ಉ. ಮ॥ ಪ್ರಸ್ತುಕಂತಿರುಮಲಾಚಾರ್ಯರನ್ನು ಶ್ಲಾಘಿಸುತ್ತಾ ತಮ್ಮತಮ್ಮ ಗೃಹಗಳಿಗೆ ದಯಮಾಡಿದರು.

ವೇದಾಂತವಿದ್ಯಾವಿಶಾರದ ವೆಂಕಟಕೃಷ್ಣಮಾಚಾರ್ಯರು
ಅಖಿಲವೈಷ್ಣವಮಹಾಜನಸಭಾಪ್ರಸಿಡೆಂಟ್.

ಸನ್ ೧೯೧೫ನೇ ಇಸವಿ ನವಂಬರ್ ೧೬ನೇ ತಾರೀಖಿನಲ್ಲಿ ಮೈಸೂರ್ ಚಾಮರಾಜಪೇಟೆಯಲ್ಲಿರುವ ಶ್ರೀಮಾನ್ ಪ್ರಸ್ತುಕಂತಿರುಮಲಾಚಾರ್ಯರ ಕಮಲಾವಿಲಾಸಭವನದಲ್ಲಿ ಅಖಿಲವೈಷ್ಣವ ಮಹಾಜನರು ಸಭೆ ಸೇರಿ ನಡೆಸಿದ ಪ್ರೊಸೀಡಿಂಗ್ಸ್. ಹಾಜರಿದ್ದ ಮೆಂಬರುಗಳ ಸಂಖ್ಯೆ ೩೦,

ಪ್ರಸಿಡೆಂಟರ ಅಪ್ಪಣೆಮೇರೆ ಸಭಾಕಾರ್ಯದರ್ಶಿಗಳಾದ ಶ್ರೀ॥ ಉ॥ ಅನಂತಕೃಷ್ಣಮಾಚಾರ್ಯರು ನೋಟೀಸನ್ನು ಓದಿದರು. ಅನಂತರ ಸಭಾಕಾರ್ಯದರ್ಶಿಗಳಾದ ಶ್ರೀ॥ ಉ॥ ಪುಟ್ಟವರ್ತಿ ಶೇಷಾಚಾರ್ಯರು ಹೇಳಿದ್ದೇನೆಂದರೆ.—ಈತಿಂಗಳು ೧ನೇ ತಾರೀಖಿನಲ್ಲಿ ಆದಮೀಟಿಂಗ್‌ನಲ್ಲಿ ಶಾಸ್ತ್ರಾರ್ಥವನ್ನು ಓದಿ ಪೂರೈಸುವಾಗ್ಯೆ ಬಹಳಹೊತ್ತಾದ್ದರಿಂದ ಮುಂದೆ ನಡೆಯತಕ್ಕ ಕೆಲಸಗಳನ್ನು ಯೋಚಿಸುವದಕ್ಕೆ ಇನ್ನೊಂದುದಿನ ಸೇರೋಣವೆಂದು ತೀರ್ಮಾನವಾಗಿತ್ತು. ಅದೇಮೇರೆ ಈದಿನ ಎಲ್ಲರೂ ಸೇರಿದಾರೆ. ಆವಿಷಯವನ್ನು ಯೋಚಿಸಬೇಕು. ನಮ್ಮ ಮಹಾಮಾತೃ ಶ್ರೀಮಹಾರಾಣಿರೀಜಂಟ್ ಮಹಾಸನ್ನಿಧಾನದಲ್ಲಿ ಸಂಪ್ರೋಕ್ಷಣೆಮಾಡಿಸಿಕೊಡಬೇಕೆಂದು ವಿಜ್ಞಾಪನೆಪತ್ರಿಕೆಯನ್ನು ಬರೆದುಕೊಂಡಿದ್ದೆವು. ಮತ್ತು ಇದೇಮೇರೆ ರೆಸಿಡೆಂಟರಿಗೂ ಅರ್ಜಿಯನ್ನು ಬರೆದುಕೊಂಡಿದ್ದೆವು, ಇದುವರೆಗೂ ನಮ್ಮ ಮಹಾಮಾತೃಶ್ರೀಮಹಾರಾಣಿಯವರ ಮಹಾಸನ್ನಿಧಾನದಿಂದ ಯಾವವಿಧವಾದ ಅಪ್ಪಣೆಯೂ ಆಗಲಿಲ್ಲ. ಸಂಪ್ರೋಕ್ಷಣೆಯಾಗುವದಕ್ಕೆ ತಕ್ಕ ಯತ್ನಗಳನ್ನು ಮುಂದೆ ಯೋಚಿಸಬೇಕಾದರೆ ಒಂದು ಕಮಿಟಿ ಏ

ರ್ಪಾಡಾಗಬೇಕು. ಹಾಗಾದರೆ ಉಚಿತವಾಗಿರುವದೆಂದು ಪ್ರಾರ್ಥಿಸುತ್ತೇನ ಎಂದು ಸೂಚಿಸಿದ್ದಕ್ಕೆ ಎಲ್ಲರೂ ಒಪ್ಪಿದರು. ಅದೇಮೇರೆ ಅಲ್ಲಿದ್ದ ಮಹಾಜನರಲ್ಲಿ ಒಬ್ಬೊಬ್ಬರೊಬ್ಬೊಬ್ಬರನ್ನಾಗಿ ಸೂಚನಾಯಿಸುತ್ತಾ ಬಂದರು. ಕಮಿಟಿ ಏರ್ಪಾಡಾಯಿತು.

ಕಮಿಟಿ ಮೆಂಬರುಗಳು.

ಶ್ರೀ॥ಉ॥ ನವೀನಂ ರಾಮಾನುಜಾಚಾರ್ಯರು
ಶ್ರೀ॥ವೇ॥ ವ್ಯಾಕರಣಂ ಶಾಮಾಚಾರ್ಯರು
ಶ್ರೀ।ಉ।ಮೇಲುಕೋಟೆ ತಿರುನಾಯುಮಾಳಿ ತಿರುನಾರಣೈಯ್ಯಂಗಾರ್ಯರು
ಮ॥ಪೆನ್ಷನ್ ಅಸಿಸ್ಟೆಂಟ್ ಬಿ. ಕೃಷ್ಣೈಯಂಗಾರ್ಯರು
ಮ॥ಪುಸ್ತಕಂ ತಿರುಮಲಾಚಾರ್ಯರು
ಶ್ರೀ॥ವೇ॥ನಾಮಗುಂಡ್ಲ ಶಾಮಾಚಾರ್ಯರು.
ಶ್ರೀ॥ವೇ॥ಜಯಾಚಾರ್ಯರು
ಶ್ರೀ॥ವೇ॥ಪುಟ್ಟ ಕೂಸಾಚಾರ್ಯರು
ಶ್ರೀ॥ವೇ॥ಸುಂದರರಾಜಾಚಾರ್ಯರು
ಶ್ರೀ।ಉ॥ಅಹೋಬಿಲಮಠಂ ಶಾಮೈಯ್ಯಂಗಾರ್ಯರು
ಮ॥ಪೆನ್ಷನ್ ಅಮಲ್ದಾರು (ಅಣ್ಣಾಜಯ್ಯಂಗಾರು)
ಮ॥ಎಗ್ಜಿಕ್ಯುಟೀವ್ ಇಂಜನೀಯರ್ ಗೋವಿಂದಾಚಾರ್ಯರು.
ಮ॥ಎಂ.ಸಿ. ಅಪ್ಪಕೇಟರಂಗೈಯ್ಯಂಗಾರ್ಯರು ಬಿ.ಎ.ಯವರು
ಮ॥ಗೋಮಠಂ ಶ್ರೀನಿವಾಸಜೋಶ್ಯರು
ಮ॥ಅಡ್ವೊಕೇಟ್ ಎಂ.ಎಲ್. ಲಕ್ಷ್ಮೀನರಸಿಂಹಾಚಾರ್ಯರು
ಶ್ರೀ॥ಉ॥ಆನಂದಾಳ್ವಾರ್
ಮ॥ಅಡ್ವೊಕೇಟ್ ಹೆಚ್. ಕೃಷ್ಣರಾಯರು.
ಮ॥ಅಡ್ವೊಕೇಟ್ ವೆಂಕಟನರಸಿಂಹಾಚಾರ್ಯರು
ಮ॥ಅಡ್ವೊಕೇಟ್ ಕಂಠೀರವಾಚಾರ್ಯರು
ಮ॥ಆಂಡಾಪುರಂ ನರಸಿಂಹೈಯ್ಯಂಗಾರ್ ಬಿ.ಯೆ.ಬಿಲ್.ಅವರು
ಮ॥ಮಹದೇವಪುರಂ ಕೃಷ್ಣಮಾಚಾರ್ಯರು
ಮ॥ಕರೀಘಟ್ಟದ ವೆಂಕಟಾಚಾರ್ಯರು
ಮ॥ತಿರುನಾರಣೈಯ್ಯಂಗಾರ್ಯರು
ಶ್ರೀ॥ವೇ॥ನರಹರಿಯಾಚಾರ್ಯರು
ಮ॥ಮುತ್ತಿನ ಶಾಮರಾವ್
ಶ್ರೀ॥ಉ॥ಮೇಲುಕೋಟೆ ಶೇಷಾಚಾರ್ಯರು

[illegible]

ಶ್ರೀ॥ಉ॥ಕಚ್ಛಭುಜಂ ಶ್ರೀನಿವಾಸಾಚಾರ್ಯರು
ಶ್ರೀ॥ಉ॥ಮಾಗಡಿ ರಾಘವಾಚಾರ್ಯರು
ಶ್ರೀ॥ಉ॥ಸುರಸಪ್ಮಗಿರಿ ವೆಂಕಟಾಚಾರ್ಯರು
ಶ್ರೀ॥ಉ॥ಧರ್ಮಾಧಿಕಾರಿ ಚಕ್ರವರ್ತ್ಯಯ್ಯಂಗಾರ್ಯರು
ಶ್ರೀ॥ಉ॥ಪಂಡಿತರತ್ನಂತರ್ಕತೀರ್ಥ ಕಸ್ತೂರಿರಂಗಾಚಾರ್ಯರು.
ಶ್ರೀ॥ಉ॥ಕಾನಕಾನಹಳ್ಳಿ ಶ್ರೀನಿವಾಸಾಚಾರ್ಯರು

೧೨ ಜನಕ್ಕೆ ಕಡಮೆಯಾಗದಂತೆ ಸೇರಿದ ಈ ಕಮಿಟಿಯವರಿಗೆ ಈ ಸಭೆಯ ಉದ್ದೇಶ್ಯ ನೆರವೇರುವದಕ್ಕೆ ಸಾಧಕಗಳಾದ ಕೆಲಸಗಳನ್ನು ಏರ್ಪಾಡುಮಾಡುವದಕ್ಕೆ ಅಧಿಕಾರವಿರಬೇಕೆಂದು ಮ॥ಪೆ॥ಅ॥ಕೃಷ್ಣಯ್ಯಂಗಾರ್ಯರು ಹೇಳಿದ್ದಕ್ಕೆ ಎಲ್ಲರೂ ಒಪ್ಪಿದರು.

ಈ ಸಭೆಯಲ್ಲಿ ನಡೆದ ಪ್ರೊಸೀಡಿಂಗ್ಸ್ ಮುಂತಾದವುಗಳನ್ನು ಮುದ್ರಿಸಿ ಎಲ್ಲಾ ಮಠಾಧಿಪತಿಗಳಿಗೂ ಕಳುಹಿಸಿ ಅವರ ಅಭಿಪ್ರಾಯವನ್ನು ತರಿಸಿಕೊಳ್ಳಬೇಕೆಂದು ವೇ॥ಜಯರಾಯಾಚಾರ್ಯರು, ವೇ॥ಭೀಮಾಚಾರ್ಯರು ಹೇಳಿದ್ದಕ್ಕೆ ಶ್ರೀ॥ವೇ॥ಶಾಮಾಚಾರ್ಯರು ಅನುಮೋದಿಸಿದರು. ಎಲ್ಲರೂ ಒಪ್ಪಿದರು.

ಅನಂತರ ಶ್ರೀ॥ಉ॥ಅನಂತಕೃಷ್ಣಮಾಚಾರ್ಯರು ವೈಷ್ಣವರಲ್ಲಿ ಒಬ್ಬರು ಈ ಸಭೆಗೆ ಕಾರ್ಯದರ್ಶಿಗಳಾಗಿರಬೇಕೆಂದು ಹೇಳಿದ್ದಕ್ಕೆ ಶ್ರೀ॥ಉ॥ ಪುಟ್ಟಪರ್ತಿ ಶೇಷಾಚಾರ್ಯರು ವೈಷ್ಣವರಲ್ಲಿ ವೈಯ್ಯಾಕರಣ ಭೀಮಾಚಾರ್ಯರು ಕಾರ್ಯದರ್ಶಿಗಳಾಗಿರಬೇಕೆಂದು ಹೇಳಿದರು. ಎಲ್ಲರೂ ಒಪ್ಪಿದರು.

ಈ ಸಭೆಯ ಪ್ರೊಸೀಡಿಂಗ್ಸ್ ಮೊದಲಾದವುಗಳನ್ನು ಮುದ್ರಿಸುವದಕ್ಕೂ, ಉಳಿದ ಸಭೆಯ ಉದ್ದೇಶ್ಯಕ್ಕೆ ಸಾಧಕವಾದ ಕೆಲಸಗಳಿಗೋಸ್ಕರ ದ್ರವ್ಯಸಹಾಯವು ಅಪೇಕ್ಷಿತವಾದ್ದರಿಂದ ಚಂದಾ ವಸೂಲ್ಮಾಡಬೇಕೆಂತಲೂ ವಸೂಲ್ಮಾಡಿದ ದ್ರವ್ಯವನ್ನು ಈ ಸಭೋದ್ದೇಶ್ಯಸಾಧನೆಗೆ ಉಪಯೋಗಿಸುವ ಅಧಿಕಾರವು ಈ ಕಮಿಟಿಯವರಿಗೆ ಇರಬೇಕೆಂದು ಮ॥ಜವಳಿ ಕೃಷ್ಣಯ್ಯಂಗಾರ್ಯರು ಹೇಳಿದ್ದಕ್ಕೆ ಮ॥ಅಡ್ವೋಕೇಟ್ ರಂಗಯ್ಯಂಗಾರ್ಯರು ಅನುಮೋದಿಸಿದರು. ಎಲ್ಲರೂ ಒಪ್ಪಿದರು.

ಶ್ರೀ॥ಉ॥ಪುಟ್ಟಪರ್ತಿ ಶೇಷಾಚಾರ್ಯರು ವೈಷ್ಣವಮತವಿಚಾರವು ಯಾವದು ಬಂದರೂ ಚರ್ಚಾಪೂರ್ವಕವಾಗಿ ನಿರ್ಣಯಿಸುವದಕ್ಕೆ ಈ ಸಭೆಯು ಸ್ಥಿರವಾಗಿರಬೇಕೆಂತಲೂ ಈ ಕಮಿಟಿಗೆ ಹೆಚ್ಚಾಗಿ ಎಷ್ಟು ಮೆಂಬರಗಳನ್ನಾಗಲಿ ಸೇರಿಸಿಕೊಳ್ಳತಕ್ಕ ಅಧಿಕಾರವಿರಬೇಕೆಂತಲೂ ಇದಕ್ಕೆ ತಕ್ಕ ಶಿಬ್ಬಂದಿವರ್ಗ್ಯರೆ ಏರ್ಪಾಡಾಗಬೇಕೆಂತಲೂ ಹೇಳಿದ್ದಕ್ಕೆ ಎಲ್ಲರೂ ಒಪ್ಪಿದರು. ಅನಂತರ ಎಲ್ಲರೂ ಸಂತೋಷವಾಗಿ ಕೋಲಾಹಲಧ್ವನಿಯೊಡನೆ ದಯಮಾಡಿದರು.

[illegible]

Abdul Rahaman Sahib
Bahadur
Member in Council
Mysore

Many of us, *Vaishnavas* of Kumbhakonam, learnt with very great disappointment that the Swâmin of Srî Sankarâchárya's Mutt at Sringeri entered the other day into the *garbha-griha* of Srî Ranganâtha'sTemple at Seringapatam, and performed *pújâ* there in himself, although the *Pâncharâtra âgama,* according to which worship is, and has been for long, conducted in that temple, prohibits such a procedure distinctly. Thereupon I convened here a public meeting of learned *pandits* and gentlemen interested in the question of worship in Hindu temples; and the meeting after enquiring into the *Sàstras* and usages bearing upon the subject came to the conclusion that the entry of Srî Sringeri Swâmin into the *garbha griha* of the Ranganâtha Temple at Seringapatam and the performance of any act like *pùjá* therein by himself is unjustifiable and improper. To give due publicity to this declaration of opinion the following proceedings of the said public meeting are published; and a copy thereof is herewith forwarded for your kind perusal.

I remain
Your most obedient servant.

Vice President,
Visishtàdwaita-Siddhànta Sabhá,
Kumbhakonam.

12th December 1895
Kumbhakonam.

Proceedings of a public meeting of the inhabitants of Kumbakonam Consisting of Srivaishnavas, Smartas, and Madhwas.

In accordance with the notice issued by Mr. V. Rangaswamy Iyangar Trustee of Sri Sarngapani Temple and vice-president of the Visistadwaitasiddhanta Sabha at Kumbhakonam, the public inhabitants of this place, about 400 in number, consisting of Pundits, Archakas, and Gentlemen, met at the Sri Sarngapani Temple of Kumbhakonam at about 4 O' clock on Sunday the 24th November 1895 corresponding to 10th Kartikai of Manmatha.

Among others there were present the following gentlemen:—

M. R. Ry.	Dewan Bahadur R. Raghunatha Row Avergal.		
„	K. Ranganatha Row Avergal. B. A.		
„	College Professor M. Rangachariar	„	M. A.
„	Kurnool Jayarama Rao	„	Pensioned District Munsiff.
„	Venkata Ranga Row	„	M A. Secretary Pachiappa charities Triplicane.
„	V. Rangasami Iyangar Avergal Vice President Visishtadwaita Sabha.		
„	C. K. Streenivasa Iyangar	„	High Court Vakil.
„	R. Streenivasa Iyangar	„	Pleader.
„	Komal Gopala Iyangar	„	„
„	Ranga Iyengar	„	„
„	Poundrikapuram Narasimma Iyangar	„	Mirasidar.
„	Virahapuram Saranghapani Iyengar	„	„
„	V. Sadagapachariar	„	„
„	Embar Srirengha Chariar	„	„
„	Tirumalisa Ragavachariar	„	„
„	„ Annaswami Iyangar	„	„
„	Thandalam Renghaswami Iyangar	„	„
	Kumbaconum Sri Sankarachariar Mutt Manager		
„	Vedhamurti Kuppusami Sastrial	„	„
Vidwan	Vedhamurthi Bhattasri Narayana Sastrial	„	„
„	Kuttalam Hovoi Vasudeva Achariar.	„	
„	Kumbakonam Tammachariar.	„	
„	„ Sarangapani Achariar.	„	
„	Town School Master Sarangapani Iyengar	„	
„	Nadovakari Rengachariar	„	
„	Uppiliappan koil Krishnamachariar.	„	
Maha Vidwan.	Oobaya Vethantha Sattharka Vachaspathi Balathanvi Kuruchi Rengachariar Swamihal Avergal.		
„	Poyyapakam Chakravarthiacharyar Swamihal Avergal.		
Vidwan.	Sanskrit Professor Rengachariar Avergal.		
„	Sundara Thathachariar	„	
„	Vajapaum Veraraghavachariar	„	
„	Vajapaum Sreenivasa Raghavachariar	„	
„	Vajapaum Rajagopalachariar.	„	
„	Vajapaum Varadachariar	„	
„	Vajapaum Streenivasachariar	„	
„	Vajapaum K. Streenivasachariar	„	
„	Chakaravarthi Ramanujachariar.	„	
„	Chakaravarthi Venkatachariar.	„	

Vidwan	Chakaravarthi Varathachariar	Avergal
„	Thandalam Gopalachariar.	„
„	Abbu Patrachariar.	„
„	Sinnamoo Rengachariar.	„
„	Patrachariar.	„
„	Agnihotram Patrachariar	„
„	Manaleru Thiruvengadatha Iyengar	„
„	Urukudi Sreenivasa Raghvacharyar	„
„	Vijia Raghvacharyar Varahapuram	„
Maha Vidwan.	Nadathur Sadagopachariar	„
„	Madapusi V. Seshadriachariar	„
Vidwan	Seemacharyar	„
„	Varadacharyar	„
„	Vedantha charyar	„
„	Sami Battacharyar	„
„	Gopalasamy Battacharyar	„
„	Lakshmana Battacharyar	„
„	Periya Chakrapani Battacharyar	„
„	Sinna Chakrapani Battacharyar	„
„	Aramudu Battacharyar	„
„	Ramasami Battacharyar	„
„	Trivindaloor Ponnusami Battacharyar	„
„	Parthamballi Kuppusami Battacharyar	„
&c.	&c.	&c.

Nadathoor Bramha Sri Maha Vidwan Sadagopacharyar Avergal said that the object of the meeting of that evening was to inquire whether it was or was not contrary to the Sâstras, for persons other than Archakas, to enter the Garbhagriha, and perform pûjâ &c., in temples which observe the Pâncharâtra principles in the performance of worship; and if it be contrary to the Sâstras, what the purificatory ceremonies prescribed therefor are Mr. M. Rangachariar M. A. said that the discussion should be confined only to that subject and that a chairman should be elected for the meeting.

Mr. R. Streenivasa Iyengar pleader said that some one conversant both with the Sâstras and worldly matters should be chosen for the chair.

Dewan Bahadur R. Regunatha Row observed that only the two points referred to above have to be discussed, and that, since it is proper to assume the authority of any Agama in the case of temples which follow the Agama in question, the discussion as to the invalidity of the Pâncharâtra Agama in the present case is irrelevent and unjust, and then proposed that Sri Sattarka Vachaspati Baladhanvi Kuruchi Rangachariar be requested to take the chair.

Nadathoor Brahmasri Sadagopachariar seconded the proposal.

On the Chairman taking his seat, Brahmasri Sadogopachariar said that the leading Archakas of this town and other places had held a meeting the previous day, discussed the points in question, and quoted many authorities from the Agama Sâstras in support of their contention, and requested that Brahmasri Seshadriachariar be allowed to read them.

K. Ramaswamy Battachariar said that they (Archakas) had decided the day before that it was wrong for Adíkshitas to enter the Garbhagriha and perform the pùja. The necessary purificatory ceremonies must be performed in the matter and they, the Archakas, were prepared to furnish the meeting with the necessary authorities in support of their opinion. Accordingly Bramhasri Seshadriachariar read out the authorities.

Mr. Rangacharyar M. A. proposed that Nadathoor Brahmasri Maha Vidwan Sadogopachariar be requested to explain the passages to the audience.

AUTHORITIES.

Iswara Samhita— 19th Chapter. Slokas. 5

ईश्वरसंहितायां १९ अध्याये

अदीक्षितैरन्यतन्त्रदीक्षितैरर्चकेतरैः ।
स्पृष्टेबिम्बे तदाकुर्यात्स्नपनं त्वधमाधमम् ॥१॥
शान्तिहोमं जपं चापि तद्दोषस्य प्रशान्तये ।
एतेषां गर्भगेहान्तःप्रवेशे नवभिर्घटैः ॥२॥
संस्नाप्य देवदेवेशं शान्तिहोमादिकञ्चरेत् ।
स्त्रीभिर्वानुपनीतैर्वा तथा वैखानसैर्द्विजैः ॥३॥
अवैष्णवैर्वा संस्पृष्टे बिम्बे त्वधममध्यमं ।
स्नपनं विधिवत्कृत्वा शान्तिहोमादिकञ्चरेत् ॥४॥
एतैः प्रविष्टेगेहान्तरधमाधममार्गतः ।
संस्नाप्याविधिवद्देवं शान्तिहोमंसमाचरेत् ॥५॥

PadmaSamhita-18th Chapter. Sloka 1.

पाद्मे चर्यावादे अष्टादशाध्याये ।

दीक्षितैरन्यशास्त्रेषु स्पृष्टेस्नपनमाचरेत् ।
दीक्षितैरितरैश्चापि शूद्रैस्तद्वत्समाचरेत् ॥१॥
दीक्षितैरन्यथाशास्त्रैस्पृष्टेस्नपनमाचरेदिति पाठान्तरम् ;

Bramha Sri Sadogopa Chariar explained the passages in detail and observed that no person other than Dîkshita Archakas is entitled to enter the Garbhagriha of a Pâncharatra temple and perform the pûja, and that purifactory ceremonies are necessary by way of Homa, Mantra, and Japa in case this rule violated.

And those that wished to speak against this view were called upon by him to speak out.

Dewan Bahadur R. Raghunatha Row seconded the above proposition and said that the gentlemen present might show their approval by clapping their hands. The audience showed their approval by their unanimous clapping of hands, and none spoke against the above decision.

Brahma Sri Vyakarana Vidwan Ghantachariar then asked whether the servants of the temple such as Parichârakas are entitled to enter the Garbhagriha, and whether the throwing of the Tulasi on the Image constitutes Pûja. The chairman replied that exclusive of the door-way the room where the Image is seated forms the Garbhagriha, that the servants of Vishnu temples are allowed to enter the Garbhagriha up to a certain limit, and that the throwing of the Tulasi over the Image forms a kind of púja, and added that this exposition is not contrary to the passages quoted above.

Then Dewan Bahudur R. Raghunatha Row observed that the proceedings of the meeting signed by the chairman may be looked upon as having been signed by all present. The chairman also again called upon those who wished to speak against this view and waited for ten minutes, and no one having risen to speak against it, the chairman dissolved the meeting.

Sattarkavachaspati
Baladhanvi Kuruchi.
(Signed) **RANGACHARIAR,**
Chairman.

Printed at the "SRI VIDYA PRESS" Kumbakonam.

To M. R. Ry. Arcot Srinivasa [illegible]
Mysore

೫ ಶ್ರೀಜಗದ್ಗುರುಗಳವರು ಮೈಸೂರು ಶೀಮೆಯಲ್ಲಿರತಕ್ಕ ಪ್ರಸಿದ್ಧವಾದ ದೇವಾಲಯಗಳಲ್ಲಿರುವ ದೇವರುಗಳನ್ನ ಆರಾಧನೆ ಮಾಡುವದು ಮಾತ್ರವಲ್ಲದೆ ಮದ್ರಾಸು, ಬೊಂಬಾಯಿ, ಮುಂತಾದ ಪ್ರಸಿಡೆನ್ಸಿಯಲ್ಲಿರತಕ್ಕ ಆಗಮೋಕ್ತಾರಾಧನೆಗೆ ಒಳಪಟ್ಟಿರುವ ಪ್ರಸಿದ್ಧ ಶಿವ ವಿಷ್ಣುದೇವಾಲಯಗಳಲ್ಲಿಯೂ ದೇವತಾರಾಧನೆ ಮಾಡಿರುತ್ತಾರೆಂಬುವದು ಲೋಕಪ್ರಸಿದ್ಧವಾಗಿರುತ್ತೆ. ಅಂದರೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ದೇವಾಲಯಗಳು ತಿರುಪತಿ, ಶ್ರೀರಂಗ, ಕಾಂಚಿ, ಅನಂತಶಯನ, ದರ್ಭಶಯನ ಮುಂತಾದ ಸ್ಥಳಗಳಲ್ಲಿ ಅನೇಕಾವರ್ತಿ ಪೂಜೆ ಮಾಡಿರತಕ್ಕ ದಾಖಲೆಗಳಪೈಕಿ ಪ್ರಕೃತ ದೊರತಿರುವಷ್ಟರನ್ನೂ ಪರಾಂಬರಿಕೆ ಬಗ್ಯೆ ಹಾಜರ್ಮಾಡಿರುತ್ತೇವೆ. ಇದರಂತೆಯೆ ಈ ದೇಶದ ದೇವಾಲಯಗಳಲ್ಲಿ ಶ್ರೀಗಳವರು ದೇವತಾರಾಧನೆ ಮಾಡುವದಕ್ಕಾಗಿ ಅನೇಕ ರಾಜರು ಮತ್ತು ಅಧಿಕಾರಿಗಳು ಕೊಟ್ಟರತಕ್ಕ ಲಿಖಾವಟ್ಟುಗಳು ಸರಕಾರದಲ್ಲೂ, ಮತ್ತು ಶ್ರೀಮಠದಲ್ಲೂ, ಅನೇಕವಾಗಿರುತ್ತೆ. ಇವುಗಳಲ್ಲಿ ಪ್ರಕೃತ ನಮಿಗೆ ದೊರತಿರತಕ್ಕ ದಾಖಲೆಗಳು ಅಂದರ ಟೀಪೂಸುಲ್ತಾನರು ಕೊಟ್ಟರತಕ್ಕ ಒಂದೆರಡು ಸನ್ನದಿನ ನಕಲು, ಈ ಸಂಸ್ಥಾನದ ರಾಜ್ಯಭಾರ ಬ್ರಿಟೀಷ್ ಆಫೀಸರ ಅಧ್ವಕೆಗೆ ಒಳಪಟ್ಟದ್ದಕಾಲ ಅಂದರೆ ೧೮೩೨ನೇ ಇಸವಿ ನಂದನಸಂವತ್ಸರದಲ್ಲಿ ಕಮಿಷನರ್ ಕ್ಯಾಷ್ ಮೇಜರ್ ಸಾಹೇಬರು ಕೊಟ್ಟರುವ ಒಟ್ಟು ಪರವಾನೆ ನಕಲನ್ನೂ, ಚೀಫ್ ಕಮಿಷನರ್ ಬೌರಿಂಗ್‌ಸಾಹೇಬರವರು ಇಂಡಿಯಾ ಗೌರ್ನಮೆಂಟಗೆ ಬರದ ಲೆಟರು, ಅದರ ಜವಾಬಿನ ನಕಲನ್ನೂ, ಹೈದರಾಬಾದ್ ಸರಕಾರದವರು ಕೊಟ್ಟರುವ ಸನ್ನದಿನ ತರ್ಜುಮಾನಕಲನ್ನೂ ಸಹ ಇದರ ಸಂಗಡ ಹಾಜರ್ಮಾಡಿರುತ್ತೇವೆ. ಈ ಪೈಕಿ ನಂದನ ಸಂವತ್ಸರದ ಒಟ್ಟು ಪರವಾನೆಯಲ್ಲಿ ನಮೂದಿಸಿರುವ ಮದ್ರಾಸ್ ಬಂಗಾಳಾ ಗೌನರವರು ಕೊಟ್ಟರತಕ್ಕ ಲೆಟರುಗಳು ಮತ್ತು ದಿವಾನ್ ಪೂರ್ಣಯ್ಯನವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಕೊಟ್ಟರತಕ್ಕ ಸನ್ನದು ವಗೈರೆ ಕಾಗದಪತ್ರಗಳ ಸಂಖ್ಯೆ ೮೫) ಆಗುತ್ತೆ. ಇವುಗಳೆಲ್ಲಾ ಕಮಿಷನರ ಬಳಿಗೆ ಹಾಜರಾಗಿರುತ್ತೆಂಬುವದು ಸದರಿ ಒಟ್ಟು ಪರವಾನೆಯಿಂದಲೇ ಗೊತ್ತಾಗುತ್ತೆ. ಇವುಗಳು ವಾಪಸ್ ಆಗದೆ ಚೀಫ್‌ಕಮಿಷನರ ಆಫೀಸ್ ರಿಕಾರ್ಡಿನಲ್ಲಿರುತ್ತೆಂಬದಾಗಿ ಕೇಳುತ್ತೇವೆ. ಅವುಗಳನ್ನ ಪರಾಂಬರಿಸಬೇಕೆಂದು ಬೇಡುತ್ತೇವೆ.

೬ ಮೇಲೆ ನಮೂದಿಸಿರತಕ್ಕ ರಿಕಾರ್ಡುಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪ್ರಕೃತದಲ್ಲಿ ಪಾಂಚರಾತ್ರವೈಖಾನಸಾದಿ ಆಗಮೋಕ್ತವಾಗಿ ಆರಾಧಿಸಲ್ಪಡುತ್ತಿರುವ ಶಿವವಿಷ್ಣು ದೇವಾಲಯಗಳಲ್ಲಿರುವ ದೇವರುಗಳಿಗೆ ಸ್ವತಃ ಪೂಜೆಮಾಡತಕ್ಕ ವಿಶೇಷಬಾಧ್ಯತೆಯು ಮತ್ತು ಹಕ್ಕು ಉಂಟೆಂಬುವದು ರುಜುವಾತು ಆಗುವದು ಸರಿಯಷ್ಟೆ; ಪ್ರಕೃತ ಚರ್ಚೆಗೆ ಸಮ್ಮಂಧಪಟ್ಟ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಶ್ರೀರುಗಳವರು ಸ್ವತಃ ಪೂಜೆಮಾಡುವ ಹಕ್ಕು ಉಂಟೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಟೀಪೂಸುಲ್ತಾನರವರ ಸನ್ನದೇ ಸಾಕ್ಷಿಯಾಗಿರುವದಲ್ಲದೆ, ಇದಕ್ಕೆ ಅನುಸಾರವಾಗಿ ಪೂಜೆ ಮಾಡುತ್ತಿದ್ದರೆಂಬ ಸಂಗತಿಯನ್ನು ಹೇಳತಕ್ಕಂಥಾ ದೊಡ್ಡವಂಶೀಯರಾದ ಮಹಮ್ಮದೀಯರ್ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಅವರುನ್ನೂ ಸಾಕ್ಷ್ಯ ಕೊಡುವದರಲ್ಲಿ ಅಭ್ಯಂತರವಿರುವದಿಲ್ಲ. ಇದು ಅವಶ್ಯಕವಾದ್ದೆಂದು ತೋರುವಪಕ್ಷದಲ್ಲಿ ಗೌರ್ನಮೆಂಟಿನವರು ಅವರಿಂದಲೂ ತಿಳಿದುಕೊಳ್ಳಬಹುದು.

೭ ಶ್ರೀರಂಗಪಟ್ಟಣದ ಶ್ರೀ ರಂಗನಾಥದೇವರನ್ನ ಇಂಥಾವರು ಇಂಥಾಕಾಲದಲ್ಲಿ ಈ ರೀತಿಯಾಗಿ ಪ್ರತಿಷ್ಠೆ ಮಾಡಿದ ಸಂಗತಿ ನಿಸ್ಸಂದೇಹವಾಗಿ ಗೊತ್ತಾಗದೇ ಇದ್ದಾಗ್ಯೂ, ಇದು ಬಹಳ ಪುರಾತನವಾದದ್ದು. ಕೆಲವು ಶತಮಾನಗಳಕೆಳಗೆ ಗೌತಮಮಹರ್ಷಿಗಳು ಪೂಜಿಸುತ್ತಿದ್ದರೆಂಬುವದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ; ಮಹರ್ಷಿಗಳು ತಾಂತ್ರಿಕಾಗಮದೀಕ್ಷಾಬದ್ಧರಾದವರಲ್ಲ; ಪಾಷಂಡಿಗಳೂ ಅಲ್ಲ. ಇವರುಗಳು ವೈದಿಕಾಗಮದಲ್ಲಿ ಅರ್ಚನೆ ಮಾಡುತ್ತಿದ್ದರೆಂಬುವದು ಶಾಸ್ತ್ರಸಿದ್ಧವಾಗಿರುತ್ತೆ. ಅದನ್ನ ಅನುಸರಿಸಿಯೇ ಶ್ರೀಮಚ್ಛಂಕರಭಗವತ್ಪಾದರವರು ಈದೇವರನ್ನ ಅರ್ಚಿಸಿದರು. ಅದರಂತ ಅವರ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಪೂಜಿಸುತ್ತಾಬಂದರು. ಈ ಗೌತಮ ಮಹರ್ಷಿಗಳಿಗೆ ಗೋಹತ್ಯಾಸವಾದ ಸಂಘಟನೆ ಮಾಡಬೇಕೆಂದು ಕೆಲವು ದುಷ್ಟರಾದ ಬ್ರಾಹ್ಮಣರು ನಡೆಸಿದ ತಂತ್ರ ಅವರಿಗೆ ತಿಳಿದು ಇಂಥಾ ದುಷ್ಟಕೃತ್ಯ

ವನ್ನು ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮದೀಕ್ಷಾಬದ್ಧರಾಗಿ ಕೆಟ್ಟು ಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳು ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವದು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಟಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು. ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರೆಗಳಾಗಿರುತ್ತಾರೆ. ಆದಾಗ್ಯೂ ತಮ್ಮ ಮತಸ್ಥರು ಪ್ರಕೃತದಲ್ಲಿ ಪೂಜಕರಾಗಿರುತ್ತಾರಷ್ಟೆ ಆದ್ದರಿಂದ ದೇವರು ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೇ ಖರ್ಚು ಸಲ್ಲುತ್ತಾಯಿದೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟದ್ದು ಅತ್ಯಲ್ಪವಾಗಿದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ. ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನು ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತಮಗೇನೇ ಇರುವಂತೆ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತವಾದತಕ್ಕದ್ದೋ ಅದರನ್ನು ಗೌರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಚಿಪ್ಪಾಸಾರ್ಥವಾಗಿ ಇದೆಯೆಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರವರ ಅವತಾರಕ್ಕಿಂತ ಸಾವಿರಾರು ವರುಷಗಳ ಹಿಂದೆ ಶ್ರೀಮಚ್ಛಂಕರ ಭಗವತ್ಪಾದರವರು ಅವತಾರಮಾಡಿದರೆಂಬ ಅಂಶವನ್ನು ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ವಿಧಿ ಇಲ್ಲವಷ್ಟೆ ಇದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ಸಾವಿರಾರು ವರುಷಗಳಮಟ್ಟಿಗೂ ಪ್ರಾಚೀನವಾಗಿರುತ್ತೆಎಂಬುವದು ಸಾಮಾನ್ಯವಾಗಿ ಸಕಲರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆ ಯಿಲ್ಲದಮಾತಾಗಿ ತೋರುತ್ತೆ ಅಥವಾ ಪ್ರಕೃತ ಸಂದರ್ಭದಲ್ಲಿ ಇವರುಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನು ಕೊಡತಕ್ಕ ಪ್ರಿಸೀಡೆಂಯಾನೆ ಪೀಠಿಕಾ ರಚನೆಯಾಗಿರುತ್ತೆಂದು ಭಾವಿಸಿರಬಹುದಾಗಿ ತೋರುತ್ತೆ.

೯ ಶ್ರೀರಂಗನಾಥದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ವ್ಯಾಜ್ಯಮಾಡುವರ ಸಂಖ್ಯೆಯು ಈ ದೇವರಲ್ಲಿ ಅಭಿಮಾನವಿರತಕ್ಕ ಮತ್ತು ಇವರಿಗೆ ಸಮಾನವಾಗಿ ಹಕ್ಕು, ಬಾಧ್ಯತೆವುಳ್ಳ ಇತರ ಭಕ್ತರ ಸಮುದಾಯ ಸಂಖ್ಯೆಗೂ ಮೊಕಾಬಿಲೆ ನೋಡಿದರೆ ಒಟ್ಟು ಸಮುದಾಯದಲ್ಲಿ ಲಕ್ಷ ಪ್ರಜೆಗೆ ವ್ಯಾಜ್ಯಮಾಡುವರು ಒಬ್ಬರೆಂದೂ ಕೂಡ ಗಣಿಸುವದಕ್ಕೆ ಸಾಲದ್ದಾಗಿರುತ್ತೆ. ಆದ್ದರಿಂದ ಶ್ರೀಜಗದ್ಗುರುಗಳವರು ಆಗಾಗ್ಯೆ ಶ್ರೀರಂಗನಾಥದೇವರ ಆರಾಧನೆಮಾಡತಕ್ಕದ್ದು ಸರ್ವಜನ ಸ   ವಾದದೆಂದು ಸರ್ಕಾರದವರು ದಾರಾಳವಾಗಿ ನಂಬತಕ್ಕದ್ದಾಗಿರುತ್ತೆ.

೧೦ ಮೇಲೆ ಹೇಳಲ್ಪಟ್ಟಿರುವ ಗ   ಗಳೆಲ್ಲಾ ಸರ್ಕಾರೀ ವ್ಯಾವಹಾರಿಕರೀತ್ಯಾ ಶ್ರೀಜಗದ್ಗುರುಗಳವರಿಗೆ ಶ್ರೀ ರಂಗನಾಥದೇವರನ್ನು ಆರಾಧಿಸತಕ್ಕ ವಿಷಯದಲ್ಲಿರತಕ್ಕ ವಿಶೇಷ ಬಾಧ್ಯತೆಯನ್ನು ತೋರಿಸತಕ್ಕವುಗಳಾಗಿ ಇರುತ್ತವೆ ಈ ಸಂಬಂಧವಾದ ಶಸ್ತ್ರಾಧಾರ ಅಪ್ರತಿಹತವಾದ ಸದಾಚಾರ ಮುಂತಾದ್ದರನ್ನು ಇದರಡಿಯಲ್ಲಿ ಶೃತಪಡಿಸಿರುತ್ತೇವೆ ಏನಂದರೆ.--

೧೧ ಶ್ರೀಜಗದ್ಗುರುಗಳವರು ಶ್ರೀ ರಂಗನಾಥದೇವರಿಗೆ ಅರ್ಚನೆ ಮಾಡತಕ್ಕದ್ದು ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿರುತ್ತೆಂದು ಫಿರ್ಯಾದಿಗಳು ಹೇಳುವ ಅಂಶವನ್ನು ಖಂಡನೆಮಾಡತಕ್ಕ ಶಾಸ್ತ್ರ ಮತ್ತು ಆಚಾರವು ಹೇರಳವಾಗಿರುತ್ತೆ. ಆ ವಿಚಾರವನ್ನು ಪೂರ್ವಪಕ್ಷ ಸಮಾಧಾನ ಸಿದ್ಧಾಂತರೂಪವಾಗಿ ಶೃತಪಡಿಸಲು ಬಹಳ ವಿಳಂಬವಾಗುತ್ತಾದ್ದರಿಂದ ಸೂಕ್ಷ್ಮವಾಗಿ ಸಾಮಾನ್ಯಾಂಶಗಳನ್ನು ತಿಳಿಸದೆ ಇದ್ದರೆ ವಿಧಿಯಿಲ್ಲವಾಗಿ ತಿಳಿಸುವದೇನಂದರೆ -- ಶೃತಿಸ್ಮೃತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಬಂದಾಗ್ಯೆ ಶೃತಿಯೇ ಪ್ರಬಲವಾದದ್ದೆಂತಲೂ, ತದ್ವತ್ ಸ್ಮೃತಿ ಪುರಾಣಗಳಲ್ಲಿ ಸ್ಮೃತಿಬಲವಾದ್ದೆಂತಲೂ ಪುರಾಣ ಇತಿಹಾಸಾದಿಗಳಲ್ಲಿ ಪುರಾಣಬಲವಾದ್ದೆಂತಲೂ ಹೀಗೆ ಎಲ್ಲಾದ್ದರಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಕಾಲದಲ್ಲಿ ಮಹಾಜನಗಳು ಅನುಸರಿಸಿ ನಡೆಸಿಕೊಂಡ

ಬರುವ ಆಚಾರವೇ ಬಲಿಷ್ಠವಾದದ್ದೆಂತಲೂ ಈ ಆಚಾರದಲ್ಲಿ ನವೀನಗಳು ಪ್ರಾಚೀನಗಳು ಇದ್ದರೂ ಇರಬಹುದು ಇವುಗಳಲ್ಲಿ ಪುರಾತನಕ್ಕೆ ಪ್ರಾಶಸ್ತ್ಯವಿರುತ್ತೆಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿದಿರುತ್ತೆ. ಸಗ ಶ್ರೀವೈಷ್ಣವರು ಶ್ರೀರಂಗನಾಥದೇವರಿಗೆ ತಾವು ನಡಿಸತಕ್ಕ ಆರಾಧನೆಯು ಪಾಂಚರಾತ್ರಾಗಮಕ್ಕೆ ಒಳಪಟ್ಟಿರುತ್ತೆಂದುನ್ನೂ ಇದು ಶ್ರೀವೈಷ್ಣವರು ದೇವಾಲಯಕ್ಕೆ ಸೇರಿದಾರಭ್ಯ ಆಚರಣೆಗೆ ತಂದಿರುತ್ತಾರೆಂತಲೂ ಗೊತ್ತಾಗಿರೋಣದರಿಂದ ಇವರ ಮತವೇ ನೂತನವಾಗಿರುವಲ್ಲಿ ಇವರ ಆಚಾರ ಪುರಾತನವಾಗಲಾರದಷ್ಟೆ. ಆದ್ದರಿಂದ ಇವರ ಆಚಾರವು ನವೀನಾಚಾರವೇ ಸರಿಯೆಂದು ಧಾರಾಳವಾಗಿ ಹೇಳಬಹುದು. ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನೆಯು ಶ್ರೀರಾಮಾನುಜ ಮತಕ್ಕಿಂತ ಸಾವಿರಾರು ವರ್ಷಗಳ ಹಿಂದಿನಿಂದಾ ಆಚರಣೆಯಲ್ಲಿ ಇರುತ್ತಾಗಿ ಇದು ಪ್ರಾಚೀನವಾದ ಆಚಾರವೆಂಬುವದು ಸ್ಪಷ್ಟವಾಗಿರುತ್ತೆ. ಮತ್ತು ಶ್ರೀಜಗದ್ಗುರುಗಳವರು ಪರಮಹಂಸಾಶ್ರಮದಲ್ಲಿ ಮಹರ್ಷಿಗಳಂತೆ ಇರತಕ್ಕವರುಗಳಾದ್ದರಿಂದ ಇತರ ಗೃಹಸ್ಥಾಶ್ರಮಿಗಳಂತೆ ದೀಕ್ಷಾದಿ ವಿಧಿಗಳಿಗೆ ಬದ್ಧರಾಗುವದಿಲ್ಲ. ಇವರು ಎಲ್ಲಾ ದೀಕ್ಷಿತರಿಗಿಂತಲೂ ಶ್ರೇಷ್ಠವಾದವರು. ಮತ್ತು ಪಾಂಚರಾತ್ರಾಗಮದೀಕ್ಷೆಗೆ ಬದ್ಧರಲ್ಲದ ಗೌತಮಮಹರ್ಷಿಗಳು ಈ ದೇವರನ್ನ ಆರಾಧಿಸುತ್ತಾ ಇದ್ದರೆಂಬುವದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವವಲ್ಲದೆ ಇದರನ್ನ ಶ್ರೀವೈಷ್ಣವರೇ ಒಪ್ಪಿಕೊಳ್ಳುತ್ತಾರೆ. ಆಗ್ಯೆ ಇವರಪೆಂದು ಹೇಳಿಕೊಳ್ಳುವ ಶ್ರೀರಂಗನಾಥದೇವರು ಹ್ಯಾಗೆ ಅಶುಚಿ ಆಗಲಿಲ್ಲವ್ರೋ ಅದರಂತೆಯೆ ಗೌತಮಮಹರ್ಷಿಗಳು ಮಾಡುತ್ತಿದ್ದ ವಿಧಿಯನ್ನ ಅನುಸರಿಸಿ ಶ್ರೀಜಗದ್ಗುರುಗಳವರ ಪರಂಪರೆಯವರೆಲ್ಲಾ ಆರಾಧಿಸತಕ್ಕದ್ದು ಅಶುಚಿತ್ವವನ್ನುಂಟುಮಾಡತಕ್ಕದ್ದಲ್ಲವೆಂಬುವದು ಮತ್ತು ಆಧುನಿಕರಿಂದ ಪ್ರತಿಷ್ಠಿತವಾದ ಬಿಂಬಕ್ಕೆ ಮಾಡತಕ್ಕ ಆರಾಧನೆಯಂತೆ ಶ್ರೀವೈಷ್ಣವರು ಈ ಅನಾದಿ ದೇವರಿಗೆಮಾಡುವ ಆರಾಧನೆಯಿಂದ ಉಂಟಾದ ದೋಷಗಳನ್ನ ಪರಿಹಾರ ಮಾಡತಕ್ಕ ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನಾಕ್ರಮವು ಸದಾಚಾರವಾದ್ದೆಂತಲೂ ಆಲೋಚನಾಪರರಾದವರು ತೀರ್ಮಾನಿಸದೆ ಇರಲಾರರು. ಈ ಮೇರೆ ಲೌಕಿಕಪಾರಮಾರ್ಥಿಕ ಎರಡುವಿಧವಾದ ನ್ಯಾಯಗಳು ಅಪೇಕ್ಷಿಸುವ ಸಮಾಧಾನರೂಪವಾದ ಸಂಗತಿಗಳನ್ನೆಲ್ಲಾ ಶ್ರುತಪಡಿಸಿರುತ್ತೇವೆ.

೧೨ ಮೇಲೆ ವಿವರಿಸಲ್ಪಟ್ಟ ಗ್ರಂಥಗಳು, ರಾಜರು ಮುಂತಾದವರು ಕೊಟ್ಟಿರತಕ್ಕ ಸನ್ನದಿನ ದಾಖಿತೆಗಳು ದೃಷ್ಟಾಂತಗಳು, ಚಿರಕಾಲಾರಭ್ಯ ನಡೆದುಬರುವ ಮಾಮೂಲು ಶಾಸ್ತ್ರಸಮ್ಮತವಾದ ಆಚಾರವು, ಸರ್ವಜನಸಮ್ಮತಿಯೂ, ಇವುಗಳೆಲ್ಲಾ ಶ್ರೀರಂಗನಾಥದೇವರನ್ನ ಆರಾಧಿಸತಕ್ಕದ್ದಕ್ಕೆ ಶ್ರೀಜಗದ್ಗುರುಗಳವರಿಗೆ ಇರತಕ್ಕ ವಿಶೇಷ ಹಕ್ಕುಬಾಧ್ಯತೆಗಳನ್ನ ಸ್ಥಿರಪಡಿಸುತ್ತವೆ. ಇವುಗಳನ್ನೆಲ್ಲಾ ಘನವನ್ನ ಹೊಂದಿದ ಕೌನ್ಸಲ್ ಸಭೆಯವರು ಪರ್ಯಾಲೋಚಿಸತಕ್ಕ ಸಮಯದಲ್ಲಿ ಶ್ರೀಜಗದ್ಗುರುಗಳವರು ಈ ಮೇರೆ ದೇವತಾರಾಧನೆ ಮಾಡತಕ್ಕದ್ದು ಆ ಮಹಾನುಭಾವರ ಸ್ವಪ್ರಯೋಜನಕ್ಕಾಗಿ ಅಲ್ಲ. ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಇವರುಗಳ ಅಪೇಕ್ಷೆಯನ್ನು ನೆರವೇರಿಸುವದಕ್ಕಾಗಿ ಮಾಡುತ್ತಾರೆ ಎಂಬುವದರನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರಿಭಾರಿಗೂ ದುಷ್ಟರು ತೊಂದರೆ ಕೊಡುವದಕ್ಕೆ ಆಸ್ಪದವಿಲ್ಲದಂತೆ ನ್ಯಾಯವಾಗಿಯೂ, ಖಂಡಿತವಾಗಿಯೂ, ಇರುವ ತೀರ್ಮಾನವನ್ನ ಅಪ್ಪಣೆ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಬರದುಕೊಂಡ ಅರ್ಜಿ.

ಜಯಲಕ್ಷ್ಮೀ ವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

Narao

లక్ష్మీనరసింహ శాస్త్రిగళ్ రుజు

రామయ్య

వెంకటాచలం

లక్ష్మీనారాయణగారి

సుబ్రహ్మణ్య శాస్త్రి రుజు

అగస్త్య... రుజు

M. Bhadriah

సూర్యలింగం రుజు

ఉగ్ర... శాస్త్రి సాని రుజు

మీనాక్షి మంగళపల్లి లక్ష్మి

సాని రుజు.

సుందరసాని రుజు

చిదంబరసాని రుజు

గో॥ రంగయ్య రుజు

[illegible]

[illegible]

సంఖ్యా సం॥ ౧౨ గుణము

శ్రీనాథుని

కాశీ సాగరము

కర్ణయుక్తము

శ్రీచౌడేశ్వరము

పుష్పగిరి శాపనరము

శ్రీ రంగము

౧ గురుమంపల్లయనము

౨, గురుడు నింగనాథ

నిత్యాదిగాదనము

అగారచరము

[illegible]

[illegible]

[illegible]

[illegible]

G. Shama Rao

[illegible]

[illegible]

[illegible]

ವೆಂಕಟಸುಬ್ಬಶಾಸ್ತ್ರಿ

[illegible]

[illegible]

శ్రీ వేద బిలస్వకూ మండల మండనాయమాన

మైసూరు — మహాసంస్థానద మహారాజాశ్రీ రాజవర్యరిగె

తెంకర మహాసంస్థానం గళిగె

మైసూరు సంస్థానక్కె సేరిద నగర డిస్ట్రిక్టు పాసస్థలార ప్రవర్తక మద్రా

సిటినసభా లెజిస్లేటివ్ కౌన్సిల్ మెంబర్ గళు వినయపూర్వక

విజ్ఞాపిసికొళ్ళువ దేనందరె

తారీఖు — ౭ — ౧౦ — ౧౯౨౯నే ఇసవి

నంబర్ అద్వైత మహాచార్యరాద శ్రీ శ్రీ శంకరాచార్య స్వాములవరు శ్రీ

మహాస్వామిగళవరు — స్థాపించిద — మైసూరు రాజధానిగె సేరిద

నగరసంరక్షకరాద శ్రీ రంగపట్టణద శ్రీ రంగనాథస్వామియవర దర్శన

సార్థకవాగి — దేవస్థానక్కె — దేవరు తిరుగు వైష్ణవ మత సంప్రదాయ

విరుద్ధవాద దిన్ ప్రసంగనవాగి — వైష్ణవరు వాసిసరు నమ్మ

కరల్లు ఖిపిర్థారి నమ్మెల్ల యారు కూడ కండువిరదానె — గోత్రం బిట్టెల్ల

శివస్థాన నిర్ధారణ — అంతా శివస్తోత్రవన్ను — మహాసంస్థానద

త్రిపురి సుందరి రూపవాగి — వరదవనద శ్రీ శైవరు ఆలయ దేవరు సేవకర

త్రయంబకనాదరు నమ్మ శ్రీ వైష్ణవరు గళంద కరల్లు ధారువ దేవస్థాన

విధ్యయవాగి — విస్తారవాద నంబు అద్వైతమత కరనరు నమస్కారవాద

[illegible]

[illegible]

[illegible]

[illegible]

[illegible]

[illegible] రచించినట్టి [illegible]

[illegible]

[illegible] వినయపూర్వకముగా [illegible]

[illegible] | [illegible]

[illegible] | [illegible]

[illegible]

[illegible]

[illegible]

80/180

(42)

[illegible]
[illegible]
[illegible]

[illegible]
[illegible]
[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

I [illegible]
[illegible]
[illegible]
[illegible]
[illegible]
[illegible]
[illegible]

[illegible]

[illegible]

III [illegible]

IV [illegible]

V [illegible]

VI [illegible]

VII [illegible]

VIII "[illegible] ||
[illegible] ||"
[illegible]
[illegible]
[illegible]
[illegible]
[illegible]

IX [illegible]
[illegible]
[illegible]
[illegible]

X [illegible]
[illegible]
[illegible]
[illegible]
[illegible]
[illegible]

XI [illegible]
[illegible]
[illegible]

"[illegible] ||
[illegible] ||
[illegible] ||
[illegible]
[illegible]
[illegible]
[illegible] ||
[illegible] ||

[illegible]
[illegible]
[illegible] ॥
ఇతి [illegible]
[illegible] ॥ [illegible]
[illegible] ॥ [illegible]
[illegible] ॥ [illegible]
[illegible] ॥ [illegible]
[illegible] ॥ ॥ [illegible]
[illegible]
[illegible] ॥ ॥ [illegible] ॥
[illegible] ॥
[illegible] ॥

॥ ఇతి ॥ ॥ ॥ ॥ ॥ ॥ ॥

XII [illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]

సా। ఎ. నర్సయ్య వ్రాలు

[illegible]

[illegible]

ఆ। పుట్టయ్య వ్రాలు

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

వెంకటరమణా జోగయ్య వ్రాలు

[illegible]

No 179

4-1)

ಶ್ರೀಮದಖಿಲ ಭೂಮಂಡಲ ಮಂಡನಾಯಮಾನ ಮೈಸೂರು ಸಂಸ್ಥಾನದ ಮಹಾರಾಣೀ ರೀಜಂಟ್ ಇವರ ಹುಜೂರು ಮಹಾ ಸನ್ನಿಧಾನಂಗಳಿಗೆ.

(ಶಿಕಾರಿಪುರ) ನಗರ ಡಿವಿಜನ್ ಶಿವಮೊಗ್ಗ ಡಿಸ್ಟ್ರಿಕ್ಟು ಶಿಕಾರಿಪುರ ತಾಲ್ಲೂಕು ... ನಿವಾಸಿಗಳಾದ ಅದ್ವೈತ ಮಹಾ ಜನಗಳು ವಿನಯ ಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವದೇನಂದರೆ,— ಮನ್ಮಥನಾಮ ಸಂ॥ ಮಾರ್ಗಶಿರ ಬಹುಳ ... ಭೃಗುವಾರ

ನಮ್ಮ ಅದ್ವೈತ ಮತಾಚಾರ್ಯರಾದ ಶ್ರೀ ಶ್ರೀ ಶೃಂಗೇರಿ ಜಗದ್ಗುರು ಮಹಾ ಸ್ವಾಮಿಗಳವರ ಸವಾರಿಯು, ಕಳೆದ ಜೂನ್ ತಿಂಗಳಲ್ಲಿ ಮೈಸೂರು ರಾಜಧಾನಿಗೆ ದಯಮಾಡಿಸಿದ ಸಮಯದಲ್ಲಿ, ಮಧ್ಯ ಮಾರ್ಗದಲ್ಲಿದ್ದ ಶ್ರೀರಂಗಪಟ್ಟಣದ ರಂಗನಾಥ ಸ್ವಾಮಿಯವರ ದರ್ಶನಾರ್ಥ ದಯಮಾಡಿಸಿ, ಶ್ರೀ ಸ್ವಾಮಿ ದರ್ಶನ ಪೂಜಾದಿಗಳಿಂದ ಶಿಷ್ಯರಾದ ನಮಗಳಿಗೆ ಶ್ರೇಯೋಭಿವೃದ್ಧಿಯಾಗುವಂತೆ ಅನುಗ್ರಹವಾಗಬೇಕಾಗಿ ಶಿಷ್ಯಮಂಡಲೀಯವರು ಮಾಡಿಕೊಂಡ ವಿಶೇಷವಾದ ಪ್ರಾರ್ಥನೆಯನ್ನು ಅಂಗೀಕರಿಸಿ, ಆದರಂತೆ ಅನುಗ್ರಹವಾದ ಅಂಶದಲ್ಲಿ, ಆ ಈಚಿಗೆ ಕೆಲವು ದಿನಗಳ ತರುವಾಯ ವಿಶಿಷ್ಟಾದ್ವೈತಿಗಳಾದ ಶ್ರೀವೈಷ್ಣವರುಗಳು ತಮ್ಮಗಳಿಂದ ಆದರಿಸಲ್ಪಡುತ್ತಲಿರುವ ಪಾಂಚರಾತ್ರಾಗಮ ಸಿದ್ಧಾಂತ ವಿರುದ್ಧವಾಯಿತೆಂತಲೂ, ಈ ಗೋಸ್ಕರ ಮೇಲಿನ ಆಗಮರೀತ್ಯಾ ದೇವಸ್ಥಾನದಲ್ಲಿ ಉಂಟಾದ ಅಶುಚಿಯನ್ನು ಹೋಗಲಾಡಿಸಿಕೊಳ್ಳುವದಕ್ಕಾಗಿ, ಸಂಪ್ರೋಕ್ಷಣೆಯನ್ನು ಮಾಡುವದಕ್ಕೆ ಅಪ್ಪಣೆ ಕೊಡಿಸಬೇಕಾಗಿ ವಗೈರೆ, ಗೌರ್ನ್ಮೆಂಟಿನಲ್ಲಿ ಫಿರ್ಯಾದು ಪಟ್ಟದ್ದರಮೇಲೆ, ತಮ್ಮ ದೇಶದ ಪ್ರಜೆಗಳಲ್ಲಿ ಪರಸ್ಪರ ವೈಷಮ್ಯಗಳಿಗೆ ಅವಕಾಶವುಂಟಾಗಿ ತನ್ಮೂಲಕ ಪ್ರಜೆಗಳು ತೊಂದರೆಯನ್ನು ಪಡಿಯಬಾರದೆಂಬ ಕರುಣೆಯನ್ನು ತೆಗದುಕೊಂಡು, ಸರ್ವಮತ ಸಮ್ಮತವಾದ ಮತ್ತು ಸಮಾನಬಾಧ್ಯತೆಯುಳ್ಳ ಸರ್ಕಾರೀ ದೇವಸ್ಥಾನದ ವಿಷಯದಲ್ಲಿ, ಒಂದು ಮತದವರ ರೀತ್ಯಾ ವಿರುದ್ಧವಾಯಿತೆಂತಲೂ, ಅಂಥಾ ಮತಾನುಗುಣ್ಯವಾಗಿ ದೇವಸ್ಥಾನದ ವಿಷಯದಲ್ಲಿ ನಡಸಿಕೊಡಬೇಕಾಗಿ ತಂದ ಫಿರ್ಯಾದು ವಿಚಾರಕ್ಕೆ ಅರ್ಹವಾದ್ದಲ್ಲವೆಂಬ ಖಂಡಿತವಾದ ಅಪ್ಪಣೆಯನ್ನು ದಯಪಾಲಿಸದೇ ವಿಚಾರಮಾಡಿ, ಆಗಿನ ಸಂದರ್ಭದಲ್ಲಿ ಫಿರ್ಯಾದಿಗಳ ಫಿರ್ಯಾದಿನಲ್ಲಿ ವಿವರಿಸಲ್ಪಟ್ಟಂತೆ ನಡವಳಿಕೆಗಳು ನಡದು ಇರಲಿಲ್ಲವೆಂಬದರಮೇಲೆ, ಅವರ ಕೋರಿಕೆಯಂತೆ ಸಂಪ್ರೋಕ್ಷಣಾದಿಗಳು ನಡಿಸಬೇಕಾದ್ದು ಪ್ರಸಕ್ತವಿಲ್ಲವಾಗಿ ಅಪ್ಪಣೇ ಕೊಡಿಸೋಣವಾಯಿತು ; ಇಂಥಾ ಅಪ್ಪಣೆಯನ್ನು ಅದ್ವೈತ ಮತದವರುಗಳು ನೋಡಿ, ಬಹಳ ವಿಷಾದವನ್ನು ಹೊಂದುತ್ತಾ ಸಕಲ ಪ್ರಜಾ ಪರಿಪಾಲಕರಾದ ಗೌರ್ನ್ಮೆಂಟಿನವರು ಯಾವ ಉದ್ದೇಶ್ಯದಿಂದ ಇಂಥಾ ಅಪ್ಪಣೆಯಂ ಮಾಡಿರುವರೋ ಅದನ್ನು ಕುರಿತು ನಾವುಗಳು ಹ್ಯಾಗೆ ಚರ್ಚಿಸಬಹುದೆಂದು ಭೀತರಾಗಿ, ತಮ್ಮೊಳಗೆ ತಾವೇ ವಿಷಾದಪಡುತ್ತಿರುವಲ್ಲಿ, ಫಿರ್ಯಾದು ಪಟ್ಟವರುಗಳು ಒಂದು ವಿಧವಾಗಿ ತಮ್ಮಿಂದ ಆರಂಭಿಸಲ್ಪಟ್ಟ ಕಾರ್ಯವು ನೆರವೇರಿದಹಾಗೆ ಆಗಿದ್ದಾಗ್ಯೂ, ಸಕಲ ಮತದವರಿಗೂ ಸಮಾನ ಬಾಧ್ಯತೆಯುಳ್ಳ ದೇವಸ್ಥಾನದ ವಿಷಯದಲ್ಲಿ ನೂತನವಾದ ಒಂದು ವ್ಯವಹಾರವಂ ಮಾಡಿ, ತನ್ಮೂಲಕ ತಾವುಗಳು ಸರ್ಕಾರದಿಂದ ಸ್ವಲ್ಪಮಟ್ಟಿಗೆ ಅವಕಾಶವನ್ನುಂಟುಮಾಡಿಕೊಳ್ಳಬೇಕೆಂಬ ಉದ್ದೇಶ್ಯದಿಂದ ಮಾಡಿದ ಅರಂಭದಲ್ಲಿ, ಅವರುಗಳ ಉದ್ದೇಶ್ಯಕ್ಕನುಗುಣವಾಗಿ ಇಷ್ಟರಮಟ್ಟಿಗೆ ಅವಕಾಶ ದೊರಕಿದ್ದನ್ನೇ ಪ್ರಬಲವಾಗಿಟ್ಟುಕೊಂಡು, ಈಗಲೇ ತಮ್ಮ ಮತದವರಿಗೆ ಒಂದು ಹಕ್ಕುದಾರಿಯನ್ನು ಸ್ಥಿರಪಡಿಸಿಕೊಳ್ಳತಕ್ಕ ಬಗ್ಯಾಗಿ ಗೌರ್ನ್ಮೆಂಟಿನವರ ತೀರ್ಮಾನದಮೇಲೂ ಚರ್ಚೆಗಳನ್ನು ಮಾಡುತ್ತಾ ಬರುತ್ತಲಿರುವದು ವರ್ತಮಾನ ಪತ್ರಿಕೆಗಳ ಮೂಲಕವಾಗಿ ನಾವುಗಳು ತಿಳಿದು, ವರ್ಷವನ್ನೆದುರುನೋಡುತ್ತಲಿರುವ ಚಾತಕಪಕ್ಷಿಗಳೋಪಾದಿಯಲ್ಲಿ, ಗೌರ್ನ್ಮೆಂಟಿನವರಿಂದ ಮಾಡಲ್ಪಟ್ಟ ತೀರ್ಮಾನದ ವಿಷಯವಾಗಿ ನಾವುಗಳು ಗೌರ್ನ್ಮೆಂಟಿನವರಲ್ಲಿ ನಮಗಳ ವಿಷಯವನ್ನು ಕುರಿತು ಅರಿಕೆಮಾಡಿಕೊಳ್ಳುವದಕ್ಕೆ ಅತ್ಯಂತ ಭಯಸ್ಥರಾಗಿ ನಿರೀಕ್ಷಿಸುತ್ತಲಿದ್ದವರಿಗೆ ಈ ಭಾಗದಲ್ಲಿ ಬಹಳಮಟ್ಟಿಗೆ ಧೈರ್ಯವನ್ನೂ, ಸಹಾಯವನ್ನು ಪರಪಕ್ಷೀಯರೇ ಉಂಟುಮಾಡಿಕೊಟ್ಟದ್ದರಿಂದ, ನಾವುಗಳು ಸನ್ನಿಧಿಯಲ್ಲಿ ಅರಿಕೆಮಾಡಿಕೊಳ್ಳುವ ವಿಷಯಗಳನ್ನು ಸರ್ವಮತ ಪರಿಪಾಲಕರಾದ ಸರ್ಕಾರದವರು ಘನವಾದ ಚಿತ್ತದಲ್ಲಿ ಲಾಲಿಸೋಣವಾಗಬೇಕು.

೧. ಸಂಸ್ಥಾನದಲ್ಲಿರತಕ್ಕ ಶಿವ ವಿಷ್ಣ್ವಾದಿ ದೇವಾಲಯಗಳು, ಆದೇವರುಗಳಲ್ಲಿ ನಂಬಿಕೆಯಿಂದ ಆರಾಧಿಸುತ್ತಲಿರುವ ಯಲ್ಲಾ ಮತದವರಿಗೂ ಸಮಾನ ಬಾಧ್ಯತೆಯುಳ್ಳದ್ದೇ ಶಿವಾಯಿ, ವೈಷ್ಣವರೆಂದು ಪ್ರಸಿದ್ಧವಾಗಿ ಲೋಕದಲ್ಲಿ ಹೇಳಲ್ಪಡತಕ್ಕ ಒಂದು ಮತದವರಿಗೆ ಮಾತ್ರವೇ ವಿಷ್ಣು ದೇವಾಲಯದಲ್ಲಿ ಹೆಚ್ಚಾದ ಸಂಬಂಧವಿದೆ ಎಂಬದನ್ನು ಹ್ಯಾಗೆ ಹೇಳಬಹುದು ? ಈಗ ಬ್ರಾಹ್ಮಣ ಮತದಲ್ಲುಂಟಾಗಿರತಕ್ಕ ಮೂರು ಪ್ರಭೇದದವರುಗಳಲ್ಲಿ, ದ್ವೈತಿಗಳು, ವಿಶಿಷ್ಟಾದ್ವೈತಿಗಳು ಈ ಯರಡು ಮತದವರೂ ವಿಷ್ಣುವನ್ನು ಮಾತ್ರವೇ ವಿಶೇಷವಾಗಿ ಆರಾಧಿಸುತ್ತಾ ಬರುತ್ತಾರೆ; ಹಾಗೆಆರಾಧಿಸೋಣವು ಅವರಮತರೀತ್ಯಾ ಸರಿಯಾದ್ದಾಗಿರುತ್ತೆ ~~(ಅದ್ವೈತಿಗಳು ತಮ್ಮ ಮತರೀತ್ಯಾ ಯಲ್ಲಾ ದೇವರುಗಳನ್ನು ಭೇದವಿಲ್ಲದೇ ಸಮಾನ ಬುದ್ಧಿಯಿಂದ ಆರಾಧಿಸುತ್ತಾ ಬರುತ್ತಾರೆ;)~~ ಅದ್ವೈತಿಗಳು ತಮ್ಮ ಮತರೀತ್ಯಾ ಎಲ್ಲಾ ದೇವರುಗಳನ್ನು ಭೇದವಿಲ್ಲದೇ ಸಮಾನಬುದ್ಧಿಯಿಂದ ಆರಾಧಿಸುತ್ತಾ ಬರುತ್ತಾರೆ ; ಹೀಗಿರುವದರಿಂದ ವಿಷ್ಣುವನ್ನು ಮಾತ್ರವೇ ವೈಷ್ಣವರು ಆರಾಧಿಸುವದ್ದರಿಂದ, ವಿಷ್ಣು ದೇವಾಲಯಗಳಲ್ಲಿ ವೈಷ್ಣವರುಗಳಿಗೆ ಹೆಚ್ಚಾದ ಹಕ್ಕುದಾರಿ ಇರುತ್ತೆಂತಲೂ, ಶಿವ ವಿಷ್ಣು ಇವರುಗಳಲ್ಲಿ ಭೇದವಿಲ್ಲದೇ ಸಮಾನ ಬುದ್ಧಿಯಿಂದ ಆರಾಧಿಸತಕ್ಕವರಾದ್ದರಿಂದ, ಅದ್ವೈತಿಗಳಿಗೆ ವಿಷ್ಣುದೇವಾಲಯಗಳಲ್ಲಿ ವೈಷ್ಣವರುಗಳಿಗೆ ಇರತಕ್ಕ ಬಾಧ್ಯತೆಯೂ ಇಲ್ಲವೆಂದು ಹೇಳಬಹುದೆ ? ಅಥವಾ ಒಂದುವೇಳೆ ಬ್ರಾಹ್ಮಣ ಮತದವರಲ್ಲಿ ಏರ್ಪಟ್ಟಿರುವ ಮೂರು ಮತದವರಿಗೂ, ಇತರ ಮತದವರುಗಳಲ್ಲಿ ಏರ್ಪಟ್ಟಿರುವಂತೆ ಪ್ರತ್ಯೇಕ ಪ್ರತ್ಯೇಕವಾಗಿ ಈ ಈ ಮತದವರಿಗೆ ಇಂತಿಂಥಾ ದೇವಸ್ಥಾನಗಳೆಂದು ಏನಾದರೂ ಏರ್ಪಟ್ಟಿರುತ್ತೆಧೆಯೇ ? ಹಾಗೆ ಏರ್ಪಟ್ಟಿರುವಲ್ಲಿ ವಿಷ್ಣುದೇವಾಲಯಗಳು ವೈಷ್ಣವರುಗಳದೆಂತಲೇ ಏರ್ಪಟ್ಟಧೆಯೇ ? ಅಥವಾ ಇತರ ಮತದವರುಗಳು ತಮ್ಮ ತಮ್ಮ ಮತದಲ್ಲಿ ತಮ್ಮ ಪ್ರಭೇದದವರುಗಳಿಗಾಗಿಯೇ ಸ್ವಂತವಾಗಿ ದ್ರವ್ಯ ವ್ರಯವನ್ನುಮಾಡಿ ಏರ್ಪಡಿಸಿಕ್ಕೊಂಡಿರುವ ಮೇರೆ, ಏನಾದರೂ ವೈಷ್ಣವರುಗಳು ವಿಷ್ಣು ದೇವಾಲಯಗಳನ್ನು ತಮ್ಮ ಮತದವರಿಗಾಗಿಯೇ ಸ್ವಂತವಾಗಿ ಏರ್ಪಡಿಸಿಕ್ಕೊಂಡಿರುವರೇ ? ಇಂಥಾದ್ದರಲ್ಲಿ ಯಾವದರಲ್ಲಿಯೂ ಶೇರದೆ ದೇವಸ್ಥಾನದ ವಿಷಯದಲ್ಲಿ ವೈಷ್ಣವರುಗಳು (ಅದ್ವೈತ ಮತಾಚಾರ್ಯರವರು ವಿಷ್ಣುದೇವಾಲಯಕ್ಕೆ ದಯಮಾಡಿಶಿದ್ದು ತಮ್ಮ ಮತರೀತ್ಯಾ ವಿರುದ್ಧವಾಯಿತೆಂತ) ಹೇಳತಕ್ಕದ್ದು ನ್ಯಾಯವೇ? ಎಂಬವನ್ನು ಗೌರ್ಮೆಂಟಿನಲ್ಲಿಯೇ ಪರ್ಯಾಲೋಚನೆಯಲ್ಲಿ ತರೋಣವಾಗಬೇಕು.

೨. ಬ್ರಾಹ್ಮಣ ಮತದವರಲ್ಲಿರತಕ್ಕ ಮೂರುಪ್ರಭೇದದವರೂ ವೇದಕ್ಕೆ ಕಟ್ಟುಬಿದ್ದವರಾಗಿಯೂ, ವೈದಿಕರೆಂದು ಹೇಳಿಸಿಕ್ಕೊಳ್ಳತಕ್ಕವರಾಗಿಯೂ ಇರುತ್ತಾರೆ. ಆದರೆ, ಇವರೆಲ್ಲರೂ ವೇದವನ್ನು ಹ್ಯಾಗೆ ಸರ್ವಸಮ್ಮತವನ್ನಾಗಿ ಭಾವಿಸುತ್ತಾರೋ? ಹಾಗೆ, ಇತರ ಆಗಮಾದಿಗಳನ್ನು ಸರ್ವ ಸಮ್ಮತವಾದದ್ದನ್ನಾಗಿ ಭಾವಿಸುವದಿಲ್ಲ ; ಯಾಕೆಂದರೆ, ಆಗಮಗಳು ಗೌತಮಶಾಪಗ್ರಸ್ತರಾದ ಕೆಲವು ಬ್ರಾಹ್ಮಣರುಗಳು, ತಮಗೆ ಇದ್ದ ವೇದಾಧಿಕಾರವನ್ನು ಕಳದುಕ್ಕೊಂಡ ಸಮಯದಲ್ಲಿ ಅಂಥವರುಗಳ ರಕ್ಷಣಾರ್ಥವಾಗಿ, ಈಶ್ವರನಿಂದಲೂ, ಶ್ರೀಮಹಾ ವಿಷ್ಣುವಿನಿಂದಲೂ, ಶೈವ, ವೈಷ್ಣವಾಗಮಗಳು ಹೇಳಲ್ಪಟ್ಟವಗಳಾಗಿ ಆಸ್ತಿಕರಿಂದ ಅಂಗೀಕರಿಸಲ್ಪಡುತ್ತಲಿರುವ ಸೂತಸಂಹಿತೆ, ಕೂರ್ಮಪುರಾಣ, ದೇವೀಭಾಗವತ, ಇತ್ಯಾದಿ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದರಿಂದ, ಯಲ್ಲವರಿಂದಲೂ, ಆಗಮ ಶಾಸ್ತ್ರಗಳು ಆದರಣೀಯವಾದ್ದಲ್ಲವೆಂಬುವದು ಸ್ಪಷ್ಟವಾಗಿಧೆ.

೩. ಆಗಮಿಕರುಗಳು ಹೇಳುವರೀತ್ಯಾ ವೈದಿಕರುಗಳು ಸ್ಥಿರಮೂರ್ತಿಗಳಾದ ಶಿವ ವಿಷ್ಣ್ವಾಲಯಗಳಲ್ಲಿ ಸ್ವಾರ್ಥವಾದ ಪೂಜೆಯನ್ನು ಮಾಡಬಾರದಾಗಿ ವೈದಿಕನಿಗೆ ಶಾಸ್ತ್ರಗಳಲ್ಲಿ ಉಕ್ತವಾಗಿಲ್ಲ ; ಪರಂತು, ವೈದಿಕನು ಚರಸ್ಥಿರ ಯರಡರಲ್ಲಿಯೂ ವೇದೋಕ್ತ ವಿಧಿಯಿಂದ ಪೂಜೆಮಾಡಬೇಕೆಂತಲೇ ಹೇಳಿಧೆ. ಮತ್ತು, ಆಗಮೋಕ್ತವಾಗಿ ಪೂಜಾದಿಗಳು ನಡಿಯುತ್ತಾ ಇದ್ದಾಗ್ಯೂ, ಆಗಮ ವಿಧಾನದಿಂದಲೇ ಪ್ರತಿಷ್ಠೆಮಾಡಲ್ಪಟ್ಟಿದ್ದಾಗ್ಯೂ, ಅಂಥಾ ಮೂರ್ತಿಗಳನ್ನು ವೈದಿ

ಕನು ವೇದೋಕ್ತ ವಿಧಾನದಿಂದ ಪೂಜೆಮಾಡಬೇಕಾಗಿ ಶಾಸ್ತ್ರಗಳಲ್ಲಿ ಹೇಳಿಇದೆ. ಮೇಲಿನ ಅಂಶಗಳಿಗೆ ಆಧಾರವಾದ ಶಾಸ್ತ್ರ ವಚನಗಳನ್ನು ಸನ್ನಿಧಾನದ ಪರಾಂಬರಿಕೆ ಬಗ್ಗೆ ಇದರೊಡನೆ ಹಾಜರ್ಮಾಡಿರುತ್ತೇವೆ.

೪. ಆಗಮಗಳು ಹುಟ್ಟಿದ ರೀತಿಯನ್ನು ಅರಿಕೆಮಾಡಿಕೊಂಡಿರುವದರಿಂದಲೇ, ಆಗಮಶಾಸ್ತ್ರರೀತ್ಯಾ ಅನುಷ್ಠಾನವನ್ನು ಮಾಡತಕ್ಕವನು ಆಗಮಿಕನೇ ಶಿವಾಯಿ ವೈದಿಕನಲ್ಲವೆಂಬದು ಸ್ಪಷ್ಟವಾಗುತ್ತದಾದ್ದರಿಂದ, ಅವರಲ್ಲಿ ಹೇಳಿರತಕ್ಕ ವಿಧಿನಿಷೇಧಗಳಿಗೂ, ಆ ಶಾಸ್ತ್ರವನ್ನು ಅವಲಂಬಿಸಿರತಕ್ಕವನೇ ವಿಷಯನಾಗುತ್ತಾನೆ. ಅದೀಕ್ಷಿತನೆಂತಲೂ, ವಿಷ್ಣುದೀಕ್ಷಾ ಬದ್ಧನಲ್ಲವೆಂತಲೂ, ಶೈವದೀಕ್ಷ ಬದ್ಧನಲ್ಲವೆಂತಲೂ, ಅವನಿಗೆ ಹೇಳಬೇಕೇ ಶಿವಾಯಿ ಅಂಥವುಗಳಿಗೆ ಯಾವಾಗ್ಯೂ ಬದ್ಧನಾಗದ ವೈದಿಕನಿಗೆ ಹೇಳುವದಕ್ಕಾಗುವದಿಲ್ಲ. ಆ ಶಾಸ್ತ್ರರೀತ್ಯಾ ದೀಕ್ಷಾದಿಗಳನ್ನು ಮಾಡಿಕೊಳ್ಳದ ತಾಂತ್ರಿಕನು, ದೀಕ್ಷಾದಿಕ್ರಮಗಳನ್ನು ಅನುಸರಿಸುವದಕ್ಕೆ ಪೂರ್ವವೇ ದೇವತಾಸ್ಪರ್ಶನ, ದೇವತಾರಾಧನೆಗಳನ್ನು ಮಾಡಿದರೆ, ತದ್ರೀತ್ಯಾ ಸಂಪ್ರೋಕ್ಷಣಾದಿಗಳು ಆಗಬೇಕೆಂಬದು ಸಹಜವಾಗಿರುತ್ತೆ.

೫. ಆಗಮ ಶಾಸ್ತ್ರವು ತಾಂತ್ರಿಕನಿಗೆ ಸಂಬಂಧಪಟ್ಟದ್ದೆಂತಲೂ, ವೈದಿಕನಿಗೆ ಸಂಬಂಧವಿಲ್ಲವಾಗಿ ಹೇಳದೇ ಇದ್ದರೆ, ವೇದಕ್ಕಿಂತಲೂ ಆಗಮವೇ ಪ್ರಬಲವಾದದ್ದೆಂತಲೂ, ವೈದಿಕನಿಗಿಂತಲೂ, ಆಗಮಶಾಸ್ತ್ರಾವಲಂಬಿಯೇ ಉತ್ತಮನೆಂತಲೂ, ಹೇಳಬೇಕಾಗುತ್ತೆ. ಹಾಗೆ ಹೇಳೋಣವು ಲೋಕಸಮ್ಮತವಾದೀತೆ ? ಹಾಗಿದ್ದರೆ, ಸರ್ವೋತ್ತಮವಾದಆಗಮಶಾಸ್ತ್ರವನ್ನೇ ಯಲ್ಲವರೂ ಅಂಗೀಕರಿಸಿ, ಅದರಂತೆನೇ ಅನುಷ್ಠಾನವನ್ನೂ ಮಾಡುತ್ತಾ ಬರುತ್ತಲಿದ್ದರು. ಈಗ ಲೋಕದಲ್ಲಿ, ತಾಂತ್ರಿಕರುಗಳು ವೈದಿಕರುಗಳಿಗಿಂತಲೂ ಬಹಳ ಸ್ವಲ್ಪ ಸಂಘದವರೆಂಬದನ್ನು ಸಹಜವಾಗಿ ತಿಳಿಯಬಹುದಾಗಿದೆ; ಹೀಗಿರುವದಕ್ಕೆ ಕಾರಣ ವೇನೆಂಬದನ್ನು ಘನವಾದ ಚಿತ್ತದಲ್ಲಿ ಪರಾಂಬರಿಸೋಣವಾಗಬೇಕು.

೬. ಯಲ್ಲಾ ದೇಶಗಳಲ್ಲಿಯೂ, ಪ್ರಾಯೇಣ ತಾಂತ್ರಿಕರುಗಳೇ ಶಿವ ವಿಷ್ಣ್ವಾಲಯಗಳಲ್ಲಿ, ಪೂಜೆಮಾಡುತ್ತಾ ಬಂದಿರುವದರಿಂದ, ಆಗಮೋಕ್ತವಾದ ಪೂಜೆಯನ್ನೇ ಮಾಡಬೇಕೆಂಬದು ಶಾಸ್ತ್ರೀಯವಾದದ್ದೆಂತಲೂ, ಅದರಿಂದಲೇ ದೇವರುಗಳಿಗೆ ಪ್ರೀತಿಯುಂಟಾಗುತ್ತೆಂತಲೂ, ಇತರವೈದೀಕರುಗಳು ದೇವರನ್ನು ಆರಾಧಿಸಕೂಡದಾಗಿಯೂ, ದೇವರ ಸಮೀಪ ಪ್ರದೇಶಗಳಿಗೆ ಬರಕೂಡದಾಗಿಯೂ, ಹಾಗೆ ನಡೆದರೆ ದೇವರು ಅಶುದ್ಧನಾದನೆಂತಲೂ, ಹೀಗೆಲ್ಲಾ ತಾಂತ್ರಿಕರುಗಳು ದುರ್ವ್ಯವಹಾರಗಳನ್ನು ಮಾಡುವದಕ್ಕೆ ಅವಕಾಶ ಉಂಟಾಗಿರುತ್ತೆ, ಪ್ರಭುತ್ವವನ್ನು ಮಾಡತಕ್ಕ ರಾಜರುಗಳು ತಮ್ಮ ತಮ್ಮ ದೇಶದಲ್ಲಿರತಕ್ಕ ದೇವಾಲಯಗಳನ್ನು ಜೀರ್ಣೋದ್ಧಾರಮಾಡಿ, ಅವುಗಳಿಗೆ ಬೇಕಾದಷ್ಟು ದ್ರವ್ಯಗಳನ್ನುಕೊಟ್ಟು, ರಾಜ್ಯ ಮತ್ತು, ರಾಜ್ಯದಲ್ಲಿರತಕ್ಕ ಪ್ರಜೆಗಳ ಕ್ಷೇಮಾರ್ಥವಾಗಿ, ನಿತ್ಯದಲ್ಲಿಯೂ ಆರಾಧನೆಗಳನ್ನು ನಡಸುವ ಬಗ್ಗ್ಯಾಗಿ ವೇತನಗಳನ್ನು ಏರ್ಪಡಿಸಿ ಪೂಜಕರುಗಳನ್ನು ನಿಯಮಿಸ ಬೇಕಾದ ಸಂದರ್ಭಗಳಲ್ಲಿ, ವೈದಿಕರುಗಳು (ಪರಾರ್ಥವಾಗಿ ವೇತನವನ್ನು ಪಡಕೊಂಡು ಪೂಜೆಮಾಡತಕ್ಕದ್ದು ಧರ್ಮಶಾಸ್ತ್ರ ಪುರಾಣಗಳರೀತ್ಯಾ ದೇವಲಕರಾಗಿ ಕರ್ಮಬಹಿಷ್ಕೃತರಾಗುತ್ತೇವೆಂಬದರಿಂದ) ಏರ್ಪಡದೆ, ತಾಂತ್ರಿಕರುಗಳು (ವೈದಿಕರು ಗಳಂತೆ ಯೋಚಿಸದೆ) ಪೂಜಾದಿಗಳನ್ನು ಮಾಡಿಕೊಂಡುಬರುವದಕ್ಕೆ ಅಂಗೀಕರಿಸಿರ ಬಹುದೇಶಿವಾಯಿ, ವೈದಿಕನಿಗಿಂತಲೂ ತಾಂತ್ರಿಕನು ಶ್ರೇಷ್ಠನೆಂತಾಗಲೀ, ವೇದಕ್ಕಿಂತಲೂ ತಂತ್ರವು ಶ್ರೇಷ್ಠವಾದದ್ದೆಂತಲಾಗಲೀ, ದೇವಸ್ಥಾನಗಳಲ್ಲಿ ಆಗಮೋಕ್ತ ಪೂಜೆಗಳು ಏರ್ಪಟ್ಟದ್ದೆಂದು ಹೇಳುವದಕ್ಕೆ ಯಾವವಿಧವಾದ ಆಧಾರಗಳೂಇಲ್ಲವಾಗಿವೆ.

೭. ತಾಂತ್ರಿಕಸ್ಥಳದಲ್ಲಿ, ವೈದಿಕರುಗಳು ಸ್ವಾರ್ಥವಾಗಿ ಪೂಜೆಮಾಡಬಹುದಾಗಿದ್ದರೂ, ಈಗ ಯಾತಕ್ಕೆ ಹಾಗೆ ನಡದು ಬರುವದಿಲ್ಲವಾಗಿಯೂ, ಅದರಿಂದಲೇ ಸ್ಥಿರಮೂರ್ತಿಗಳನ್ನು ಪೂಜಿಸುವದಕ್ಕೆ ವೈದಿಕರುಗಳು ಅಧಿಕಾರಿಗಳೇ ಅಲ್ಲವೆಂತಲೂ, ಹಾಗೆ ದೇವರುಗಳನ್ನು ಆರಾಧಿಸಿದರೆ ತಂತ್ರೋಕ್ತವಾದ ಸಂಪ್ರೋಕ್ಷಣೆಗಳು ಆಗಬೇಕಾಗಿ ತಾಂತ್ರಿಕರುಗಳು ಹೇಳತಕ್ಕ ಅಂಶಗಳಿಗೆ ಕಾರಣಗಳು, ತಾರ್ಕಿಕವಾದ ರಾಜನಿರ್ಬಂಧ ರೂಪವಾದ ಕಾರಣಗಳಾಗಿ ಹೇಳಬೇಕೆ ವಿನಹಾ, ಶಾಸ್ತ್ರೀಯ್ಯವಾದ್ದೆಂದು ಹೇಳುವದಕ್ಕೆ ಸಾಧ್ಯವಿಲ್ಲ. ಕೆಲ ಕೆಲವು ದೊಡ್ಡ ಪ್ರಸಿದ್ಧ ದೇವಾಲಯಗಳಲ್ಲಿ, ರಾಜರುಗಳಿಂದ ಕೊಡಲ್ಪಟ್ಟಿರುವ ಅನೇಕಾಭರಣಗಳು ವಗೈರೆ ದೇವರುಗಳಿಗೆ ಧರಿಸತಕ್ಕ ಸಂಪ್ರದಾಯಗಳು ಏರ್ಪಟ್ಟಿರುವದರಿಂದ, ಕಾಲಾನುಗುಣ್ಯವಾಗಿ ಜನರುಗಳು ಪಾರಮಾರ್ಥಿಕಬುದ್ಧಿಯನ್ನು ಯೋಚಿಸಿ, ಅವುಗಳ ಸಂರಕ್ಷಣಾರ್ಥವಾಗಿ ಇಂಥಾ ನಿರ್ಬಂಧಗಳು ಏರ್ಪಟ್ಟಿರಬಹುದಾಗಿ ಹೇಳತಕ್ಕದ್ದಾಗಿದೆ. ಆಗಮ ದೀಕ್ಷಾಬದ್ಧರಲ್ಲದ ಮಠಾಚಾರ್ಯರುಗಳೂ ಅನೇಕ ಋಷಿಗಳೂ ಈಗ ಇರತಕ್ಕ ಆಚಾರ್ಯರೂ ಕೂಡಾ, ತಂತ್ರೋಕ್ತವಾಗಿ ಪೂಜೆನಡಿಯತಕ್ಕ ದೇವಸ್ಥಾನಗಳಲ್ಲಿ ಪೂಜಾದಿಗಳನ್ನು ಮಾಡುತ್ತಾ ಬಂದಿರುವದರಿಂದಲೇ, ಮೇಲಿನ ಅರ್ಥವನ್ನು ಸಹಜವಾಗಿ ನಿರ್ಧರಿಸಬಹುದಾಗಿದೆ.

ಇವುಗಳನ್ನೆಲ್ಲಾ ಚನ್ನಾಗಿ ಪರಾಂಬರಿಕೆಯಲ್ಲಿ ತೆಗದುಕೊಂಡು, ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ತಮ್ಮ ಆಶ್ರಮದಮರ್ಯಕ್ಕೆ ಸಗುಣೋಪಾಸನೆಯು ಮುಖ್ಯವಾದದ್ದಲ್ಲವಾದಾಗ್ಯೂ, ರಾಜ್ಯಭಾರವನ್ನು ಮಾಡತಕ್ಕ ರಾಜರುಗಳ, ಮತ್ತು ತಮ್ಮ ಶಿಷ್ಯರುಗಳ ಕ್ಷೇಮಾರ್ಥವಾಗಿ ಸರ್ಕಾರೀ ದೇವಸ್ಥಾನಗಳಲ್ಲೂ, ಇತರದೇವಸ್ಥಾನಗಲ್ಲೂ, ಈವರಿಗೆ ಪೂಜೆಯನ್ನು ಮಾಡುತ್ತಾ ಬಂದಿರುವದಕ್ಕಾಗಿ, ಸರ್ಕಾರದಿಂದಾ ಹುಟ್ಟಿರತಕ್ಕ ಸನದುಗಳ ದಾಖಲೇಗಳು ಸರ್ಕಾರದಲ್ಲೇ ಇರಬಹುದಾದ್ದರಿಂದ, ಅವುಗಳನ್ನು ಪರಾಂಬರಿಸೋಣದರಿಂದಲೂ, ಶ್ರೀ ಮಠದಲ್ಲಿರತಕ್ಕ ಸನದು ದಾಖ್ಲೆಗಳನ್ನು ಹಾಜರ್ಮಾಡಬೇಕಾಗಿ ನಮಗಳಿಗೆ ಅಪ್ಪಣೆ ಆದಲ್ಲಿ, ಅಂದವುಗಳನ್ನು ದೊರತಷ್ಟುಮಟ್ಟಿಗೆ ನಮ್ಮಗಳಿಂದ ಹಾಜರ್ಪಡಿಸಿಕೊಂಡು, ಅವುಗಳನ್ನು ಪರಾಂಬರಿಸೋಣದರಿಂದಲೂ, ನ್ಯಾಯವಾಗಿ ವೈದಿಕರುಗಳು ಸರ್ವತ್ರ, ತಮ್ಮ ತಮ್ಮ ಕ್ಷೇಮಾರ್ಥವಾಗಿ ಪೂಜೆಯಂ ಮಾದಿಕೊಳ್ಳಬಹುದೆಂತ ಲಾಗಲೀ, ಅಥವಾ ಯಲ್ಲವರುಗಳೂ ದೇವಾಲಯಗಳಲ್ಲಿ ಸಾಧಾರಣವಾಗಿ ಪ್ರವೇಶಮಾಡೋಣದರಲ್ಲಿ, ಲೌಕಿಕರೀತ್ಯಾ ಸರ್ಕಾರದ ನಿರ್ಬಂಧಗಳನ್ನು ಏರ್ಪಡಿಸಬೇಕಾದ್ದು ಕಾಲಾನುಗುಣವಾಗಿ ನ್ಯಾಯವಾದ್ದೆಂದು ಗವರ್ನ್ಮೆಂಟನವರು ಯೋಚಿಸತಕ್ಕ ಸಂದರ್ಭದಲ್ಲಿ, ಮುಖ್ಯವಾಗಿ ನಮ್ಮಗಳೆಲ್ಲವರ ಕ್ಷೇಮಾರ್ಥವಾಗಿ ದಯಮಾಡಿ, ಸಗುಣೋಪಾಸನೆಯನ್ನು ಅಂಗೀಕರಿಸಿ, ದೇವತಾರಾಧನೆಯನ್ನು ಅಂಗೀಕರಿಸಿ, ದೇವತಾರಾಧನೆಯನ್ನುಮ ಒರುವ ನಮ್ಮ ಮಠಾಚಾರ್ಯರು, ಯಲ್ಲಾ ಸರ್ಕಾರೀ ದೇವಸ್ಥಾನಗಳಲ್ಲಿಯೂ, ಅವರು ದಯ ಕ್ಕೆ ಕಾಲಗಳಲ್ಲಿ ಪೂಜಾದಿಗಳನ್ನು ಮಾಡತಕ್ಕಬಗ್ಗೆ, ಯಾವವಿಧವಾದ ತೊಂದ್ರೆಗಳಿಗೂ, ಆಸ್ಪ ತಿ ತೀರ್ಮಾನಮಾಡಿಸಿಕೊಟ್ಟು, ಮತ ವಿಷಯಕವಾದ ಕಲಹಗಳಿಗೆ ಆಸ್ಪದವಿಲ್ಲದಂತೇಮಾಡಿ, ಸರ್ವಪ್ರಜೆಗಳನ್ನು ರಕ್ಷಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುತ್ತೇವೆ.

ಗಣೇಶ ಶಾರದಾಗುರುಭ್ಯೋನಮಃ

ಅಥ ಧರ್ಮಶಾಸ್ತ್ರವಚನಾನಿ

ಸೂತಸಂಹಿತಾಯಾಂ ॥ ವೈದಿಕೀತಾಂತ್ರಿಕೀಚೇತಿ ದ್ವಿಜೇಂದ್ರಾಸ್ತಾಂತ್ರಿಕೀತುಯಾ । ತಾಂತ್ರಿಕಸ್ಯೈವನಾನ್ಯಸ್ಯ ವೈದಿಕೀವೈದಿಕಸ್ಯಹಿ ॥ ಇತ್ಥಂಸಮಸ್ತದೇವಾನಾಂ ಪೂಜಾವಿಪ್ರಾವ್ಯವಸ್ಥಿತಾ । ವೈದಿಕಾಗಮ ವಿಹಿತ ಶಿವ ವಿಷ್ಣು ಪ್ರತಿಷ್ಠಾಪೂಜಾದ್ಯಧಿಕಾರಿಣಃ ವೈದಿಕಾಏವ, ತದುಕ್ತಂ, ಸೂತಸಂಹಿತಾಯಾಂ ॥ ಹರಿಹರವಿಧಿಪೂಜಾ ಕೀರ್ತಿತಾಸರ್ವತಂತ್ರೈಃ ಶ್ರುತಿಪಥನಿರತಾನಾಂ ಯದ್ಯದುಕ್ತಾತು ಪೂಜಾ। ಶ್ರುತಿಪಥಗಳಿತಾನಾಮೇವತಂತ್ರೋಕ್ತಪೂಜಾ ಶ್ರುತಿಪಥ ನಿರತಾನಾಂ ಸರ್ವ ವೇದೋದಿತೈವ ॥ ಶಿವರಹಸ್ಯೇ ॥ ವೇದೋಕ್ತಲಿಂಗಪೂಜೈವ ಕರ್ತವ್ಯಾನಿಯತಂಬುಧೈಃ । ವೇದಮಾರ್ಗರತೈಶ್ಶೈವೈ ರ್ಮೋಕ್ಷರೂಪಫಲೇಪ್ಸುಭಿಃ ॥ ಶಂಕರಸಂಹಿತಾಯಾಂ ॥ ವೇದಾಗಮೋಕ್ತವಿಧಿನಾ ಸಾರ್ವಕಾಲಮತಂದ್ರಿತಾಃ। ಪೂಜಾಂಕುರ್ವಂತಿ ಯೇನಿತ್ಯಂ ಮುಕ್ತಿಭಾಜೋಭವಂತಿತೇ । ಲಿಂಗಮೂರ್ತಿ ಮಧಿಷ್ಠಾಯ ಪೂಜ್ಯೋವೇದೋಕ್ತವರ್ತ್ಮನೇತಿ ॥ ವೈದ್ಯನಾಥದೀಕ್ಷಿತೀಯೇ ॥ ಸ್ಮೃತ್ಯಂತರವಚನಂ ॥ ಸರ್ವೇಚಾಗಮಮಾರ್ಗೇಣ ವೇದಮಾರ್ಗಾನುಸಾರಿಣಾ । ಗುರೂಕ್ತೇನ ಪ್ರಕಾರೇಣ ವೇದಬಾಹ್ಯೇನನಾರ್ಚಯೇದಿತಿ ॥ ಸರ್ವೇಪಿವೈದಿಕಪೂಜಾಧಿಕಾರಿಣಇತ್ಯರ್ಥಃ ॥ ವೈದಿಕಪೂಜಾತ್ಯಾಗೇನತಂತ್ರೋಕ್ತಪೂಜಾಮನುತಿಷ್ಠತಃ । ಪಾಷಂಡತಾ ಸೂತಸಂಹಿತಾಯಾಮುಕ್ತಾ ॥ ಲಿಂಗೇದಿನೇದಿನೇದೇವಂ ಶಿವರುದ್ರಾದಿಸಂಜ್ಞಿಕಂ । ನಾರ್ಚಯಿಷ್ಯಂತಿವೇದೇನ ಪಾಷಂಡೋಪಹತಾಜನಾಃ ॥ ಕೃತ್ರಿಮಲಿಂಗಮಪಿ ವೈದಿಕತಾಂತ್ರಿಕೋಭಯಪ್ರತಿಷ್ಠಿತಂವೈದಿಕೈಃಪೂಜ್ಯಂ ॥ ತಥಾಚಲೌಗಾಕ್ಷಿಃ ॥ ಆಗಮೋಕ್ತಪ್ರಕಾರೇಣ ದೇವತಾಯಾಪ್ರತಿಷ್ಠಿತಾ । ಸಾಪಿವಂದ್ಯಾಚ ಸೇವ್ಯಾಚ ವೈದಿಕೈರ್ಧರ್ಮತತ್ಪರೈಃ ॥ ಅತ್ರಸೇವಾಶಬ್ದಃಪೂಜಾರ್ಥಃ ॥ ಸೂತಸಂಹಿತಾಯಾಂ ॥ ತಂತ್ರೋಕ್ತೇನಪ್ರಕಾರೇಣ ದೇವತಾಯಾಪ್ರತಿಷ್ಠಿತಾ । ಸಾಪಿವಂದ್ಯಾಚ ಪೂಜ್ಯಾಚ ವೈದಿಕೈ ರ್ವೇದವರ್ತ್ಮನಾ ॥ ತಂತ್ರಾಣಾಂಶಾಪಗ್ರಸ್ತಾಧಿಕಾರಿಕತ್ವಂ ॥ ಕೂರ್ಮಪುರಾಣೇಉಕ್ತಂ ॥ ಸತೇಷಾಂಮಾಯಯಾಜಾತಂಗೋವಧಂಗೌತಮೋಮುನಿಃ । ಕೇನಾಪಿ ಹೇತುನಾಜ್ಞಾತ್ವಾ ಶಶಾಪಾತೀವಕೋಪನಃ ॥ ಭವಿಷ್ಯಥತ್ರಯೀಬಾಹ್ಯಾ ಮಹಾಪಾತಕಿಭಿಸ್ಸಮಾಃ । ಇತಿಪ್ರಸ್ತುತ್ಯಸರ್ವೇ ಸಂಪ್ರಾಪ್ಯದೇವೇಶಂ ॥ ಶಂಕರಂ ವಿಷ್ಣುಮವ್ಯಯಂ ॥ ಅಸ್ತುವಸ್ಲೌಕಿಕೈರ್ವಾಕ್ಯೈ ರ್ಲಿಕೃಷ್ಟಾಇವಸೇವಕಾಃ ॥ ಇತ್ಯಾದಿನಾತೇಷಾಂಗತಿಪ್ರಾರ್ಥನಾಂಪ್ರದರ್ಶ್ಯ । ತಸ್ಮಾದ್ವೈವೇದಬಾಹ್ಯಾನಾಂ ರಕ್ಷಣಾರ್ಥಾಯ ಪಾಪಿನಾಂ । ವಿಮೋಹನಾನಿ ಶಾಸ್ತ್ರಾಣಿ ಕರಿಷ್ಯಾವೋವೃಷಧ್ವಜ ॥ ಏವಂಸಂಚೋದಿತೋರುದ್ರೋಮಾಧವೇನ ಮುರಾರಿಣಾ। ಚಕಾರಮೋಹಶಾಸ್ತ್ರಾಣಿ ಕೇಶವೋಪಿಶಿವೇರಿತಃ ॥ ಕಾಪಾಲಂ ಗಾರುಡಂ ಶಾಕ್ತಂ ಭೈರವಂಪೂರ್ವಪಶ್ಚಿಮಂ । ಪಾಂಚರಾತ್ರಂಪಾಶುಪತಂ ತಥಾನ್ಯಾನಿಸಹಸ್ರಶಃ ॥ ಸೃಷ್ಟ್ವಾತಾನಾಹತುರ್ದೇವೌ ಕುರ್ವಾಣೌಶಾಸ್ತ್ರಬೋಧನಂ । ಇತಿ ॥ ಸ್ಪಷ್ಟಾಚೇಯಂ ಶಾಪಪ್ರಕಾರಾದ್ಯುಕ್ತಿಃ ॥ ಸೂತಸಂಹಿತಾಪಾರಾಹ ವಾಮನಾದಿಪುರಾಣೇಷು ॥ ವಾಮನಪುರಾಣೇ ॥ ಸ್ವತಂತ್ರಾಆಗಮಾಸ್ಸರ್ವೇ ನಿರ್ಮೂಲಾಃಪರಿಕೀರ್ತಿತಾಃ ॥ ಅಧಿಕಾರಿವಿಭೇದೇನ ಪ್ರವೃತ್ತಾನಹಿಸಂಶಯಃ ॥ ಮನುಃ ॥ ವೇದಶ್ಚ ವೇದಮೂಲಾನಿ ಸ್ಮೃತ್ಯಾದೀನ್ಯಖಿಲಾನ್ಯಪಿ ॥ ಸ್ವತಃ ಪ್ರಾಪ್ತನಿಮಿತ್ತಾನಾಂ ಭ್ರಮಾದನ್ಯಾನಿಸರ್ವತಃ । ಮಾರ್ಗೋವೇದವಿರುದ್ಧೋಯಃ ಸತುಸತ್ಯಂತಶೋಧನಾತ್॥ ವೇದಪ್ರಸ್ಖಲಿತಸ್ಯೈವ ನಪ್ರೋಕ್ತೋವೈದಿಕಸ್ಯತು ॥ ಚಂದ್ರಿಕಾಯಾಂ। ವೈದಿಕಂಬ್ರಾಹ್ಮಣಾನಾಂಸ್ಯಾತ್ ರಾಜ್ಞಾಂವೈದಿಕತಾಂತ್ರಿಕಂ । ತಾಂತ್ರಿಕಂವೈಶ್ಯಶೂದ್ರಾಣಾಂ ಸ್ತ್ರೀಣಾಮಪಿಚತಾಂತ್ರಿಕಂ ॥ ಇತಿ ॥ ಸೂತಸಂಹಿತಾಯಾಂ ॥ ಸ್ಮೃತಯಶ್ಚಪುರಾಣಾನಿ ಭಾರತಾದೀನಿಸುಂದರಿ। ವೇದಮೂಲಾನ್ಯತಸ್ತೇನ ವಿರೋಧೇಮೂಲಿನಾಮಪಿ ॥ ನಸಿಧ್ಯತ್ಯೇವಸುಶ್ರೋಣಿ ಪ್ರಾಮಾಣ್ಯಂಸೂಕ್ಷ್ಮದರ್ಶನೇ । ಪಾಂಚರಾತ್ರಾದಿಮಾರ್ಗಾಣಾಂ ವೇದಮೂಲತ್ವಮಾಸ್ತಿಕೇ ॥ ನಹಿಸ್ವತಂತ್ರಾಸ್ತೇತೇನ ಭ್ರಾಂತಿಮೂಲಾನಿರೂಪಣೇ । ತಥಾಪಿ ಯೋಂಶೋಮಾರ್ಗಾಣಾಂ ವೇದೇನನವಿರುಧ್ಯತೇ ॥ ಸೋಂಶಃಪ್ರಮಾಣಮಿತ್ಯುಕ್ತಃ ಕೇಷಾಂಚಿದಧಿಕಾರಿಣಾಂ । ಅತ್ಯಂತ ಮಲಿನಾನಾಂತು ಭ್ರಷ್ಟಾನಾಂ ವೇದಮಾರ್ಗತಃ ॥ ಪಾಂಚರಾತ್ರಾದಯೋಮಾರ್ಗಾಃ ಕಾಲೇನೈವೋಪಕಾರಕಾಃ ॥ ಇತಿ ॥ ಪರಾಶರಪುರಾಣೇ ॥ ಯಥಾಮಾತಾಸ್ವಪುತ್ರಾಣಾಂ ಕೇವಲಂಕೃಪಯೈವತು । ರಕ್ಷಿಕಾತದ್ವದೇವೇಯಂ ಶ್ರುತಿಸ್ಸರ್ವಜನಸ್ಯಹಿ ॥ ಯಥಾಶತ್ರುಜನಸ್ಸ್ಪಷ್ಟಾ ದ್ಬಾಧಕಸ್ಸರ್ವದೇಹಿನಾಂ । ತಥಾವೇದೇತರೋಮಾರ್ಗೋ ವೈದಿಕಸ್ಯತುಬಾಧಕಃ॥ ಇತಿ ॥ ಸೂತಸಂಹಿತಾಯಾಂ ॥ ವಿದ್ಯಾವೇದಾನುಸಾರೇಣ ಪ್ರವೃತ್ತಾಸ್ಸರ್ವಶೋಭನಾಃ । ತಥಾಪಿತಾಸು

ಧರ್ಮಶಾಸ್ತ್ರವಚನಾನಿ.

ಸರ್ವಾಸು ಶಕ್ತಿದಂಶಃ ಕ್ವಚಿತ್ಕ್ವಚಿತ್ । ಶೈವಾಗಮಾನುಸಾರೇಣ ತತ್ಪ್ರಭೇದಾನುಸಾರತಃ ॥ ವಿಷ್ಣ್ವಾಗಮಾನು ಸಾರೇಣ ತತ್ಪ್ರಭೇದಾನುಸಾರತಃ । ಬ್ರಹ್ಮಾಗಮಾನುಸಾರೇಣ ತತ್ಪ್ರಭೇದಾನು ಸಾರತಃ ॥ ಅಧಿಕಾರಿವಿಶೇಷೇಣ ಕ್ರಮೇಣೈವ ವಿಮುಕ್ತಯೆ । ಪ್ರವರ್ತತೇ ಮುನಿಶ್ರೇಷ್ಠಾ ಸ್ಸತ್ಯಮೇವ ಮಯೋದಿತಂ ॥ ಯಸ್ಮಿನ್ನಂಶೇತ್ರಯೋ ಮರ್ತ್ಯೋ ದೀಕ್ಷಿತೋ ಮುನಿಸತ್ತಮಾಃ । ಸೋಂಶಸ್ತೇನೈವ ಸಂಗ್ರಾಹ್ಯಃ ಸರ್ವಥಾನತು ವೈದಿಕೈಃ ॥ ವಿದ್ಯಾಃ ಪುರಾಣಾನೀತ್ಯರ್ಥಃ ॥ ಪರಾಶರಪುರಾಣೇ ॥ ಕ್ವಚಿತ್ತಂತ್ರಾನುಸಾರೇಣ ಧರ್ಮಾನ್ಪೌರಾಣಿಕಾ ಅಪಿ । ವದಂತಿ ತಾವೃಶೋಂಶಸ್ತು ಗ್ರಾಹ್ಯಸ್ತಂತ್ರಾವಲಂಬಿಭಿಃ ॥ ತಂತ್ರಾಣಿ ತಂತ್ರಸಿಷ್ಟಾನಾಂ ರಕ್ಷಕಾಣ್ಯಪಿ ಚಕ್ರಮಾತ್ । ಬಾಧಕಾನಿ ವಿಶೇಷೇಣ ವೇದಮಾರ್ಗೈಕವರ್ತಿನಾಂ ॥ ಇತಿ ॥ ಕೂರ್ಮೇ ಕಲಿಯುಗಧರ್ಮಪ್ರಸ್ತಾವೇ ॥ ಯೇಚಾನ್ಯೇ ಶಾಪನಿರ್ದಗ್ಧಾಃ ಗೌತಮಸ್ಯ ಮಹಾತ್ಮನಃ । ದಧೀಚಿಶಾಪ ನಿರ್ದಗ್ಧಾಃ ಪುರಾದಕ್ಷಾಧ್ವರೇ ದ್ವಿಜಾಃ ॥ ಕುರ್ವಂತಿ ತೇಽವತಾರಾಣಿ ಬ್ರಾಹ್ಮಣಾನಾಂ ಕುಲೇಷು ವೈ ॥ ವಾಮಾಃ ಪಾಶುಪತಾಚಾರಾಃ ತಥಾನ್ಯೇ ಪಾಂಚರಾತ್ರಕಾಃ । ಭವಿಷ್ಯಂತಿ ಕಲೌ ತಸ್ಮಿನ್ ಬ್ರಾಹ್ಮಣಾನಾಂ ಕುಲೇಷುವೈ ॥ ಇತಿ ॥ ಸ್ಮೃತಿಮುಕ್ತಾಫಲೇ ಶಾತಾತಪಃ ॥ ದೇವಾರ್ಚನಪರೋ ಯಸ್ತು । ವಿತ್ತಾರ್ಥೀ ವತ್ಸರತ್ರಯಂ ॥ ಸವೈ ದೇವಲಕೋ ನಾಮ । ಹವ್ಯಕವ್ಯೇಷು ಗರ್ಹಿತಃ ॥ ಇತಿ ॥ ಸ್ಮೃತಿಸಂಗ್ರಹೇಚ ॥ ದೇವಾರ್ಚನಪರೋ ಯಸ್ತು ಪರಾರ್ಥಂ ವಿತ್ತಕಾಂಕ್ಷಯಾ ॥ ಚತುರ್ವೇದಧರೋ ವಿಪ್ರಃ । ಸಚಂಡಾಲ ಸಮೋಭವೇತ್ ॥

No 178

ಶ್ರೀಮದಖಿಲ ಕರ್ಣಾಟಕ ಮಂಡಲಾಧೀಶ್ವರರಾದ ಮೈಸೂರು ಸಂಸ್ಥಾನದ ಮಹಾರಾಣೀ ರೀಜಂಟ್ ಇವರ ಹುಜೂರು ಮಹಾ ಸನ್ನಿಧಾನಂಗಳಿಗೆ.

ನಗರ ಡಿವಿಜನ್ ಶಿವಮೊಗ್ಗ ಡಿಸ್ಟ್ರಿಕ್ಟ ಸೊರಬ ತಾಲ್ಲೂಕು [illegible] ನಿವಾಸಿಗಳಾದ ಅದ್ವೈತ ಮಹಾ ಜನಗಳು ವಿನಯ ಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವದೇನಂದರೆ,— [illegible] ——

ನಮ್ಮ ಅದ್ವೈತ ಮತಾಚಾರ್ಯರಾದ ಶ್ರೀ ಶ್ರೀ ಶೃಂಗೇರಿ ಜಗದ್ಗುರು ಮಹಾ ಸ್ವಾಮಿಗಳವರ ಸವಾರಿಯು, ಕಳದ ಜೂನ್ ತಿಂಗಳಲ್ಲಿ ಮೈಸೂರು ರಾಜಧಾನಿಗೆ ದಯಮಾಡಿಸಿದ ಸಮಯದಲ್ಲಿ, ಮಧ್ಯ ಮಾರ್ಗದಲ್ಲಿದ್ದ ಶ್ರೀರಂಗಪಟ್ಟಣದ ರಂಗನಾಥ ಸ್ವಾಮಿಯವರ ದರ್ಶನಾರ್ಥ ದಯಮಾಡಿಸಿ, ಶ್ರೀ ಸ್ವಾಮಿ ದರ್ಶನ ಪೂಜಾದಿಗಳಿಂದ ಶಿಷ್ಯರಾದ ನಮಗಳಿಗೆ ಶ್ರೇಯೋಭಿವೃದ್ಧಿಯಾಗುವಂತೆ ಅನುಗ್ರಹವಾಗಬೇಕಾಗಿ ಶಿಷ್ಯಮಂಡಲೀಯವರು ಮಾಡಿಕೊಂಡ ವಿಶೇಷವಾದ ಪ್ರಾರ್ಥನೆಯನ್ನು ಅಂಗೀಕರಿಸಿ, ಅದರಂತೆ ಅನುಗ್ರಹವಾದ ಅಂಶದಲ್ಲಿ, ಆ ಈಚೆಗೆ ಕೆಲವು ದಿನಗಳ ತರುವಾಯ ವಿಶಿಷ್ಟಾದ್ವೈತಿಗಳಾದ ಶ್ರೀವೈಷ್ಣವರುಗಳು ತಮ್ಮಗಳಿಂದ ಆದರಿಸಲ್ಪಡುತ್ತಲಿರುವ ಪಾಂಚರಾತ್ರಾಗಮ ಸಿದ್ಧಾಂತ ವಿರುದ್ಧವಾಯಿತೆಂತಲೂ, ಈ ಗೋಸ್ಕರ ಮೇಲಿನ ಆಗಮರೀತ್ಯಾ ದೇವಸ್ಥಾನದಲ್ಲಿ ಉಂಟಾದ ಅಶುಚಿಯನ್ನು ಹೋಗಲಾಡಿಸಿಕೊಳ್ಳುವದಕ್ಕಾಗಿ, ಸಂಪ್ರೋಕ್ಷಣೆಯನ್ನು ಮಾಡುವದಕ್ಕೆ ಅಪ್ಪಣೆ ಕೊಡಿಸಬೇಕಾಗಿ ವಗೈರೆ, ಗೌರ್ಮೆಂಟಿನಲ್ಲಿ ಫಿರ್ಯಾದು ಪಟ್ಟದ್ದರಮೇಲೆ, ತಮ್ಮ ದೇಶದ ಪ್ರಜೆಗಳಲ್ಲಿ ಪರಸ್ಪರ ವೈಷಮ್ಯಗಳಿಗೆ ಅವಕಾಶವುಂಟಾಗಿ ತನ್ಮೂಲಕ ಪ್ರಜೆಗಳು ತೊಂದರೆಯನ್ನು ಪಡಿಯಬಾರದೆಂಬ ಕರುಣೆಯನ್ನು ತೆಗದುಕೊಂಡು, ಸರ್ವಮತ ಸಮ್ಮತವಾದ ಮತ್ತು ಸಮಾನಬಾಧ್ಯತೆಯುಳ್ಳ ಸರ್ಕಾರೀ ದೇವಸ್ಥಾನದ ವಿಷಯದಲ್ಲಿ, ಒಂದು ಮತದವರ ರೀತ್ಯಾ ವಿರುದ್ಧವಾಯಿತೆಂತಲೂ, ಅಂಥಾ ಮತಾನುಗುಣ್ಯವಾಗಿ ದೇವಸ್ಥಾನದ ವಿಷಯದಲ್ಲಿ ನಡಸಿಕೊಡಬೇಕಾಗಿ ತಂದ ಫಿರ್ಯಾದು ವಿಚಾರಕ್ಕೆ ಅರ್ಹವಾದ್ದಲ್ಲವೆಂಬ ಖಂಡಿತವಾದ ಅಪ್ಪಣೆಯನ್ನು ದಯಪಾಲಿಸದೆ: ವಿಚಾರಮಾಡಿ, ಆಗಿನ ಸಂದರ್ಭದಲ್ಲಿ ಫಿರ್ಯಾದಿಗಳ ಫಿರ್ಯಾದಿನಲ್ಲಿ ವಿವರಿಸಲ್ಪಟ್ಟಂತೆ ನಡವಳಿಕೆಗಳು ನಡದು ಇರಲಿಲ್ಲವೆಂಬದರಮೇಲೆ, ಅವರ ಕೋರಿಕೆಯಂತೆ ಸಂಪ್ರೋಕ್ಷಣಾದಿಗಳು ನಡಿಸಬೇಕಾದ್ದು ಪ್ರಕೃತವಿಲ್ಲವಾಗಿ ಅಪ್ಪಣೇ ಕೊಡಿಸೋಣವಾಯಿತು ; ಇಂಥಾ ಅಪ್ಪಣೆಯನ್ನು ಅದ್ವೈತ ಮತದವರುಗಳು ನೋಡಿ, ಬಹಳ ವಿಷಾದವನ್ನು ಹೊಂದುತ್ತಾ ಸಕಲ ಪ್ರಜಾ ಪರಿಪಾಲಕರಾದ ಗೌರ್ಮೆಂಟಿನವರು ಯಾವ ಉದ್ದೇಶ್ಯದಿಂದ ಇಂಥಾ ಅಪ್ಪಣೆಯಂ ಮಾಡಿರುವರೋ ಅದನ್ನು ಕುರಿತು ನಾವುಗಳು ಹ್ಯಾಗೆ ಚರ್ಚಿಸಬಹುದೆಂದು ಭೀತರಾಗಿ, ತಮ್ಮೊಳಗೆ ತಾವೇ ವಿಷಾದಪಡುತ್ತಿರುವಲ್ಲಿ, ಫಿರ್ಯಾದು ಪಟ್ಟವರುಗಳು ಒಂದು ವಿಧವಾಗಿ ತಮ್ಮಿಂದ ಆರಂಭಿಸಲ್ಪಟ್ಟ ಕಾರ್ಯವು ನೆರವೇರಿದಹಾಗೆ ಆಗಿದ್ದಾಗ್ಯೂ, ಸಕಲ ಮತದವರಿಗೂ ಸಮಾನ ಬಾಧ್ಯತೆಯುಳ್ಳ ದೇವಸ್ಥಾನದ ವಿಷಯದಲ್ಲಿ ನೂತನವಾದ ಒಂದು ವ್ಯವಹಾರವಂಮಾಡಿ, ತನ್ಮೂಲಕ ತಾವುಗಳು ಸರ್ಕಾರದಿಂದ ಸ್ವಲ್ಪಮಟ್ಟಿಗೆ ಅವಕಾಶವನ್ನುಂಟುಮಾಡಿಕೊಳ್ಳಬೇಕೆಂಬ ಉದ್ದೇಶ್ಯದಿಂದ ಮಾಡಿದ ಆರಂಭದಲ್ಲಿ, ಅವರುಗಳ ಉದ್ದೇಶ್ಯಕ್ಕನುಗುಣವಾಗಿ ಇಷ್ಟರಮಟ್ಟಿಗೆ ಅವಕಾಶ ದೊರಕಿದ್ದನ್ನೇ ಪ್ರಬಲವಾಗಿಟ್ಟುಕೊಂಡು, ಈಗಲೇ ತಮ್ಮ ಮತದವರಿಗೆ ಒಂದು ಹಕ್ಕುದಾರಿಯನ್ನು ಸ್ಥಿರಪಡಿಸಿಕೊಳ್ಳತಕ್ಕ ಬಗ್ಗ್ಯಾಗಿ ಗೌರ್ಮೆಂಟಿನವರ ತೀರ್ಮಾನದಮೇಲೂ ಚರ್ಚೆಗಳನ್ನು ಮಾಡುತ್ತಾ ಬರುತ್ತಲಿರುವದು ವರ್ತಮಾನ ಪತ್ರಿಕೆಗಳ ಮೂಲಕವಾಗಿ ನಾವುಗಳು ತಿಳಿದು, ವರ್ಷವನ್ನೆದುರುನೋಡುತ್ತಲಿರುವ ಚಾತಕಪಕ್ಷಿಗಳೋಪಾದಿಯಲ್ಲಿ, ಗೌರ್ಮೆಂಟಿನವರಿಂದ ಮಾಡಲ್ಪಟ್ಟ ತೀರ್ಮಾನದ ವಿಷಯವಾಗಿ ನಾವುಗಳು ಗೌರ್ಮೆಂಟಿನವರಲ್ಲಿ ನಮಗಳ ವಿಷಯವನ್ನು ಕುರಿತು ಅರಿಕೆಮಾಡಿಕೊಳ್ಳುವದಕ್ಕೆ ಅತ್ಯಂತ ಭಯಸ್ಥರಾಗಿ ನಿರೀಕ್ಷಿಸುತ್ತಲಿದ್ದವರಿಗೆ ಈ ಭಾಗದಲ್ಲಿ ಬಹಳಮಟ್ಟಿಗೆ ಧೈರ್ಯವನ್ನೂ, ಸಹಾಯವನ್ನು ಪರಪಕ್ಷೀಯರೇ ಉಂಟುಮಾಡಿಕೊಟ್ಟದ್ದರಿಂದ, ನಾವುಗಳು ಸನ್ನಿಧಿಯಲ್ಲಿ ಅರಿಕೆಮಾಡಿಕೊಳ್ಳುವ ವಿಷಯಗಳನ್ನು ಸರ್ವಮತ ಪರಿಪಾಲಕರಾದ ಸರ್ಕಾರದವರು ಘನವಾದ ಚಿತ್ತದಲ್ಲಿ ಲಾಲಿಸೋಣವಾಗಬೇಕು.

೧. ಸಂಸ್ಥಾನದಲ್ಲಿರತಕ್ಕ ಶಿವ ವಿಷ್ಣ್ವಾದಿ ದೇವಾಲಯಗಳು, ಈ ದೇವರುಗಳಲ್ಲಿ ನಂಬಿಕೆಯಿಂದ ಆರಾಧಿಸುತ್ತಲಿರುವ ಯಲ್ಲಾ ಮತದವರಿಗೂ ಸಮಾನ ಬಾಧ್ಯತೆಯುಳ್ಳದ್ದೇ ಶಿವಾಯಿ, ವೈಷ್ಣವರೆಂದು ಪ್ರಸಿದ್ಧವಾಗಿ ಲೋಕದಲ್ಲಿ ಹೇಳಲ್ಪಡತಕ್ಕ ಒಂದು ಮತದವರಿಗೆ ಮಾತ್ರವೇ ವಿಷ್ಣು ದೇವಾಲಯದಲ್ಲಿ ಹೆಚ್ಚಾದ ಸಂಬಂಧವಿದೆ ಎಂಬದನ್ನು ಹ್ಯಾಗೆ ಹೇಳಬಹುದು ? ಈಗ ಬ್ರಾಹ್ಮಣ ಮತದಲ್ಲುಂಟಾಗಿರತಕ್ಕ ಮೂರು ಪ್ರಭೇದದವರುಗಳಲ್ಲಿ, ದ್ವೈತಿಗಳು, ವಿಶಿಷ್ಟಾದ್ವೈತಿಗಳು ಈ ಯರಡು ಮತದವರೂ ವಿಷ್ಣುವನ್ನು ಮಾತ್ರವೇ ವಿಶೇಷವಾಗಿ ಆರಾಧಿಸುತ್ತಾ ಬರುತ್ತಾರೆ; ಹಾಗೆ ಆರಾಧಿಸೋಣವು ಅವರ ಮತರೀತ್ಯಾ ಸರಿಯಾದ್ದಾಗಿರುತ್ತೆ (~~ಅದ್ವೈತಿಗಳು ತಮ್ಮ ಮತರೀತ್ಯಾ ಯಲ್ಲಾ ದೇವರುಗಳನ್ನೂ ಭೇದವಿಲ್ಲದೇ ಸಮಾನ ಬುದ್ಧಿಯಿಂದ ಆರಾಧಿಸುತ್ತಾ ಬರುತ್ತಾರೆ~~ ;) ಅದ್ವೈತಿಗಳು ತಮ್ಮ ಮತರೀತ್ಯಾ ಎಲ್ಲಾ ದೇವರುಗಳನ್ನು ಭೇದವಿಲ್ಲದೇ ಸಮಾನಬುದ್ಧಿಯಿಂದ ಆರಾಧಿಸುತ್ತಾ ಬರುತ್ತಾರೆ ; ಹೀಗಿರುವದರಿಂದ ವಿಷ್ಣುವನ್ನು ಮಾತ್ರವೇ ವೈಷ್ಣವರು ಆರಾಧಿಸುವದ್ದರಿಂದ, ವಿಷ್ಣು ದೇವಾಲಯಗಳಲ್ಲಿ ವೈಷ್ಣವರುಗಳಿಗೆ ಹೆಚ್ಚಾದ ಹಕ್ಕುದಾರಿ ಇರುತ್ತೆಂತಲೂ, ಶಿವ ವಿಷ್ಣು ಇವರುಗಳಲ್ಲಿ ಭೇದವಿಲ್ಲದೇ ಸಮಾನ ಬುದ್ಧಿಯಿಂದ ಆರಾಧಿಸತಕ್ಕವರಾದ್ದರಿಂದ, ಅದ್ವೈತಿಗಳಿಗೆ ವಿಷ್ಣುದೇವಾಲಯಗಳಲ್ಲಿ ವೈಷ್ಣವರುಗಳಿಗೆ ಇರತಕ್ಕ ಬಾಧ್ಯತೆಯೂ ಇಲ್ಲವೆಂದು ಹೇಳಬಹುದೆ ? ಅಥವಾ ಒಂದುವೇಳೆ ಬ್ರಾಹ್ಮಣ ಮತದವರಲ್ಲಿ ಏರ್ಪಟ್ಟಿರುವ ಮೂರು ಮತದವರಿಗೂ, ಇತರ ಮತದವರುಗಳಲ್ಲಿ ಏರ್ಪಟ್ಟಿರುವಂತೆ ಪ್ರತ್ಯೇಕ ಪ್ರತ್ಯೇಕವಾಗಿ ಈ ಈ ಮತದವರಿಗೆ ಇಂತಿಂಥಾ ದೇವಸ್ಥಾನಗಳೆಂದು ಏನಾದರೂ ಏರ್ಪಟ್ಟಿರುತ್ತೆಧೆಯೇ ? ಹಾಗೆ ಏರ್ಪಟ್ಟಿರುವಲ್ಲಿ ವಿಷ್ಣುದೇವಾಲಯಗಳು ವೈಷ್ಣವರುಗಳದೆಂತಲೇ ಏರ್ಪಟ್ಟಿಧೆಯೇ ? ಅಥವಾ ಇತರ ಮತದವರುಗಳು ತಮ್ಮ ತಮ್ಮ ಮತದಲ್ಲಿ ತಮ್ಮ ಪ್ರಭೇದದವರುಗಳಿಗಾಗಿಯೇ ಸ್ವಂತವಾಗಿ ದ್ರವ್ಯ ವ್ರಯವನ್ನುಮಾಡಿ ಏರ್ಪಡಿಸಿಕೊಂಡಿರುವ ಮೇರೆ, ಏನಾದರೂ ವೈಷ್ಣವರುಗಳು ವಿಷ್ಣು ದೇವಾಲಯಗಳನ್ನು ತಮ್ಮ ಮತದವರಿಗಾಗಿಯೇ ಸ್ವಂತವಾಗಿ ಏರ್ಪಡಿಸಿಕೊಂಡಿರುವರೇ ? ಇಂಥಾದ್ದರಲ್ಲಿ ಯಾವದರಲ್ಲಿಯೂ ಶೇರದೆ ದೇವಸ್ಥಾನದ ವಿಷಯದಲ್ಲಿ ವೈಷ್ಣವರುಗಳು (ಅದ್ವೈತ ಮತಾಚಾರ್ಯರವರು ವಿಷ್ಣುದೇವಾಲಯಕ್ಕೆ ದಯಮಾಡಿಶಿದ್ದು ತಮ್ಮ ಮತರೀತ್ಯಾ ವಿರುದ್ಧವಾಯಿತೆಂತ) ಹೇಳತಕ್ಕದ್ದು ನ್ಯಾಯವೇ? ಎಂಬದನ್ನು ಗೌರ್ಮೆಂಟಿನಲ್ಲಿಯೇ ಪರ್ಯಾಲೋಚನೆಯಲ್ಲಿ ತರೋಣವಾಗಬೇಕು.

೨. ಬ್ರಾಹ್ಮಣ ಮತದವರಲ್ಲಿರತಕ್ಕ ಮೂರುಪ್ರಭೇದದವರೂ ವೇದಕ್ಕೆ ಕಟ್ಟುಬಿದ್ದವರಾಗಿಯೂ, ವೈದಿಕರೆಂದು ಹೇಳಿಸಿಕೊಳ್ಳತಕ್ಕವರಾಗಿಯೂ ಇರುತ್ತಾರೆ. ಆದರೆ, ಇವರೆಲ್ಲರೂ ವೇದವನ್ನು ಹ್ಯಾಗೆ ಸರ್ವಸಮ್ಮತವನ್ನಾಗಿ ಭಾವಿಸುತ್ತಾರೋ? ಹಾಗೆ, ಇತರ ಆಗಮಾದಿಗಳನ್ನು ಸರ್ವಸಮ್ಮತವಾದದ್ದನ್ನಾಗಿ ಭಾವಿಸುವದಿಲ್ಲ; ಯಾಕೆಂದರೆ, ಆಗಮಗಳು ಗೌತಮಶಾಪಗ್ರಸ್ತರಾದ ಕೆಲವು ಬ್ರಾಹ್ಮಣರುಗಳು, ತಮಗೆ ಇದ್ದ ವೇದಾಧಿಕಾರವನ್ನು ಕಳದುಕೊಂಡ ಸಮಯದಲ್ಲಿ ಅಂಥವರುಗಳ ರಕ್ಷಣಾರ್ಥವಾಗಿ, ಈಶ್ವರನಿಂದಲೂ, ಶ್ರೀಮಹಾ ವಿಷ್ಣುವಿನಿಂದಲೂ, ಶೈವ, ವೈಷ್ಣವಾಗಮಗಳು ಹೇಳಲ್ಪಟ್ಟವಗಳಾಗಿ ಆಸ್ತಿಕರಿಂದ ಅಂಗೀಕರಿಸಲ್ಪಡುತ್ತಲಿರುವ ಸೂತಸಂಹಿತೆ, ಕೂರ್ಮಪುರಾಣ, ದೇವೀಭಾಗವತ, ಇತ್ಯಾದಿ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದರಿಂದ, ಯಲ್ಲವರಿಂದಲೂ, ಆಗಮ ಶಾಸ್ತ್ರಗಳು ಆದರಣೀಯವಾದ್ದಲ್ಲವೆಂಬುವದು ಸ್ಪಷ್ಟವಾಗಿಧೆ.

೩. ಆಗಮಿಕರುಗಳು ಹೇಳುವರೀತ್ಯಾ ವೈದಿಕರುಗಳು ಸ್ಥಿರಮೂರ್ತಿಗಳಾದ ಶಿವ ವಿಷ್ಣ್ವಾಲಯಗಳಲ್ಲಿ ಸ್ವಾರ್ಥವಾದ ಪೂಜೆಯನ್ನು ಮಾಡಬಾರದಾಗಿ ವೈದಿಕನಿಗೆ ಶಾಸ್ತ್ರಗಳಲ್ಲಿ ಉಕ್ತವಾಗಿಲ್ಲ ; ಪರಂತು, ವೈದಿಕನು ಚರಸ್ಥಿರ ಯರಡರಲ್ಲಿಯೂ ವೇದೋಕ್ತ ವಿಧಿಯಿಂದ ಪೂಜೆಮಾಡಬೇಕೆಂತಲೇ ಹೇಳಿಧೆ. ಮತ್ತು, ಆಗಮೋಕ್ತವಾಗಿ ಪೂಜಾದಿಗಳು ನಡಿಯುತ್ತಾ ಇದ್ದಾಗ್ಯೂ, ಆಗಮ ವಿಧಾನದಿಂದಲೇ ಪ್ರತಿಷ್ಠೆಮಾಡಲ್ಪಟ್ಟಿದ್ದಾಗ್ಯೂ, ಅಂಥಾ ಮೂರ್ತಿಗಳನ್ನು ವೈದಿ

ಕನು ವೇದೋಕ್ತ ವಿಧಾನದಿಂದ ಪೂಜೆಮಾಡಬೇಕಾಗಿ ಶಾಸ್ತ್ರಗಳಲ್ಲಿ ಹೇಳಿ ಇಧೆ. ಮೇಲಿನ ಅಂಶಗಳಿಗೆ ಆಧಾರವಾದ ಶಾಸ್ತ್ರ ವಚನಗಳನ್ನು ಸನ್ನಿಧಾನದ ಪರಾಂಬರಿಕೆ ಬಗ್ಯೆ ಇದರೊಡನೆ ಹಾಜರ್ಮಾಡಿರುತ್ತೇವೆ.

೪. ಆಗಮಗಳು ಹುಟ್ಟಿದ ರೀತಿಯನ್ನು ಅರಿಕೆಮಾಡಿಕೊಂಡಿರುವದರಿಂದಲೇ, ಆಗಮಶಾಸ್ತ್ರರೀತ್ಯಾ ಅನುಷ್ಠಾನವನ್ನು ಮಾಡತಕ್ಕವನು ಆಗಮಿಕನೇ ಶಿವಾಯಿ ವೈದಿಕನಲ್ಲವೆಂಬದು ಸ್ಪಷ್ಟವಾಗುತ್ತದಾದ್ದರಿಂದ, ಅವರಲ್ಲಿ ಹೇಳಿರತಕ್ಕ ವಿಧಿನಿಷೇಧಗಳಿಗೂ, ಆ ಶಾಸ್ತ್ರವನ್ನು ಅವಲಂಬಿಸಿರತಕ್ಕವನೇ ವಿಷಯನಾಗುತ್ತಾನೆ. ಅದೀಕ್ಷಿತನೆಂತಲೂ, ವಿಷ್ಣುದೀಕ್ಷಾ ಬದ್ಧನಲ್ಲವೆಂತಲೂ, ಶೈವದೀಕ್ಷ ಬದ್ಧನಲ್ಲವೆಂತಲೂ, ಅವನಿಗೆ ಹೇಳಬೇಕೇ ಶಿವಾಯಿ ಅಂಥವುಗಳಿಗೆ ಯಾವಾಗ್ಯೂ ಬದ್ಧನಾಗದ ವೈದಿಕನಿಗೆ ಹೇಳುವದಕ್ಕಾಗುವದಿಲ್ಲ. ಆ ಶಾಸ್ತ್ರರೀತ್ಯಾ ದೀಕ್ಷಾದಿಗಳನ್ನು ಮಾಡಿಕೊಳ್ಳದ ತಾಂತ್ರಿಕನು, ದೀಕ್ಷಾದಿಕ್ರಮಗಳನ್ನು ಅನುಸರಿಸುವದಕ್ಕೆ ಪೂರ್ವವೇ ದೇವತಾಸ್ಪರ್ಶನ, ದೇವತಾರಾಧನೆಗಳನ್ನು ಮಾಡಿದರೆ, ತದ್ರೀತ್ಯಾ ಸಂಪ್ರೋಕ್ಷಣಾದಿಗಳು ಆಗಬೇಕೆಂಬದು ಸಹಜವಾಗಿರುತ್ತೆ.

೫. ಆಗಮ ಶಾಸ್ತ್ರವು ತಾಂತ್ರಿಕನಿಗೆ ಸಂಬಂಧ ಪಟ್ಟದ್ದೆಂತಲೂ, ವೈದಿಕನಿಗೆ ಸಂಬಂಧವಿಲ್ಲವಾಗಿ ಹೇಳದೇ ಇದ್ದರೆ, ವೇದಕ್ಕಿಂತಲೂ ಆಗಮವೇ ಪ್ರಬಲವಾದದ್ದೆಂತಲೂ, ವೈದಿಕನಿಗಿಂತಲೂ, ಆಗಮಶಾಸ್ತ್ರಾವಲಂಬಿಯೇ ಉತ್ತಮನೆಂತಲೂ, ಹೇಳಬೇಕಾಗುತ್ತೆ. ಹಾಗೆ ಹೇಳೋಣವು ಲೋಕಸಮ್ಮತವಾದೀತೆ ? ಹಾಗಿದ್ದರೆ, ಸರ್ವೋತ್ತಮವಾದಆಗಮಶಾಸ್ತ್ರವನ್ನೇ ಯಲ್ಲವರೂ ಅಂಗೀಕರಿಶಿ, ಅದರಂತೆನೇ ಅನುಷ್ಠಾನವನ್ನೂ ಮಾಡುತ್ತಾ ಬರುತ್ತಲಿದ್ದರು. ಈಗ ಲೋಕದಲ್ಲಿ, ತಾಂತ್ರಿಕರುಗಳು ವೈದಿಕರುಗಳಿಗಿಂತಲೂ ಬಹಳ ಸ್ವಲ್ಪ ಸಂಘದವರೆಂಬದನ್ನು ಸಹಜವಾಗಿ ತಿಳಿಯಬಹುದಾಗಿಧೆ; ಹೀಗಿರುವದಕ್ಕೆ ಕಾರಣ ವೇನೆಂಬದನ್ನು ಘನವಾದ ಚಿತ್ತದಲ್ಲಿ ಪರಾಂಬಸೋಣವಾಗಬೇಕು.

೬. ಯಲ್ಲಾ ದೇಶಗಳಲ್ಲಿಯೂ, ಪ್ರಾಯೇಣ ತಾಂತ್ರಿಕರುಗಳೇ ಶಿವ ವಿಷ್ಣ್ವಾಲಯಗಳಲ್ಲಿ, ಪೂಜೆಮಾಡುತ್ತಾ ಬಂದಿರುವದರಿಂದ, ಆಗಮೋಕ್ತವಾದ ಪೂಜೆಯನ್ನೇ ಮಾಡಬೇಕೆಂಬದು ಶಾಸ್ತ್ರೀಯ ವಾದದ್ದೆಂತಲೂ, ಅದರಿಂದಲೇ ದೇವರುಗಳಿಗೆ ಪ್ರೀತಿಯುಂಟಾಗುತ್ತೆಂತಲೂ, ಇತರವೈದೀಕರುಗಳು ದೇವರನ್ನು ಆರಾಧಿಸಕೂಡದಾಗಿಯೂ, ದೇವರ ಸಮೀಪ ಪ್ರದೇಶಗಳಿಗೆ ಬರಕೂಡದಾಗಿಯೂ, ಹಾಗೆ ನಡೆದರೆ ದೇವರು ಅಶುದ್ಧನಾದನೆಂತಲೂ, ಹೀಗೆಲ್ಲಾ ತಾಂತ್ರಿಕರುಗಳು ದುರ್ವ್ಯವಹಾರಗಳನ್ನು ಮಾಡುವದಕ್ಕೆ ಅವಕಾಶ ಉಂಟಾಗಿರುತ್ತೆ, ಪ್ರಭುತ್ವವನ್ನು ಮಾಡತಕ್ಕ ರಾಜರುಗಳು ತಮ್ಮ ತಮ್ಮ ದೇಶದಲ್ಲಿರತಕ್ಕ ದೇವಾಲಯಗಳನ್ನು ಜೀರ್ಣೋದ್ಧಾರಮಾಡಿ, ಅವುಗಳಿಗೆ ಬೇಕಾದಷ್ಟು ದ್ರವ್ಯಗಳನ್ನುಕೊಟ್ಟು, ರಾಜ್ಯ ಮತ್ತೂ, ರಾಜ್ಯದಲ್ಲಿರತಕ್ಕ ಪ್ರಜೆಗಳ ಕ್ಷೇಮಾರ್ಥವಾಗಿ, ನಿತ್ಯದಲ್ಲಿಯೂ ಆರಾಧನೆಗಳನ್ನು ನಡಸುವ ಬಗ್ಗ್ಯಾಗಿ ವೇತನಗಳನ್ನು ಏರ್ಪಡಿಸಿ ಪೂಜಕರುಗಳನ್ನು ನಿಯಮಿಸ ಬೇಕಾದ ಸಂದರ್ಭಗಳಲ್ಲಿ, ವೈದಿಕರುಗಳು (ಪರಾರ್ಥವಾಗಿ ವೇತನವನ್ನು ಪಡಕೊಂಡು ಪೂಜೆಮಾಡತಕ್ಕದ್ದು ಧರ್ಮಶಾಸ್ತ್ರ ಪುರಾಣಗಳರೀತ್ಯಾ ದೇವಲಕರಾಗಿ ಕರ್ಮಬಹಿಷ್ಕೃತರಾಗುತ್ತೇವೆಂಬದರಿಂದ) ಏರ್ಪಡದೆ, ತಾಂತ್ರಿಕರುಗಳು (ವೈದಿಕರು ಗಳಂತೆ ಯೋಚಿಸದೆ) ಪೂಜಾದಿಗಳನ್ನು ಮಾಡಿಕೊಂಡುಬರುವದಕ್ಕೆ ಅಂಗೀಕರಿಶಿರ ಬಹುದೇಶಿವಾಯಿ, ವೈದಿಕನಿಗಿಂತಲೂ ತಾಂತ್ರಿಕನು ಶ್ರೇಷ್ಠನೆಂತಾಗಲೀ, ವೇದಕ್ಕಿಂತಲೂ ತಂತ್ರವು ಶ್ರೇಷ್ಠವಾದದ್ದೆಂತಲಾಗಲೀ, ದೇವಸ್ಥಾನಗಳಲ್ಲಿ ಆಗಮೋಕ್ತ ಪೂಜೆಗಳು ಏರ್ಪಟ್ಟದ್ದೆಂದು ಹೇಳುವದಕ್ಕೆ ಯಾವವಿಧವಾದ ಆಧಾರಗಳೂಇಲ್ಲವಾಗಿವೆ.

೭. ತಾಂತ್ರಿಕಸ್ಥಳದಲ್ಲಿ, ವೈದಿಕರುಗಳು ಸ್ವಾರ್ಥವಾಗಿ ಪೂಜೆಮಾಡಬಹುದಾಗಿದ್ದರೂ, ಈಗ ಯಾತಕ್ಕೆ ಹಾಗೆ ನಡದು ಬರುವದಿಲ್ಲವಾಗಿಯೂ, ಅದರಿಂದಲೇ ಸ್ಥಿರಮೂರ್ತಿಗಳನ್ನು ಪೂಜಿಸುವದಕ್ಕೆ ವೈದಿಕರುಗಳು ಅಧಿಕಾರಿಗಳೇ ಅಲ್ಲವೆಂತಲೂ, ಹಾಗೆ ದೇವರುಗಳನ್ನು ಆರಾಧಿಸಿದರೆ ತಂತ್ರೋಕ್ತವಾದ ಸಂಪ್ರೋಕ್ಷಣೆಗಳು ಆಗಬೇಕಾಗಿ ತಾಂತ್ರಿಕರುಗಳು ಹೇಳತಕ್ಕ ಅಂಶಗಳಿಗೆ ಕಾರಣಗಳು, ತಾರ್ಕಿಕವಾದ ರಾಜನಿರ್ಬಂಧ ರೂಪವಾದ ಕಾರಣಗಳಾಗಿ ಹೇಳಬೇಕೆ ವಿನಹಾ, ಶಾಸ್ತ್ರೀಯ್ಯವಾದ್ದೆಂದು ಹೇಳುವದಕ್ಕೆ ಸಾಧ್ಯವಿಲ್ಲ. ಕೆಲ ಕೆಲವು ದೊಡ್ಡ ಪ್ರಸಿದ್ಧ ದೇವಾಲಯಗಳಲ್ಲಿ, ರಾಜರುಗಳಿಂದ ಕೊಡಲ್ಪಟ್ಟಿರುವ ಅನೇಕಾಭರಣಗಳು ವಗ್ಯೆರೆ ದೇವರುಗಳಿಗೆ ಧರಿಸತಕ್ಕ ಸಂಪ್ರದಾಯಗಳು ಏರ್ಪಟ್ಟಿರುವದರಿಂದ, ಕಾಲಾನುಗುಣ್ಯವಾಗಿ ಜನರುಗಳು ಪಾರಸಾರ್ಥಿಕಬುದ್ಧಿಯನ್ನು ಯೋಚಿಸಿ, ಅವುಗಳ ಸಂರಕ್ಷಣಾರ್ಥವಾಗಿ ಇಂಥಾ ನಿರ್ಬಂಧಗಳು ಏರ್ಪಟ್ಟಿರಬಹುದಾಗಿ ಹೇಳತಕ್ಕದ್ದಾಗಿಧೆ. ಆಗಮ ದೀಕ್ಷಾಬದ್ಧರಲ್ಲದ ಮಠಾಚಾರ್ಯರುಗಳೂ ಅನೇಕ ಋಷಿಗಳೂ ಈಗ ಇರತಕ್ಕ ಆಚಾರ್ಯರೂ ಕೂಡಾ, ತಂತ್ರೋಕ್ತವಾಗಿ ಪೂಜೆನಡಿಯತಕ್ಕ ದೇವಸ್ಥಾನಗಳಲ್ಲಿ ಪೂಜಾದಿಗಳನ್ನು ಮಾಡುತ್ತಾ ಬಂದಿರುವದರಿಂದಲೇ, ಮೇಲಿನ ಅರ್ಥವನ್ನು ಸಹಜವಾಗಿ ನಿರ್ಧರಿಸಬಹುದಾಗಿಧೆ.

ಇವುಗಳನ್ನೆಲ್ಲಾ ಚೆನ್ನಾಗಿ ಪರಾಂಬರಿಕೆಯಲ್ಲಿ ತೆಗದುಕೊಂಡು, ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ತಮ್ಮ ಆಶ್ರಮಧರ್ಮಕ್ಕೆ ಸಗುಣೋಪಾಸನೆಯು ಮುಖ್ಯವಾದದ್ದಲ್ಲವಾದಾಗ್ಯೂ, ರಾಜ್ಯಭಾರವನ್ನು ಮಾಡತಕ್ಕ ರಾಜರುಗಳ, ಮತ್ತು ತಮ್ಮ ಶಿಷ್ಯರುಗಳ ಕ್ಷೇಮಾರ್ಥವಾಗಿ ಸರ್ಕಾರೀ ದೇವಸ್ಥಾನಗಳಲ್ಲೂ, ಇತರದೇವಸ್ಥಾನಗಲ್ಲೂ, ಈವರಿಗೆ ಪೂಜೆಯನ್ನು ಮಾಡುತ್ತಾ ಬಂದಿರುವದಕ್ಕಾಗಿ, ಸರ್ಕಾರದಿಂದಾ ಹುಟ್ಟಿರತಕ್ಕ ಸನದುಗಳ ದಾಖಲೇಗಳು ಸರ್ಕಾರದಲ್ಲೇ ಇರಬಹುದಾದ್ದರಿಂದ, ಅವುಗಳನ್ನು ಪರಾಂಬರಿಸೋಣದರಿಂದಲೂ, ಶ್ರೀ ಮಠದಲ್ಲಿರತಕ್ಕ ಸನದು ದಾಖ್ಲೆಗಳನ್ನು ಹಾಜರ್ಮಾಡಬೇಕಾಗಿ ನಮಗಳಿಗೆ ಅಪ್ಪಣೆ ಆದಲ್ಲಿ, ಅಂದವುಗಳನ್ನು ದೊರತಷ್ಟುಮಟ್ಟಿಗೆ ನಮ್ಮಗಳಿಂದ ಹಾಜರ್ಪಡಿಸಿಕೊಂಡು, ಅವುಗಳನ್ನು ಪರಾಂಬರಿಸೋಣದರಿಂದಲೂ, ನ್ಯಾಯವಾಗಿ ವೈದಿಕರುಗಳು ಸರ್ವತ್ರ, ತಮ್ಮ ತಮ್ಮ ಕ್ಷೇಮಾರ್ಥವಾಗಿ ಪೂಜೆಯಂ ಮಾಡಿಕೊಳ್ಳಬಹುದೆಂತಲಾಗಲೀ, ಅಥವಾ ಯಲ್ಲವರುಗಳೂ ದೇವಾಲಯಗಳಲ್ಲಿ ಸಾಧಾರಣವಾಗಿ ಪ್ರವೇಶಮಾಡೋಣದರಲ್ಲಿ, ಲೌಕಿಕರೀತ್ಯಾ ಸರ್ಕಾರದ ನಿರ್ಬಂಧಗಳನ್ನು ಏರ್ಪಡಿಸಬೇಕಾದ್ದು ಕಾಲಾನುಗುಣವಾಗಿ ನ್ಯಾಯವಾದ್ದೆಂದು ಗವರ್ಮೆಂಟನವರು ಯೋಚಿಸತಕ್ಕ ಸಂದರ್ಭದಲ್ಲಿ, ಮುಖ್ಯವಾಗಿ ನಮ್ಮಗಳೆಲ್ಲವರ ಕ್ಷೇಮಾರ್ಥವಾಗಿ ದಯಮಾಡಿ, ಸಗುಣೋಪಾಸನೆಯನ್ನು ಅಂಗೀಕರಿಸಿ, ದೇವತಾರಾಧನೆಯನ್ನು ಅಂಗೀಕರಿಸಿ, ದೇವತಾರಾಧನೆಯನ್ನುಮಾಡುತ್ತಾ ಒರುವ ನಮ್ಮ ಮಠಾಚಾರ್ಯರು, ಯಲ್ಲಾ ಸರ್ಕಾರೀ ದೇವಸ್ಥಾನಗಳಲ್ಲಿಯೂ, ಅವರು ದಯಮಾಡಿಸತಕ್ಕ ಕಾಲಗಳಲ್ಲಿ ಪೂಜಾದಿಗಳನ್ನು ಮಾಡತಕ್ಕಬಗ್ಯೇ, ಯಾವವಿಧವಾದ ತೊಂದರೆಗಳಿಗೂ, ಆಸ್ಪದವಿಲ್ಲದರೀತಿ ತೀರ್ಮಾನಮಾಡಿಸಿಕೊಟ್ಟು, ಮತ ವಿಷಯಕವಾದ ಕಲಹಗಳಿಗೆ ಆಸ್ಪದವಿಲ್ಲದಂತೇಮಾಡಿ, ಸರ್ವಪ್ರಜೆಗಳನ್ನು ರಕ್ಷಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುತ್ತೇವೆ.

[illegible]

[illegible]

[illegible]

[illegible]

ಶ್ರೀ.

ಗಣೇಶ ಶಾರದಾಗುರುಭ್ಯೋನಮಃ.

ಅಥ ಧರ್ಮಶಾಸ್ತ್ರವಚನಾನಿ.

ಸೂತಸಂಹಿತಾಯಾಂ ॥ ವೈದಿಕೀತಾಂತ್ರಿಕೀಚೇತಿ ದ್ವಿಜೇಂದ್ರಾಸ್ತ್ಯಾಂತ್ರಿಕೀತ್ರಯಾ । ತಾಂತ್ರಿಕಸ್ಯೈವನಾನ್ಯಸ್ಯ ವೈದಿಕೀವೈದಿಕಸ್ಯಹಿ ॥ ಇತ್ಥಂಸಮಸ್ತದೇವಾನಾಂ ಪೂಜಾವಿಪ್ರಾವ್ಯವಸ್ಥಿತಾ । ವೈದಿಕಾಗಮ ವಿಹಿತ ಶಿವ ವಿಷ್ಣು ಪ್ರತಿಷ್ಠಾಪೂಜಾದ್ಯಧಿಕಾರಿಣಃ ವೈದಿಕಾಏವ, ತದುಕ್ತಂ, ಸೂತಸಂಹಿತಾಯಾಂ ॥ ಹರಿಹರವಿಧಿಪೂಜಾ ಕೀರ್ತಿತಾಸರ್ವತಂತ್ರೈಃ ಶ್ರುತಿಪಥನಿರತಾನಾಂ ಯದ್ಯದುಕ್ತಾತು ಪೂಜಾ। ಶ್ರುತಿಪಥಗಳಿತಾನಾಮೇವತಂತ್ರೋಕ್ತಪೂಜಾ ಶ್ರುತಿಪಥ ನಿರತಾನಾಂ ಸರ್ವ ವೇದೋದಿತೈವ ॥ ಶಿವರಹಸ್ಯೇ ॥ ವೇದೋಕ್ತಲಿಂಗಪೂಜೈವ ಕರ್ತವ್ಯಾನಿಯತಂಬುಧೈಃ । ವೇದಮಾರ್ಗರತೈ ಶ್ಶುದ್ಧೈ ರ್ಮೋಕ್ಷರೂಪಫಲೇಪ್ಸುಭಿಃ॥ ಶಂಕರಸಂಹಿತಾಯಾಂ॥ ವೇದಾಗಮೋಕ್ತವಿಧಿನಾ ಸರ್ವಕಾಲಮತಂದ್ರಿತಾಃ। ಪೂಜಾಂಕುರ್ವಂತಿ ಯೇನಿತ್ಯಂ ಮುಕ್ತಿಭಾಜೋಭವಂತಿತೇ । ಲಿಂಗಮೂರ್ತಿ ಮಧಿಷ್ಠಾಯ ಪೂಜ್ಯೋವೇದೋಕ್ತವರ್ತ್ಮನೇತಿ ॥ ವೈದ್ಯನಾಥದೀಕ್ಷಿತೀಯೇ ॥ ಸ್ಮೃತ್ಯಂತರವಚನಂ ॥ ಸರ್ವೇಽಪ್ಯಾಗಮಮಾರ್ಗೇಣ ವೇದಮಾರ್ಗಾನುಸಾರಿಣಾ । ಗುರೂಕ್ತೇನ ಪ್ರಕಾರೇಣ ವೇದಬಾಹ್ಯೇನನಾರ್ಚಯೇದಿತಿ ॥ ಸರ್ವೇಽಪ್ಯವೈದಿಕಪೂಜಾಧಿಕಾರಿಣಇತ್ಯರ್ಥಃ ॥ ವೈದಿಕಪೂಜಾತ್ಯಾಗೇನತಂತ್ರೋಕ್ತಪೂಜಾಮನುತಿಷ್ಠತಃ । ಪಾಷಂಡತಾ ಸೂತಸಂಹಿತಾಯಾಮುಕ್ತಾ ॥ ಲಿಂಗೇದಿನೇದಿನೇದೇವಂ ಶಿವರುದ್ರಾದಿಸಂಜ್ಞಿಕಂ । ನಾರ್ಚಯಿಷ್ಯಂತಿವೇದೇನ ಪಾಷಂಡೋಪಹತಾಜನಾಃ ॥ ಕೃತ್ರಿಮಲಿಂಗಮಪಿ ವೈದಿಕತಾಂತ್ರಿಕೋಭಯಪ್ರತಿಷ್ಠಿತಂವೈದಿಕೈಃಪೂಜ್ಯಂ ॥ ತಥಾಚಲೌಗಾಕ್ಷಿಃ ॥ ಆಗಮೋಕ್ತಪ್ರಕಾರೇಣ ದೇವತಾಯಾಪ್ರತಿಷ್ಠಿತಾ । ಸಾಪಿವಂದ್ಯಾಚ ಸೇವ್ಯಾಚ ವೈದಿಕೈರ್ಧರ್ಮತತ್ಪರೈಃ॥ ಅತ್ರಸೇವಾಶಬ್ದಃಪೂಜಾರ್ಥಃ ॥ ಸೂತಸಂಹಿತಾಯಾಂ॥ ತಂತ್ರೋಕ್ತೇನಪ್ರಕಾರೇಣ ದೇವತಾಯಾಪ್ರತಿಷ್ಠಿತಾ । ಸಾಪಿವಂದ್ಯಾಚ ಪೂಜ್ಯಾಚ ವೈದಿಕೈ ರ್ವೇದವರ್ತ್ಮನಾ ॥ ತಂತ್ರಾಣಾಂಶಾಪಗ್ರಸ್ತಾಧಿಕಾರಿಕತ್ವಂ ॥ ಕೂರ್ಮಪುರಾಣೇಉಕ್ತಂ ॥ ಸತೇಷಾಂಮಾಯಯಾಜಾತಂಗೋವಧಂಗೌತಮೋಮುನಿಃ । ಕೇನಾಪಿ ಹೇತುನಾಜ್ಞಾತ್ವಾ ಶಶಾಪಾತೀವಕೋಪನಃ ॥ ಭವಿಷ್ಯದತ್ರಯೀಬಾಹ್ಯಾ ಮಹಾಪಾತಕಿಭಿಸ್ಸಮಾಃ । ಇತಿಪ್ರಸ್ತುತ್ಯಸರ್ವೇ ಸಂಪ್ರಾಪ್ಯದೇವೇಶಂ॥ ಶಂಕರಂ ವಿಷ್ಣುಮವ್ಯಯಂ ॥ ಅಸ್ತುವನ್ಲೌಕಿಕೈರ್ವಾಕ್ಯೈ ಶ್ಶಿಷ್ಯಾಇವಸೇವಕಾಃ ॥ ಇತ್ಯಾದಿನಾತೇಷಾಂ ಗತಿಪ್ರಾರ್ಥನಾಂಪ್ರದರ್ಶ್ಯ । ತಸ್ಮಾದ್ವೈವೇದಬಾಹ್ಯಾನಾಂ ರಕ್ಷಣಾರ್ಥಾಯ ಪಾಪಿನಾಂ । ವಿಮೋಹನಾನಿ ಶಾಸ್ತ್ರಾಣಿ ಕರಿಷ್ಯಾವೋವೃಷಧ್ವಜ ॥ ಏವಂಸಂಚೋದಿತೋರುದ್ರೋಮಾಧವೇನ ಮುರಾರಿಣಾ। ಚಕಾರಮೋಹಶಾಸ್ತ್ರಾಣಿ ಕೇಶವೋಪಿಶಿವೇರಿತಃ ॥ ಕಾಪಾಲಂ ಗಾರುಡಂ ಶಾಕ್ತಂ ಭೈರವಂಪೂರ್ವಪಶ್ಚಿಮಂ । ಪಾಂಚರಾತ್ರಂಪಾಶುಪತಂ ತಥಾನ್ಯಾನಿಸಹಸ್ರಶಃ ॥ ಸೃಷ್ಟ್ವಾತಾನಾಹತುರ್ದೇವೌ ಕುರ್ವಾಣೌ ಶಾಸ್ತ್ರಚೋದನಂ । ಇತಿ ॥ ಸ್ಪಷ್ಟಾಚೇಯಂ ಶಾಪಪ್ರಕಾರಾದ್ಯುಕ್ತಿಃ ॥ ಸೂತಸಂಹಿತಾವಾರಾಹ ವಾಮನಾದಿಪುರಾಣೇಷು॥ ವಾಮನಪುರಾಣೇ॥ ಸ್ವತಂತ್ರಾಆಗಮಾಸ್ಸರ್ವೇ ನಿರ್ಮೂಲಾಃಪರಿಕೀರ್ತಿತಾಃ ॥ ಅಧಿಕಾರಿವಿಭೇದೇನ ಪ್ರವೃತ್ತಾನಹಿಸಂಶಯಃ ॥ ಮನುಃ ॥ ವೇದಶ್ಚ ವೇದಮೂಲಾನಿ ಸ್ಮೃತ್ಯಾದೀನ್ಯಖಿಲಾನ್ಯಪಿ ॥ ಸ್ವತಃ ಪ್ರಾಪ್ತಾನಿಮರ್ತ್ಯಾನಾಂಭ್ರಮಾದನ್ಯಾನಿಸರ್ವತಃ । ಮಾರ್ಗೋವೇದವಿರುದ್ಧೋಯಃ ಸತುಸತ್ಯಂತಪೋಧನಾಃ॥ ವೇದಪ್ರಸ್ಖಲಿತಸ್ಯೈವ ನಪ್ರೋಕ್ತೋ ವೈದಿಕಸ್ಯತು ॥ ಚಂದ್ರಿಕಾಯಾಂ। ವೈದಿಕಂಬ್ರಾಹ್ಮಣಾನಾಂಸ್ಯಾತ್ ರಾಜ್ಞಾಂವೈದಿಕತಾಂತ್ರಿಕಂ । ತಾಂತ್ರಿಕಂವೈಶ್ಯಶೂದ್ರಾಣಾಂ ಸ್ತ್ರೀಣಾಮಪಿಚತಾಂತ್ರಿಕಂ ॥ ಇತಿ ॥ ಸೂತಸಂಹಿತಾಯಾಂ ॥ ಸ್ಮೃತಯಶ್ಚ ಪುರಾಣಾನಿ ಭಾರತಾದೀನಿಸುಂದರಿ। ವೇದಮೂಲಾನ್ಯತಸ್ತೇನ ವಿರೋಧೇಮೂಲಿನಾಮಪಿ ॥ ನಸಿಧ್ಯತ್ಯೇವಸುಶ್ರೋಣಿ ಪ್ರಾಮಾಣ್ಯಂಸೂಕ್ಷ್ಮದರ್ಶನೇ । ಪಾಂಚರಾತ್ರಾದಿಮಾರ್ಗಾಣಾಂ ವೇದಮೂಲತ್ವಮಾಸ್ತಿಕೇ ॥ ನಹಿಸ್ವತಂತ್ರಾಸ್ತೇನ ಭ್ರಾಂತಿಮೂಲಾನಿರೂಪಣೇ । ತಥಾಪಿ ಯೋಂಶೋಮಾರ್ಗಾಣಾಂ ವೇದೇನನವಿರುಧ್ಯತೇ ॥ ಸೋಂಶಃಪ್ರಮಾಣಮಿತ್ಯುಕ್ತಃ ಕೇಷಾಂಚಿದಧಿಕಾರಿಣಾಂ । ಅತ್ಯಂತ ಮಲಿನಾನಾಂತು ಭ್ರಷ್ಟಾನಾಂ ವೇದಮಾರ್ಗತಃ॥ ಪಾಂಚರಾತ್ರಾದಯೋಮಾರ್ಗಾಃ ಕಾಲೇನೈವೋಪಕಾರಕಾಃ ॥ ಇತಿ ॥ ಪರಾಶರಪುರಾಣೇ ॥ ಯಥಾಮಾತಾಸ್ವಪುತ್ರಾಣಾಂ ಕೇವಲಂಕೃಪಯೈವತು । ರಕ್ಷಿಕಾತದ್ವದೇವೇಯಂ ಶ್ರುತಿಸ್ಸರ್ವಜನಸ್ಯಹಿ ॥ ಯಥಾಶತ್ರುಜನಸ್ಸಾಕ್ಷಾ ದ್ಬಾಧಕಸ್ಸರ್ವದೇಹಿನಾಂ । ತಥಾವೇದೇತರೋಮಾರ್ಗೋ ವೈದಿಕಸ್ಯತುಬಾಧಕಃ । ಇತಿ ॥ ಸೂತಸಂಹಿತಾಯಾಂ ॥ ವಿದ್ಯಾವೇದಾನುಸಾರೇಣ ಪ್ರವೃತ್ತಾ ಸ್ಸರ್ವಶೋಭನಾಃ । ತಥಾಪಿತಾಸು

ಧರ್ಮಶಾಸ್ತ್ರವಚನಾನಿ.

ಸರ್ವಾಸು ಕಶ್ಚಿದಂಶಃಕ್ವಚಿತ್ಕ್ವಚಿತ್ । ಶೈವಾಗಮಾನುಸಾರೇಣ ತತ್ಪ್ರಭೇದಾನುಸಾರತಃ ॥ ವಿಷ್ಣ್ವಾಗಮಾನು ಸಾರೇಣ ತತ್ಪ್ರಭೇದಾನುಸಾರತಃ । ಬ್ರಹ್ಮಾಗಮಾನುಸಾರೇಣ ತತ್ಪ್ರಭೇದಾನು ಸಾರತಃ॥ ಅಧಿಕಾರಿವಿಶೇಷೇಣ ಕ್ರಮೇಣೈವ ವಿಮುಕ್ತಯೆ । ಪ್ರವರ್ತತೇ ಮುನಿಶ್ರೇಷ್ಠಾ ಸ್ಸತ್ಯಮೇವ ಮಯೋದಿತಂ ॥ ಯಸ್ಮಿನ್ನಂಶೇತುಯೋಮರ್ತ್ಯೋ ದೀಕ್ಷಿತೋಮುನಿಸತ್ತಮಾಃ। ಸೋಂಶಸ್ತೇನೈವಸಂಗ್ರಾಹ್ಯಃ ಸರ್ವಥಾನತುವೈದಿಕೈಃ ॥ ವಿದ್ಯಾಃಪುರಾಣಾನೀತ್ಯರ್ಥಃ ॥ ಪರಾಶರಪುರಾಣೆ ॥ ಕ್ವಚಿತ್ತಂತ್ರಾನುಸಾರೇಣ ಧರ್ಮಾನ್ಪೌರಾಣಿಕಾಅಪಿ। ವದಂತಿತಾದೃಶೋಂಶಸ್ತು ಗ್ರಾಹ್ಯಸ್ತಂತ್ರಾವಲಂಬಿಭಿಃ ॥ ತಂತ್ರಾಣಿತಂತ್ರನಿಷ್ಠಾನಾಂ ರಕ್ಷಕಾಣ್ಯಪಿಚಕ್ರಮಾತ್ । ಬಾಧಕಾನಿವಿಶೇಷೇಣ ವೇದಮಾರ್ಗೈಕವರ್ತಿನಾಂ॥ಇತಿ॥ ಕೂರ್ಮೇಕಲಿಯುಗಧರ್ಮಪ್ರಸ್ತಾವೇ ॥ ಯೇಚಾನ್ಯೇಶಾಪನಿರ್ದಗ್ಧಾಃ ಗೌತಮಸ್ಯಮಹಾತ್ಮನಃ। ದಧೀಚಿಶಾಪ ನಿರ್ದಗ್ಧಾಃ ಪುರಾದಕ್ಷಾಧ್ವರೇ ದ್ವಿಜಾಃ ॥ ಕುರ್ವಂತಿತೇಽವತಾರಾಣಿ ಬ್ರಾಹ್ಮಣಾನಾಂಕುಲೇಷು ವೈ ॥ ವಾಮಾಃಪಾಶುಪತಾಚಾರಾಃ ತಥಾನ್ಯೇಪಾಂಚರಾತ್ರಕಾಃ । ಭವಿಷ್ಯಂತಿ ಕಲೌತಸ್ಮಿನ್ಬ್ರಾಹ್ಮಣಾನಾಂಕುಲೇಷುವೈ॥ ಇತಿ॥ ಸ್ಮೃತಿಮುಕ್ತಾಫಲೇಶಾತಾತಪಃ ॥ ದೇವಾರ್ಚನಪರೋಯಸ್ತು । ವಿತ್ತಾರ್ಥೀವತ್ಸರತ್ರಯಂ॥ ಸವೈದೇವಲಕೋನಾಮ।ಹವ್ಯಕವ್ಯೇಷುಗರ್ಹಿತಃ ॥ ಇತಿ ॥ ಸ್ಮೃತಿಸಂಗ್ರಹೇಚ॥ ದೇವಾರ್ಚನಪರೋಯಸ್ತು ಪರಾರ್ಥಂವಿತ್ತಕಾಂಕ್ಷಯಾ ॥ ಚತುರ್ವೇದಧರೋವಿಪ್ರಃ । ಸಚಂಡಾಲಸಮೋಭವೇತ್ ॥

[illegible]

No 176

ಶ್ರೀಮದಖಿಲ ಭೂಮಂಡಲ ಮಂಡನಾಯಮಾನ ಮೈಸೂರು ಸಂಸ್ಥಾನದ ಮಹಾರಾಣೀ ರೀಜಂಟ್ ಇವರ ಹುಜೂರು ಮಹಾ ಸನ್ನಿಧಾನಂಗಳಿಗೆ.

ನಗರ ಡಿವಿಜನ್ [illegible] ಡಿಸ್ಟ್ರಿಕ್ಟ [illegible]

ನಿವಾಸಿಗಳಾದ ಅದ್ವೈತ ಮಹಾ ಜನಗಳು ವಿನಯ ಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವದೇನಂದರೆ,—

ನಮ್ಮ ಅದ್ವೈತ ಮತಾಚಾರ್ಯರಾದ ಶ್ರೀ ಶ್ರೀ ಶೃಂಗೇರಿ ಜಗದ್ಗುರು ಮಹಾ ಸ್ವಾಮಿಗಳವರ ಸವಾರಿಯು, ಕಳೆದ ಜೂನ್ ತಿಂಗಳಲ್ಲಿ ಮೈಸೂರು ರಾಜಧಾನಿಗೆ ದಯಮಾಡಿಶಿದ ಸಮಯದಲ್ಲಿ, ಮಧ್ಯ ಮಾರ್ಗದಲ್ಲಿದ್ದ ಶ್ರೀರಂಗಪಟ್ಟಣದ ರಂಗನಾಥ ಸ್ವಾಮಿಯವರ ದರ್ಶನಾರ್ಥ ದಯಮಾಡಿಶಿ, ಶ್ರೀ ಸ್ವಾಮಿ ದರ್ಶನ ಪೂಜಾದಿಗಳಿಂದ ಶಿಷ್ಯರಾದ ನಮಗಳಿಗೆ ಶ್ರೇಯೋಭಿವೃದ್ಧಿಯಾಗುವಂತೆ ಅನುಗ್ರಹವಾಗಬೇಕಾಗಿ ಶಿಷ್ಯಮಂಡಲೀಯವರು ಮಾಡಿಕೊಂಡ ವಿಶೇಷವಾದ ಪ್ರಾರ್ಥನೆಯನ್ನು ಅಂಗೀಕರಿಶಿ, ಅದರಂತೆ ಅನುಗ್ರಹವಾದ ಅಂಶದಲ್ಲಿ, ಆ ಈಚಿಗೆ ಕೆಲವು ದಿನಗಳ ತರುವಾಯ ವಿಶಿಷ್ಟಾದ್ವೈತಿಗಳಾದ ಶ್ರೀವೈಷ್ಣವರುಗಳು ತಮ್ಮಗಳಿಂದ ಆದರಿಸಲ್ಪಡುತ್ತಲಿರುವ ಪಾಂಚರಾತ್ರಾಗಮ ಸಿದ್ಧಾಂತ ವಿರುದ್ಧವಾಯಿತೆಂತಲೂ, ಈ ಗೋಸ್ಕರ ಮೇಲಿನ ಆಗಮರೀತ್ಯಾ ದೇವಸ್ಥಾನದಲ್ಲಿ ಉಂಟಾದ ಅಶುಚಿಯನ್ನು ಹೋಗಲಾಡಿಸಿಕೊಳ್ಳುವದಕ್ಕಾಗಿ, ಸಂಪ್ರೋಕ್ಷಣೆಯನ್ನು ಮಾಡುವದಕ್ಕೆ ಅಪ್ಪಣೆ ಕೊಡಿಸಬೇಕಾಗಿ ವಗೈರೆ, ಗೌರ್ಮೆಂಟಿನಲ್ಲಿ ಫಿರ್ಯಾದು ಪಟ್ಟದ್ದರಮೇಲೆ, ತಮ್ಮ ದೇಶದ ಪ್ರಜೆಗಳಲ್ಲಿ ಪರಸ್ಪರ ವೈಷಮ್ಯಗಳಿಗೆ ಅವಕಾಶವುಂಟಾಗಿ ತನ್ಮೂಲಕ ಪ್ರಜೆಗಳು ತೊಂದರೆಯನ್ನು ಪಡಿಯಬಾರದೆಂಬ ಕರುಣೆಯನ್ನು ತೆಗದುಕೊಂಡು, ಸರ್ವಮತ ಸಮ್ಮತವಾದ ಮತ್ತು ಸಮಾನಬಾಧ್ಯತೆಯುಳ್ಳ ಸರ್ಕಾರೀ ದೇವಸ್ಥಾನದ ವಿಷಯದಲ್ಲಿ, ಒಂದು ಮತದವರ ರೀತ್ಯಾ ವಿರುದ್ಧವಾಯಿತೆಂತಲೂ, ಅಂಥಾ ಮತಾನುಗುಣ್ಯವಾಗಿ ದೇವಸ್ಥಾನದ ವಿಷಯದಲ್ಲಿ ನಡಸಿಕೊಡಬೇಕಾಗಿ ತಂದ ಫಿರ್ಯಾದು ವಿಚಾರಕ್ಕೆ ಅರ್ಹವಾದ್ದಲ್ಲವೆಂಬ ಖಂಡಿತವಾದ ಅಪ್ಪಣೆಯನ್ನು ದಯಪಾಲಿಸದೆ: ವಿಚಾರಮಾಡಿ, ಆಗಿನ ಸಂದರ್ಭದಲ್ಲಿ ಫಿರ್ಯಾದಿಗಳ ಫಿರ್ಯಾದಿನಲ್ಲಿ ವಿವರಿಸಲ್ಪಟ್ಟಂತೆ ನಡವಳಿಕೆಗಳು ನಡದು ಇರಲಿಲ್ಲವೆಂಬದರಮೇಲೆ, ಅವರ ಕೋರಿಕೆಯಂತೆ ಸಂಪ್ರೋಕ್ಷಣಾದಿಗಳು ನಡಿಸಬೇಕಾದ್ದು ಪ್ರಕೃತವಿಲ್ಲವಾಗಿ ಅಪ್ಪಣೇ ಕೊಡಿಸೋಣವಾಯಿತು ; ಇಂಥಾ ಅಪ್ಪಣೆಯನ್ನು ಅದ್ವೈತ ಮತದವರುಗಳು ನೋಡಿ, ಬಹಳ ವಿಷಾದವನ್ನು ಹೊಂದುತ್ತಾ ಸಕಲ ಪ್ರಜಾ ಪರಿಪಾಲಕರಾದ ಗೌರ್ಮೆಂಟಿನವರು ಯಾವ ಉದ್ದೇಶ್ಯದಿಂದ ಇಂಥಾ ಅಪ್ಪಣೆಯಂ ಮಾಡಿರುವರೋ ಅದನ್ನು ಕುರಿತು ನಾವುಗಳು ಹ್ಯಾಗೆ ಚರ್ಚಿಸಬಹುದೆಂದು ಭೀತರಾಗಿ, ತಮ್ಮೊಳಗೆ ತಾವೇ ವಿಷಾದಪಡುತ್ತಿರುವಲ್ಲಿ, ಫಿರ್ಯಾದು ಪಟ್ಟವರುಗಳು ಒಂದು ವಿಧವಾಗಿ ತಮ್ಮಿಂದ ಆರಂಭಿಸಲ್ಪಟ್ಟ ಕಾರ್ಯವು ನೆರವೇರಿದಹಾಗೆ ಆಗಿದ್ದಾಗ್ಯೂ, ಸಕಲ ಮತದವರಿಗೂ ಸಮಾನ ಬಾಧ್ಯತೆಯುಳ್ಳ ದೇವಸ್ಥಾನದ ವಿಷಯದಲ್ಲಿ ನೂತನವಾದ ಒಂದು ವ್ಯವಹಾರವಂಮಾಡಿ, ತನ್ಮೂಲಕ ತಾವುಗಳು ಸರ್ಕಾರದಿಂದ ಸ್ವಲ್ಪಮಟ್ಟಿಗೆ ಅವಕಾಶವನ್ನುಂಟುಮಾಡಿಕೊಳ್ಳಬೇಕೆಂಬ ಉದ್ದೇಶ್ಯದಿಂದ ಮಾಡಿದ ಆರಂಭದಲ್ಲಿ, ಅವರುಗಳ ಉದ್ದೇಶ್ಯಕ್ಕನುಗುಣವಾಗಿ ಇಷ್ಟರಮಟ್ಟಿಗೆ ಅವಕಾಶ ದೊರಕಿದ್ದನ್ನೇ ಪ್ರಬಲವಾಗಿಟ್ಟುಕೊಂಡು, ಈಗಲೇ ತಮ್ಮ ಮತದವರಿಗೆ ಒಂದು ಹಕ್ಕುದಾರಿಯನ್ನು ಸ್ಥಿರಪಡಿಸಿಕೊಳ್ಳತಕ್ಕ ಬಗ್ಯಾಗಿ ಗೌರ್ಮೆಂಟಿನವರ ತೀರ್ಮಾನದಮೇಲೂ ಚರ್ಚೆಗಳನ್ನು ಮಾಡುತ್ತಾ ಬರುತ್ತಲಿರುವದು ವರ್ತಮಾನ ಪತ್ರಿಕೆಗಳ ಮೂಲಕವಾಗಿ ನಾವುಗಳು ತಿಳಿದು, ವರ್ಷವನ್ನೆದುರುನೋಡುತ್ತಲಿರುವ ಚಾತಕಪಕ್ಷಿಗಳೋಪಾದಿಯಲ್ಲಿ, ಗೌರ್ಮೆಂಟಿನವರಿಂದ ಮಾಡಲ್ಪಟ್ಟ ತೀರ್ಮಾನದ ವಿಷಯವಾಗಿ ನಾವುಗಳು ಗೌರ್ಮೆಂಟಿನವರಲ್ಲಿ ನಮಗಳ ವಿಷಯವನ್ನು ಕುರಿತು ಅರಿಕೆಮಾಡಿಕೊಳ್ಳುವದಕ್ಕೆ ಅತ್ಯಂತ ಭಯಸ್ಥರಾಗಿ ನಿರೀಕ್ಷಿಸುತ್ತಲಿದ್ದವರಿಗೆ ಈ ಭಾಗದಲ್ಲಿ ಬಹಳಮಟ್ಟಿಗೆ ಧೈರ್ಯವನ್ನೂ, ಸಹಾಯವನ್ನು ಪರಪಕ್ಷೀಯರೇ ಉಂಟುಮಾಡಿಕೊಟ್ಟದ್ದರಿಂದ, ನಾವುಗಳು ಸನ್ನಿಧಿಯಲ್ಲಿ ಅರಿಕೆಮಾಡಿಕೊಳ್ಳುವ ವಿಷಯ[illegible]ನ್ನು ಸರ್ವಮತ ಪರಿಪಾಲಕರಾದ ಸರ್ಕಾರದವರು ಘನವಾದ ಚಿತ್ತದಲ್ಲಿ ಲಾಲಿಸೋಣವಾಗಬೇಕು.

೧. ಸಂಸ್ಥಾನದಲ್ಲಿರತಕ್ಕ ಶಿವ ವಿಷ್ಣ್ವಾದಿ ದೇವಾಲಯಗಳು, ಈದೇವರುಗಳಲ್ಲಿ ನಂಬಿಕೆಯಿಂದ ಆರಾಧಿಸುತ್ತಲಿರುವ ಯಲ್ಲಾ ಮತದವರಿಗೂ ಸಮಾನ ಬಾಧ್ಯತೆಯುಳ್ಳದ್ದೇ ಶಿವಾಯಿ, ವೈಷ್ಣವರೆಂದು ಪ್ರಸಿದ್ಧವಾಗಿ ಲೋಕದಲ್ಲಿ ಹೇಳಲ್ಪಡತಕ್ಕ ಒಂದು ಮತದವರಿಗೆ ಮಾತ್ರವೇ ವಿಷ್ಣು ದೇವಾಲಯದಲ್ಲಿ ಹೆಚ್ಚಾದ ಸಂಬಂಧವಿದೆ ಎಂಬದನ್ನು ಹ್ಯಾಗೆ ಹೇಳಬಹುದು ? ಈಗ ಬ್ರಾಹ್ಮಣ ಮತದಲ್ಲುಂಟಾಗಿರತಕ್ಕ ಮೂರು ಪ್ರಭೇದದವರುಗಳಲ್ಲಿ, ದ್ವೈತಿಗಳು, ವಿಶಿಷ್ಟಾದ್ವೈತಿಗಳು ಈ ಯರಡು ಮತದವರೂ ವಿಷ್ಣುವನ್ನು ಮಾತ್ರವೇ ವಿಶೇಷವಾಗಿ ಆರಾಧಿಸುತ್ತಾ ಬರುತ್ತಾರೆ; ಹಾಗೆಆರಾಧಿಸೋಣವು ಅವರಮತರೀತ್ಯಾ ಸರಿಯಾದ್ದಾಗಿರುತ್ತೆ ~~(ಅದ್ವೈತಿಗಳು ತಮ್ಮ ಮತರೀತ್ಯಾ ಯಲ್ಲಾ ದೇವರುಗಳನ್ನೂ ಭೇದವಿಲ್ಲದೇ ಸಮಾನ ಬುದ್ಧಿಯಿಂದ ಆರಾಧಿಸುತ್ತಾ ಬರುತ್ತಾರೆ)~~ ಅದ್ವೈತಿಗಳು ತಮ್ಮ ಮತರೀತ್ಯಾ ಎಲ್ಲಾ ದೇವರುಗಳನ್ನು ಭೇದವಿಲ್ಲದೇ ಸಮಾನಬುದ್ಧಿಯಿಂದ ಆರಾಧಿಸುತ್ತಾ ಬರುತ್ತಾರೆ ; ಹೀಗಿರುವದರಿಂದ ವಿಷ್ಣುವನ್ನು ಮಾತ್ರವೇ ವೈಷ್ಣವರು ಆರಾಧಿಸುವದ್ದರಿಂದ, ವಿಷ್ಣು ದೇವಾಲಯಗಳಲ್ಲಿ ವೈಷ್ಣವರುಗಳಿಗೆ ಹೆಚ್ಚಾದ ಹಕ್ಕುದಾರಿ ಇರುತ್ತೆಂತಲೂ, ಶಿವ ವಿಷ್ಣು ಇವರುಗಳಲ್ಲಿ ಭೇದವಿಲ್ಲದೇ ಸಮಾನ ಬುದ್ಧಿಯಿಂದ ಆರಾಧಿಸತಕ್ಕವರಾದ್ದರಿಂದ, ಅದ್ವೈತಿಗಳಿಗೆ ವಿಷ್ಣುದೇವಾಲಯಗಳಲ್ಲಿ ವೈಷ್ಣವರುಗಳಿಗೆ ಇರತಕ್ಕ ಬಾಧ್ಯತೆಯೂ ಇಲ್ಲವೆಂದು ಹೇಳಬಹುದೆ ? ಅಥವಾ ಒಂದುವೇಳೆ ಬ್ರಾಹ್ಮಣ ಮತದವರಲ್ಲಿ ಏರ್ಪಟ್ಟಿರುವ ಮೂರು ಮತದವರಿಗೂ, ಇತರ ಮತದವರುಗಳಲ್ಲಿ ಏರ್ಪಟ್ಟಿರುವಂತೆ ಪ್ರತ್ಯೇಕ ಪ್ರತ್ಯೇಕವಾಗಿ ಈ ಈ ಮತದವರಿಗೆ ಇಂತಿಂಥಾ ದೇವಸ್ಥಾನಗಳೆಂದು ಏನಾದರೂ ಏರ್ಪಟ್ಟಿರುತ್ತೆಧೆಯೇ ? ಹಾಗೆ ಏರ್ಪಟ್ಟಿರುವಲ್ಲಿ ವಿಷ್ಣುದೇವಾಲಯಗಳು ವೈಷ್ಣವರುಗಳದೆಂತಲೇ ಏರ್ಪಟ್ಟಿಧೆಯೇ ? ಅಥವಾ ಇತರ ಮತದವರುಗಳು ತಮ್ಮ ತಮ್ಮ ಮತದಲ್ಲಿ ತಮ್ಮ ಪ್ರಭೇದದವರುಗಳಿಗಾಗಿಯೇ ಸ್ವಂತವಾಗಿ ದ್ರವ್ಯ ವ್ರಯವನ್ನುಮಾಡಿ ಏರ್ಪಡಿಸಿಕೊಂಡಿರುವ ಮೇರೆ, ಏನಾದರೂ ವೈಷ್ಣವರುಗಳು ವಿಷ್ಣು ದೇವಾಲಯಗಳನ್ನು ತಮ್ಮ ಮತದವರಿಗಾಗಿಯೇ ಸ್ವಂತವಾಗಿ ಏರ್ಪಡಿಸಿಕೊಂಡಿರುವರೇ ? ಇಂಥಾದ್ದರಲ್ಲಿ ಯಾವದರಲ್ಲಿಯೂ ಶೇರದೆ ದೇವಸ್ಥಾನದ ವಿಷಯದಲ್ಲಿ ವೈಷ್ಣವರುಗಳು (ಅದ್ವೈತ ಮತಾಚಾರ್ಯರವರು ವಿಷ್ಣುದೇವಾಲಯಕ್ಕೆ ದಯಮಾಡಿಶಿದ್ದು ತಮ್ಮ ಮತರೀತ್ಯಾ ವಿರುದ್ಧವಾಯಿತೆಂತ) ಹೇಳತಕ್ಕದ್ದು ನ್ಯಾಯವೇ? ಎಂಬದನ್ನು ಗೌರ್ಮೆಂಟಿನಲ್ಲಿಯೇ ಪರ್ಯಾಲೋಚನೆಯಲ್ಲಿ ತರೋಣವಾಗಬೇಕು.

೨. ಬ್ರಾಹ್ಮಣ ಮತದವರಲ್ಲಿರತಕ್ಕ ಮೂರುಪ್ರಭೇದದವರೂ ವೇದಕ್ಕೆ ಕಟ್ಟುಬಿದ್ದವರಾಗಿಯೂ, ವೈದಿಕರೆಂದು ಹೇಳಿಸಿಕೊಳ್ಳತಕ್ಕವರಾಗಿಯೂ ಇರುತ್ತಾರೆ. ಆದರೆ, ಇವರೆಲ್ಲರೂ ವೇದವನ್ನು ಹ್ಯಾಗೆ ಸರ್ವಸಮ್ಮತವನ್ನಾಗಿ ಭಾವಿಸುತ್ತಾರೋ? ಹಾಗೆ, ಇತರ ಆಗಮಾದಿಗಳನ್ನು ಸರ್ವ ಸಮ್ಮತವಾದದ್ದನ್ನಾಗಿ ಭಾವಿಸುವದಿಲ್ಲ ; ಯಾಕೆಂದರೆ, ಆಗಮಗಳು ಗೌತಮಶಾಪಗ್ರಸ್ತರಾದ ಕೆಲವು ಬ್ರಾಹ್ಮಣರುಗಳು, ತಮಗೆ ಇದ್ದ ವೇದಾಧಿಕಾರವನ್ನು ಕಳದುಕೊಂಡ ಸಮಯದಲ್ಲಿ ಅಂಥವರುಗಳ ರಕ್ಷಣಾರ್ಥವಾಗಿ, ಈಶ್ವರನಿಂದಲೂ, ಶ್ರೀಮಹಾ ವಿಷ್ಣುವಿನಿಂದಲೂ, ಶೈವ, ವೈಷ್ಣವಾಗಮಗಳು ಹೇಳಲ್ಪಟ್ಟವಗಳಾಗಿ ಆಸ್ತಿಕರಿಂದ ಅಂಗೀಕರಿಸಲ್ಪಡುತ್ತಲಿರುವ ಸೂತಸಂಹಿತೆ, ಕೂರ್ಮಪುರಾಣ, ದೇವೀಭಾಗವತ, ಇತ್ಯಾದಿ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದರಿಂದ, ಯಲ್ಲವರಿಂದಲೂ, ಆಗಮ ಶಾಸ್ತ್ರಗಳು ಆದರಣೀಯವಾದ್ದಲ್ಲವೆಂಬುವದು ಸ್ಪಷ್ಟವಾಗಿಧೆ.

೩. ಆಗಮಿಕರುಗಳು ಹೇಳುವರೀತ್ಯಾ ವೈದಿಕರುಗಳು ಸ್ಥಿರಮೂರ್ತಿಗಳಾದ ಶಿವ ವಿಷ್ಣ್ವಾಲಯಗಳಲ್ಲಿ ಸ್ವಾರ್ಥವಾದ ಪೂಜೆಯನ್ನು ಮಾಡಬಾರದಾಗಿ ವೈದಿಕನಿಗೆ ಶಾಸ್ತ್ರಗಳಲ್ಲಿ ಉಕ್ತವಾಗಿಲ್ಲ ; ಪರಂತು, ವೈದಿಕನು ಚರಸ್ಥಿರ ಯರಡರಲ್ಲಿಯೂ ವೇದೋಕ್ತ ವಿಧಿಯಿಂದ ಪೂಜೆಮಾಡಬೇಕೆಂತಲೇ ಹೇಳಿಧೆ. ಮತ್ತು, ಆಗಮೋಕ್ತವಾಗಿ ಪೂಜಾದಿಗಳು ನಡಿಯುತ್ತಾ ಇದ್ದಾಗ್ಯೂ, ಆಗಮ ವಿಧಾನದಿಂದಲೇ ಪ್ರತಿಷ್ಟೆಮಾಡಲ್ಪಟ್ಟಿದ್ದಾಗ್ಯೂ, ಅಂಥಾ ಮೂರ್ತಿಗಳನ್ನು ವೈದಿ

ಕನು ವೇದೋಕ್ತ ವಿಧಾನದಿಂದ ಪೂಜೆಮಾಡಬೇಕಾಗಿ ಶಾಸ್ತ್ರಗಳಲ್ಲಿ ಹೇಳಿ ಇದೆ. ಮೇಲಿನ ಅಂಶಗಳಿಗೆ ಆಧಾರವಾದ ಶಾಸ್ತ್ರ ವಚನಗಳನ್ನು ಸನ್ನಿಧಾನದ ಪರಾಂಬರಿಕೆ ಬಗ್ಯೆ ಇದರೊಡನೆ ಹಾಜರ್ಮಾಡಿರುತ್ತೇವೆ.

೪. ಆಗಮಗಳು ಹುಟ್ಟಿದ ರೀತಿಯನ್ನು ಅರಿಕೆಮಾಡಿಕೊಂಡಿರುವದರಿಂದಲೇ, ಆಗಮಶಾಸ್ತ್ರರೀತ್ಯಾ ಅನುಷ್ಠಾನವನ್ನು ಮಾಡತಕ್ಕವನು ಆಗಮಿಕನೇ ಶಿವಾಯಿ ವೈದಿಕನಲ್ಲನೆಂಬದು ಸ್ಪಷ್ಟವಾಗುತ್ತದಾದ್ದರಿಂದ, ಅದರಲ್ಲಿ ಹೇಳಿರತಕ್ಕ ವಿಧಿನಿಷೇಧಗಳಿಗೂ, ಆ ಶಾಸ್ತ್ರವನ್ನು ಅವಲಂಬಿಸಿರತಕ್ಕವನೇ ವಿಷಯನಾಗುತ್ತಾನೆ. ಅದೀಕ್ಷಿತನೆಂತಲೂ, ವಿಷ್ಣುದೀಕ್ಷಾ ಬದ್ಧನಲ್ಲನೆಂತಲೂ, ಶೈವದೀಕ್ಷ ಬದ್ಧನಲ್ಲನೆಂತಲೂ, ಅವನಿಗೆ ಹೇಳಬೇಕೇ ಶಿವಾಯಿ ಅಂಥವುಗಳಿಗೆ ಯಾವಾಗ್ಯೂ ಬದ್ಧನಾಗದ ವೈದಿಕನಿಗೆ ಹೇಳುವದಕ್ಕಾಗುವದಿಲ್ಲ. ಆ ಶಾಸ್ತ್ರರೀತ್ಯಾ ದೀಕ್ಷಾದಿಗಳನ್ನು ಮಾಡಿಕೊಳ್ಳದ ತಾಂತ್ರಿಕನು, ದೀಕ್ಷಾದಿಕ್ರಮಗಳನ್ನು ಅನುಸರಿಸುವದಕ್ಕೆ ಪೂರ್ವದ ದೇವತಾಸ್ಪರ್ಶನ, ದೇವತಾರಾಧನೆಗಳನ್ನು ಮಾಡಿದರ್ರ, ತದ್ರೀತ್ಯಾ ಸಂಪ್ರೋಕ್ಷಣಾದಿಗಳು ಆಗಬೇಕೆಂಬದು ಸಹಜವಾಗಿರುತ್ತೆ.

೫. ಆಗಮ ಶಾಸ್ತ್ರವು ತಾಂತ್ರಿಕನಿಗೆ ಸಂಬಂಧಪಟ್ಟದ್ದೆಂತಲೂ, ವೈದಿಕನಿಗೆ ಸಂಬಂಧವಿಲ್ಲವಾಗಿ ಹೇಳದೇ ಇದ್ದರೆ, ವೇದಕ್ಕಿಂತಲೂ ಆಗಮವೇ ಪ್ರಬಲವಾದದ್ದೆಂತಲೂ, ವೈದಿಕನಿಗಿಂತಲೂ, ಆಗಮಶಾಸ್ತ್ರಾವಲಂಬಿಯೇ ಉತ್ತಮನೆಂತಲೂ, ಹೇಳಬೇಕಾಗುತ್ತೆ. ಹಾಗೆ ಹೇಳೋಣವು ಲೋಕಸಮ್ಮತವಾದೀತೆ ? ಹಾಗಿದ್ದರೆ, ಸರ್ವೋತ್ತಮವಾದಆಗಮಶಾಸ್ತ್ರವನ್ನೇ ಯಲ್ಲವರೂ ಅಂಗೀಕರಿಶಿ, ಅದರಂತೆನೇ ಅನುಷ್ಠಾನವನ್ನೂ ಮಾಡುತ್ತಾ ಬರುತ್ತಲಿದ್ದರು. ಈಗ ಲೋಕದಲ್ಲಿ, ತಾಂತ್ರಿಕರುಗಳು ವೈದಿಕರುಗಳಿಗಿಂತಲೂ ಬಹಳ ಸ್ವಲ್ಪ ಸಂಖ್ಯೆದವರೆಂಬದನ್ನು ಸಹಜವಾಗಿ ತಿಳಿಯಬಹುದಾಗಿಧೆ; ಹೀಗಿರುವದಕ್ಕೆ ಕಾರಣ ವೇನೆಂಬದನ್ನು ಘನವಾದ ಚಿತ್ತದಲ್ಲಿ ಪರಾಂಬಸೋಣವಾಗಬೇಕು.

೬. ಯಲ್ಲಾ ದೇಶಗಳಲ್ಲಿಯೂ, ಪ್ರಾಯೇಣ ತಾಂತ್ರಿಕರುಗಳೇ ಶಿವ ವಿಷ್ಣ್ವಾಲಯಗಳಲ್ಲಿ, ಪೂಜೆಮಾಡುತ್ತಾ ಬಂದಿರುವದರಿಂದ, ಆಗಮೋಕ್ತವಾದ ಪೂಜೆಯನ್ನೇ ಮಾಡಬೇಕೆಂಬದು ಶಾಸ್ತ್ರೀಯ ವಾದದ್ದೆಂತಲೂ, ಅದರಿಂದಲೇ ದೇವರುಗಳಿಗೆ ಪ್ರೀತಿಯುಂಟಾಗುತ್ತೆಂತಲೂ, ಇತರವೈದೀಕರುಗಳು ದೇವರನ್ನು ಆರಾಧಿಸಕೂಡದಾಗಿಯೂ, ದೇವರ ಸಮೀಪ ಪ್ರದೇಶಗಳಿಗೆ ಬರಕೂಡದಾಗಿಯೂ, ಹಾಗೆ ನಡೆದರೆ ದೇವರು ಅಶುದ್ಧನಾದನೆಂತಲೂ, ಹೀಗೆಲ್ಲಾ ತಾಂತ್ರಿಕರುಗಳು ದುರ್ವ್ಯವಹಾರಗಳನ್ನು ಮಾಡುವದಕ್ಕೆ ಅವಕಾಶ ಉಂಟಾಗಿರುತ್ತೆ, ಪ್ರಭುತ್ವವನ್ನು ವಹಾತತಕ್ಕ ರಾಜರುಗಳು ತಮ್ಮ ತಮ್ಮ ದೇಶದಲ್ಲಿರತಕ್ಕ ದೇವಾಲಯಗಳನ್ನು ಜೀರ್ಣೋದ್ಧಾರಮಾಡಿ, ಅವುಗಳಿಗೆ ಬೇಕಾದಷ್ಟು ದ್ರವ್ಯಗಳನ್ನುಕೊಟ್ಟು, ರಾಜ್ಯ ಮತ್ತೂ, ರಾಜ್ಯದಲ್ಲಿರತಕ್ಕ ಪ್ರಜೆಗಳ ಕ್ಷೇಮಾರ್ಥವಾಗಿ, ನಿತ್ಯದಲ್ಲಿಯೂ ಆರಾಧನೆಗಳನ್ನು ನಡಸುವ ಬಗ್ಯಾಗಿ ವೇತನಗಳನ್ನು ಏರ್ಪಡಿಸಿ ಪೂಜಕರುಗಳನ್ನು ನಿಯಮಿಸ ಬೇಕಾದ ಸಂದರ್ಭಗಳಲ್ಲಿ, ವೈದಿಕರುಗಳು (ಪರಾರ್ಥವಾಗಿ ವೇತನವನ್ನು ಪಡಕೊಂಡು ಪೂಜೆಮಾಡತಕ್ಕದ್ದು ಧರ್ಮಶಾಸ್ತ್ರ ಪುರಾಣಗಳರೀತ್ಯಾ ದೇವಲಕರಾಗಿ ಕರ್ಮಬಹಿಷ್ಕೃತರಾಗುತ್ತೇವೆಂಬದರಿಂದ) ಏರ್ಪಡದೆ, ತಾಂತ್ರಿಕರುಗಳು (ವೈದಿಕರು ಗಳಂತೆ ಯೋಚಿಸದೆ) ಪೂಜಾದಿಗಳನ್ನು ಮಾಡಿಕೊಂಡುಬರುವದಕ್ಕೆ ಅಂಗೀಕರಿಶಿರ ಬಹುದೇ ಶಿವಾಯಿ, ವೈದಿಕನಿಗಿಂತಲೂ ತಾಂತ್ರಿಕನು ಶ್ರೇಷ್ಠನೆಂತಾಗಲೀ, ವೇದಕ್ಕಿಂತಲೂ ತಂತ್ರವು ಶ್ರೇಷ್ಠವಾದದ್ದೆಂತಲಾಗಲೀ, ದೇವಸ್ಥಾನಗಳಲ್ಲಿ ಆಗಮೋ [illegible] ಹೇಳುವದಕ್ಕೆ ಯಾವವಿಧವಾದ ಆಧಾರಗಳೂ ಇಲ್ಲವಾಗಿವೆ.

೭. ತಾಂತ್ರಿಕಸ್ಥಳದಲ್ಲಿ, ವೈದಿಕರುಗಳು ಸ್ವಾರ್ಥವಾಗಿ ಪೂಜೆಮಾಡಬಹುದಾಗಿದ್ದರೂ, ಈಗ ಯಾತಕ್ಕೆ ಹಾಗೆ ನಡದು ಬರುವದಿಲ್ಲವಾಗಿಯೂ, ಅದರಿಂದಲೇ ಸ್ಥಿರಮೂರ್ತಿಗಳನ್ನು ಪೂಜಿಸುವದಕ್ಕೆ ವೈದಿಕರುಗಳು ಅಧಿಕಾರಿಗಳೇ ಅಲ್ಲವೆಂತಲೂ, ಹಾಗೆ ದೇವರುಗಳನ್ನು ಅರಾಧಿಸಿದರೆ ತಂತ್ರೋಕ್ತವಾದ ಸಂಪ್ರೋಕ್ಷಣೆಗಳು ಅಗಬೇಕಾಗಿ ತಾಂತ್ರಿಕರುಗಳು ಹೇಳತಕ್ಕ ಅಂಶಗಳಿಗೆ ಕಾರಣಗಳು, ತಾರ್ಕಿಕವಾದ ರಾಜನಿರ್ಬಂಧ ರೂಪವಾದ ಕಾರಣಗಳಾಗಿ ಹೇಳಬೇಕೆ ವಿನಹಾ, ಶಾಸ್ತ್ರೀಯ್ಯವಾದ್ದೆಂದು ಹೇಳುವದಕ್ಕೆ ಸಾಧ್ಯವಿಲ್ಲ. ಕೆಲ ಕೆಲವು ದೊಡ್ಡ ಪ್ರಸಿದ್ಧ ದೇವಾಲಯಗಳಲ್ಲಿ, ರಾಜರುಗಳಿಂದ ಕೊಡಲ್ಪಟ್ಟಿರುವ ಅನೇಕಾಭರಣಗಳು ವಗ್ಯೆರೆ ದೇವರುಗಳಿಗೆ ಧರಿಸತಕ್ಕ ಸಂಪ್ರದಾಯಗಳು ಏರ್ಪಟ್ಟಿರುವದರಿಂದ, ಕಾಲಾನುಗುಣ್ಯವಾಗಿ ಜನರುಗಳು ಪಾರಮಾರ್ಥಿಕಬುದ್ಧಿಯನ್ನು ಯೋಚಿಸಿ, ಅವುಗಳ ಸಂರಕ್ಷಣಾರ್ಥವಾಗಿ ಇಂಥಾ ನಿರ್ಬಂಧಗಳು ಏರ್ಪಟ್ಟಿರಬಹುದಾಗಿ ಹೇಳತಕ್ಕದ್ದಾಗಿದೆ. ಆಗಮ ದೀಕ್ಷಾಬದ್ಧರಲ್ಲದ ಮಠಾಚಾರ್ಯರುಗಳೂ ಅನೇಕ ಋಷಿಗಳೂ ಈಗ ಇರತಕ್ಕ ಆಚಾರ್ಯರೂ ಕೂಡಾ, ತಂತ್ರೋಕ್ತವಾಗಿ ಪೂಜೆನಡಿಯತಕ್ಕ ದೇವಸ್ಥಾನಗಳಲ್ಲಿ ಪೂಜಾದಿಗಳನ್ನು ಮಾಡುತ್ತಾ ಬಂದಿರುವದರಿಂದಲೇ, ಮೇಲಿನ ಅರ್ಥವನ್ನು ಸಹಜವಾಗಿ ನಿರ್ಧರಿಸಬಹುದಾಗಿದೆ.

